**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

# ಕರ್ನಾಟಕ ವಿಧಾನ ಪರಿಷತ್ತು

29ನೇ ಜನವರಿ 2021
ಶುಕ್ರವಾರ

## ವಿಷಯಾನುಕ್ರಮಣಿಕೆ

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

   **ಶಿವಮೊಗ್ಗ ಜಿಲ್ಲೆಯ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ, ಅಕ್ರಮವಾಗಿ ಸಂಗ್ರಹಿಸಿದ್ದ ಡೈನಾಮೆಟ್, ಜಿಲೆಟಿನ್ ಮತ್ತಿತರ ಸ್ಫೋಟಕಗಳು, ಸ್ಫೋಟಗೊಂಡ ಕಾರಣ 6 ಜನರು ದುರ್ಮರಣಗೊಂಡಿರುವ ಬಗ್ಗೆ.**

   – ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
   – ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

2. **ಪ್ರಕಟಣೆಗಳು**
3. **ಸಭೆಯ ಮುಂದಿಡಲಾದ ಕಾಗದಪತ್ರಗಳು**
4. **ನೂತನ ಸಚಿವರ ಪರಿಚಯ**
5. **ಕಾರ್ಯದರ್ಶಿಯವರ ವರದಿ**
6. **ವರದಿಯನ್ನೊಪ್ಪಿಸುವುದು**

   ದಿನಾಂಕ 15-12-2020ರಂದು ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ನಡೆದ ಅಹಿತಕರ ಘಟನೆ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿ, ವರದಿಯನ್ನು ನೀಡಲು ರಚಿಸಲಾದ ಸದನ ಸಮಿತಿಯ ಮಧ್ಯಂತರ ವರದಿ.

7. **ಉಪಸಭಾಪತಿ ಚುನಾವಣೆ**
8. **ಅಭಿನಂದನೆ**

   **ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪಸಭಾಪತಿಗಳಾಗಿ ಆಯ್ಕೆಗೊಂಡಿರುವ ಬಗ್ಗೆ.**

   – ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
   – ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
   – ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)

9. **ನೂತನ ಸಚಿವರ ಪರಿಚಯ**
10. **ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪಸಭಾಪತಿಗಳಾಗಿ ಆಯ್ಕೆಗೊಂಡ ಬಗ್ಗೆ ಮುಂದುವರೆದ ಅಭಿನಂದನೆ**

   – ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
   – ಶ್ರೀ ಅಡಗೂರ್ ಹೆಚ್.ವಿಶ್ವನಾಥ್

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಪ್ರತಾಪಸಿಂಹ ನಾಯಕ್.ಕೆ
- ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
- ಶ್ರೀ ಎನ್.ಅಪ್ಪಾಜಿಗೌಡ
- ಡಾ॥ ತೇಜಸ್ವಿನಿಗೌಡ
- ಶ್ರೀ ಎಂ.ಕೆ.ಪ್ರಾಣೇಶ್(ಉಪಸಭಾಪತಿಯವರು)

11. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**054–ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕುರಿತು**

- ಶ್ರೀ ಶಶಿಲ್ ಜಿ.ನಮೋಶಿ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**065–ಲಾಕ್‌ಡೌನ್ ವೇಳೆಯಲ್ಲಿ ಟ್ಯಾಕ್ಸಿ ಮತ್ತು ಆಟೋ ಚಾಲಕರಿಗೆ ಘೋಷಿಸಲಾದ ಪ್ಯಾಕೇಜ್ ಬಗ್ಗೆ**

- ಶ್ರೀ ಎಂ.ನಾರಾಯಣಸ್ವಾಮಿ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)

**059– ಬೀದರ್ ಜಿಲ್ಲೆಯ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳ ಬಗ್ಗೆ**

- ಶ್ರೀ ಅರವಿಂದಕುಮಾರ್ ಅರಳಿ
- ಶ್ರೀ ಶ್ರೀಮಂತ ಬಾಳಸಾಹೇಬ ಪಾಟೀಲ್ (ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**047–ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**028–ಬಿ.ಎಂ.ಟಿ.ಸಿ. ಬಸ್ಸುಗಳ ನಿಲ್ದಾಣ / ತಂಗುದಾಣಗಳ ಕುರಿತು**

- ಶ್ರೀ ಪಿ.ಆರ್.ರಮೇಶ್
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)

**051–ರಾಜ್ಯದಲ್ಲಿನ ವಿಕಲಚೇತನರಿಗಾಗಿ ನಡೆಸುತ್ತಿರುವ ಶಾಲೆಗಳ ಬಗ್ಗೆ**

- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
- ಶ್ರೀಮತಿ ಶಶಿಕಲಾ ಅ.ಜೊಲ್ಲೆ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**022–ಕೋವಿಡ್–19ರ ಹಿನ್ನೆಲೆಯಲ್ಲಿ ಬಡವರಿಗೆ ಕೂಲಿ ನೀಡುವ MGNAREGA ಯೋಜನೆಯಡಿಯಲ್ಲಿ ಪಂಚಾಯತಿವಾರು ಕ್ರಿಯಾಯೋಜನೆ ರೂಪಿಸುವ ಬಗ್ಗೆ**

- ಶ್ರೀ ಅಪ್ಪಾಜಿಗೌಡ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**016–ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಕುರಿತು**

- ಶ್ರೀ ಕೆ.ಹರೀಶ್‌ಕುಮಾರ್
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**005–ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಕುರಿತು**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಪ್ರಭು ವಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**035–ಕೊಡಗು ಜಿಲ್ಲೆಯಲ್ಲಿನ ಖಾಸಗಿ ಬಸ್ ಮಾಲೀಕರ ಬೇಡಿಕೆಗಳ ಕುರಿತು**

- ಶ್ರೀಮತಿ ವೀಣಾ ಅಚ್ಚಯ್ಯ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)

**060–ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಮಾಹಿತಿ ಕುರಿತು**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**12. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

(ಅ) ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಬೆಂಕಿ ಬಿದ್ದ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸುವ ಕುರಿತು.

- ಶ್ರೀ ಎಸ್.ವ್ಹಿ.ಸಂಕನೂರು
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಆ) ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಖಾಲಿ ಇರುವ ಎ,ಬಿ,ಸಿ ವೃಂದದ ವಿವಿಧ ಹುದ್ದೆಗಳಿಗೆ ಕೆಪಿಎಸ್‌ಸಿ ಮೂಲಕ ನೇಮಕಾತಿ ಪ್ರಕ್ರಿಯೆ ಮುಗಿದು 3–4 ವರ್ಷಗಳು ಕಳೆದರೂ ಆರ್ಥಿಕ ಮಿತವ್ಯಯ ನೆಪ ಮಾಡಿ ನೇಮಕಾತಿ ಆದೇಶಗಳನ್ನು ತಡೆಹಿಡಿದಿರುವ ಬಗ್ಗೆ.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಇ) ರಾಜ್ಯದಲ್ಲಿರುವ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರದಮೇಲೆ ಸೇವೆ ಸಲ್ಲಿಸುತ್ತಿರುವ 532 ಪ್ರಾಂಶುಪಾಲರು ಮತ್ತು ಶಿಕ್ಷಕರ ವೇತನವನ್ನು ಕಳೆದ 7 ತಿಂಗಳುಗಳಿಂದ ಬಿಡುಗಡೆ ಮಾಡದಿರುವ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**13. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮಂಡನೆ**

- ಶ್ರೀ ಆಯನೂರು ಮಂಜುನಾಥ್
- ಶ್ರೀ ಎಸ್.ವ್ಹಿ.ಸಂಕನೂರ

<><><>

(009)29-01-2021(12-30)ಬಿಎಸ್‌ಡಿ-ಆರ್‌ಎನ್

**ಕರ್ನಾಟಕ ವಿಧಾನ ಪರಿಷತ್ತು**

ಶುಕ್ರವಾರ, 29ನೇ ಜನವರಿ 2021

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ *11 ಗಂಟೆ 31 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ **(ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ)** ಅವರು ಪೀಠದಲ್ಲಿ ಉಪಸ್ಥಿತರಿದ್ದರು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯಃ ಶಿವಮೊಗ್ಗ ಜಿಲ್ಲೆಯ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ, ಅಕ್ರಮವಾಗಿ ಸಂಗ್ರಹಿಸಿದ್ದ ಡೈನಾಮೆಟ್, ಜಿಲೆಟಿನ್ ಮತ್ತಿತರ ಸ್ಫೋಟಕಗಳು ಸ್ಫೋಟಗೊಂಡ ಕಾರಣ 6 ಜನರು ದುರ್ಮರಣಗೊಂಡಿರುವ ಬಗ್ಗೆ**

.......

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದು, ಇವತ್ತು ಶುಕ್ರವಾರ ಇರುವುದರಿಂದ ಪ್ರಶ್ನೋತ್ತರ ವೇಳೆ ಯಾವಾಗ ಆಗುತ್ತದೆ ಎಂದು ಗೊತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**:– ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಪ್ರಶ್ನೋತ್ತರ ತೆಗೆದುಕೊಳ್ಳುವುದು ರೂಢಿಯಾಗಿದ್ದು, ಪ್ರಶ್ನೋತ್ತರ ನಂತರ ತೆಗೆದುಕೊಳ್ಳಬಹುದಾಗಿದೆ, ಅಲ್ಲದೇ ಸರ್ಕಾರವು ಚರ್ಚೆ ಮಾಡಲು ಸಿದ್ಧವಿದೆ.

**ಶ್ರೀ ಎಸ್.ಆರ್. ಪಾಟೀಲ್**:– ಪ್ರಶ್ನೋತ್ತರ ವೇಳೆ ನಡೆಯುತ್ತದೋ, ಇಲ್ಲವೋ ಎಂಬ ಜಿಜ್ಞಾಸೆ ಇರುವ ಸಂದರ್ಭದಲ್ಲಿ ಈಗ ನಾನು ಒಂದು ನಿಮಿಷ ಪ್ರಸ್ತಾಪಿಸುತ್ತೇನೆ. ತಾವು ಅದನ್ನು ನಿಯಮ 59ರಿಂದ ಬೇರೆ ನಿಯಮಕ್ಕೆ ಕನ್ವರ್ಟ್ ಮಾಡಿದರೂ...... ಅದರಲ್ಲಿ ಏನಿದೆ, ನಾನು ಹೆಡ್‌ಲೈನ್ ಮಾತ್ರ ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ**– ನಿಯಮ 59 ರ ವಿಷಯವನ್ನು ಪ್ರಶ್ನೋತ್ತರ ವೇಳೆ ಆದ ನಂತರ ತೆಗೆದುಕೊಳ್ಳಬೇಕೆಂದು ಸದನವೇ ಒಪ್ಪಿಕೊಂಡಿದೆ. ಮಾನ್ಯರು ಬಹಳ ಹಿರಿಯರಿದ್ದು, ದಯವಿಟ್ಟು ಪ್ರಶ್ನೋತ್ತರ ವೇಳೆಯ ನಂತರ ತೆಗೆದುಕೊಂಡರೆ ಸರ್ಕಾರವು ಸಹ ರೆಡಿ ಇದೆ. ಅವರು ಏನೇ ಹೇಳಿದರೂ ಸರ್ಕಾರ ಉತ್ತರ ಕೊಡಲು ರೆಡಿ ಇದೆ.

**ಶ್ರೀ ಎಸ್.ಆರ್. ಪಾಟೀಲ್** :– ನಾನು ಮಾನ್ಯ ಸಭಾನಾಯಕರಿಗಿಂತ ಮೊದಲು ಸಭಾನಾಯಕನ ಸ್ಥಾನವನ್ನು ಅಲಂಕರಿಸಿ ಕೆಲಸ ಮಾಡಿದ್ದೇನೆ. ಮಾನ್ಯ ಶಂಕರಮೂರ್ತಿಯವರು ಸಭಾಪತಿಯವರಾಗಿದ್ದಾಗ Business Advisory Committee ಯಲ್ಲಿ 5 ನಿಮಿಷಗಳ ಕಾಲ submission ಮಾಡಬಹುದು, ನಂತರ ನಿಲುವಳಿ ಸೂಚನೆ in detail and in depth ಬೇರೆ ರೂಪದಲ್ಲಿ ನಿಯಮ 68 ಕ್ಕೆ ಕನ್ವರ್ಟ್ ಆಗಬಹುದು ಅಥವಾ as it is ಅದರ ಚರ್ಚೆಯನ್ನು ಪ್ರಶ್ನೋತ್ತರ ವೇಳೆ ನಂತರ ಮಾಡಬಹುದು ಎಂದು ಹೇಳಿದ್ದಾರೆ. It is only a submission for a minute, ಇವತ್ತು ಅದು ಲ್ಯಾಪ್ಸ್ ಆಗಿ ಹೋಗಬಾರದು ಎನ್ನುವ ಸಲುವಾಗಿ ಹೇಳುತ್ತಿದ್ದೇನೆ. ನಾನು ಚರ್ಚೆ ಮಾಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಪ್ರಶ್ನೋತ್ತರ ಆದ ನಂತರ ತೆಗೆದುಕೊಳ್ಳಬಹುದು, ನಮ್ಮದೇನೂ ತೊಂದರೆ ಇಲ್ಲ. ಮಾನ್ಯ ಪ್ರತಿ ಪಕ್ಷದ ನಾಯಕರ ಚರ್ಚೆಗೆ......

**ಶ್ರೀ ಎಸ್.ಆರ್. ಪಾಟೀಲ್:-** ನಾನು ಚರ್ಚೆ ಮಾಡುವುದಿಲ್ಲ, ನಿಯಮ 59ರಡಿಯಲ್ಲಿ

"ಶಿವಮೊಗ್ಗ ಜಿಲ್ಲೆಯ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ ಅಕ್ರಮವಾಗಿ ಸಂಗ್ರಹಿಸಿದ್ದ ಡೈನಾಮೆಟ್, ಜಿಲೆಟಿನ್ ಮತ್ತಿತರ ಸ್ಫೋಟಕಗಳು, ಸ್ಫೋಟಗೊಂಡ ಕಾರಣ 6 ಜನರು ಮರಣ ಹೊಂದಿದ್ದಾರೆ. ಅನೇಕ ಮನೆಗಳು ಜಖಂ ಆಗಿವೆ.''

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರು ಅನುಮತಿ ಕೊಡದೇ ಇದ್ದರೂ ಪ್ರಸ್ತಾಪಿಸುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** " ಮನೆಗಳಲ್ಲಿದ್ದ ಜನರಿಗೂ ಸಹ ಗಾಯಗಳಾಗಿವೆ. ಪಶ್ಚಿಮ ಘಟ್ಟಗಳ ಅತ್ಯಂತ ಸೂಕ್ಷ್ಮ ಪ್ರದೇಶದಲ್ಲಿ ಸಂಭವಿಸಿದ ಈ ದುರಂತದ ಕುರಿತು ಹಾಗೂ ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಳ ವಿಷಯವು ಸಾರ್ವಜನಿಕವಾಗಿ ಮಹತ್ವದ್ದಾಗಿರುವುದರಿಂದ ದಿನಾಂಕ 29-01-2021ರಂದು ಸದನದಲ್ಲಿ ಪ್ರಸ್ತಾಪಸಿಲು ನಿಯಮ 59 ಮೇರೆಗೆ ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸುತ್ತಿದ್ದೇನೆ.'' ಏಕೆಂದರೆ ಇದು ಬಹಳ ಮಹತ್ವದ ವಿಷಯವಾಗಿದೆ.

**ಸಭಾಪತಿಯವರುಃ-** ಪ್ರಶ್ನೋತ್ತರ ವೇಳೆ ಮುಕ್ತಾಯವಾದ ನಂತರ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಅವರು ಹೇಳುವುದೆಲ್ಲವನ್ನೂ ಹೇಳಿ ಆಯಿತು.

**ಶ್ರೀ ಎಸ್.ಆರ್. ಪಾಟೀಲ್:-** ಏನೂ ಹೇಳಿಲ್ಲ, ಓದಿದೆ ಅಷ್ಟೇ.

## 2. ಪ್ರಕಟಣೆಗಳು

**ಸಭಾಪತಿಯವರುಃ-** ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡಲು ಈ ಕೆಳಕಂಡ ಹೆಸರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

1) ಶ್ರೀ ಮರಿತಿಬ್ಬೇಗೌಡ

2) ಶ್ರೀ ಕೆ.ಸಿ. ಕೊಂಡಯ್ಯ

3) ಶ್ರೀ ಅಡಗೂರು ಹೆಚ್. ವಿಶ್ವನಾಥ್

4) ಶ್ರೀ ಪುಟ್ಟಣ್ಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 222ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

1) ಮಾನ್ಯ ಉಪ ಸಭಾಪತಿಯವರು
2) ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಸಚಿವರು ಹಾಗೂ ಸಭಾನಾಯಕರು)
3) ಶ್ರೀ ಎಸ್.ಆರ್. ಪಾಟೀಲ್ (ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು)
4) ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರು)
5) ಶ್ರೀ ಎಂ. ನಾರಾಯಣ ಸ್ವಾಮಿ (ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರು)
6) ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ವಿಧಾನ ಪರಿಷತ್ತಿನ ಸದಸ್ಯರು)
7) ಶ್ರೀ ನಸೀರ್ ಅಹಮದ್ (ವಿಧಾನ ಪರಿಷತ್ತಿನ ಸದಸ್ಯರು)
8) ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಪರಿಷತ್ತಿನ ಸದಸ್ಯರು)
9) ಶ್ರೀ ಶಶಿಲ್ ಜಿ. ನಮೋಶಿ (ವಿಧಾನ ಪರಿಷತ್ತಿನ ಸದಸ್ಯರು)
10) ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)
11) ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಗೃಹ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನಾ ಸಮಿತಿಯ ಸದಸ್ಯರು)
12) ಮಾನ್ಯ ಸಭಾಪತಿಯವರು (ಅಧ್ಯಕ್ಷರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ೩. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

(ಪ್ರತಿ ಲಗತ್ತಿಸಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ನೂತನ ಸಚಿವರ ಪರಿಚಯ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರವಾಸೋದ್ಯ, ಜೈವಿಕ ಹಾಗೂ ಪರಿಸರ ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ್ ರವರ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಿದ್ದೇನೆ.

## 5. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಗಳು ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 2020
2) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020
3) ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಸುವ ವಿಧೇಯಕ, 2020
4) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020
5) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2020
6) ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020
7) ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕ, 2020
8) ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಸಂಕೀರ್ಣ ಉಪಬಂಧಗಳ (ನಿರಸಗೊಳಸುವ) ವಿಧೇಯಕ, 2020.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ವರದಿಯನ್ನೊಪ್ಪಿಸುವುದು

**ಶ್ರೀ ಮರಿತಿಬ್ಬೇಗೌಡ (ಅಧ್ಯಕ್ಷರು, ವಿಶೇಷ ಸದನ ಸಮಿತಿ)**:- ಮಾನ್ಯ ಸಭಾಪತಿಯವರೇ, ದಿನಾಂಕ 15-12-2020 ರಂದು ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ನಡೆದ ಅಹಿತಕರ ಘಟನೆಯ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿ, ವರದಿಯನ್ನು ನೀಡಲು ಸದನ ಸಮಿತಿ ರಚಿಸಲಾಗಿದ್ದು, ಸದನ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215ರ ರೀತ್ಯಾ ಮಧ್ಯಂತರ ವರದಿಯ ಜೊತೆಗೆ ಸರ್ಕಾರಿ ಹಾಗೂ ಖಾಸಗಿ ದೃಶ್ಯ ಮಾಧ್ಯಮಗಳ ಸಿ.ಡಿ ಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು**:- ವರದಿಯನ್ನೊಪ್ಪಿಸಲಾಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ಹಾಗೂ ಪೀಠದ ಬಗ್ಗೆ ಇಡೀ ಸದನ ಹಾಗೂ ಸರ್ಕಾರವು ಅತ್ಯಂತ ಗೌರವವಾದ ನಿಲುವಳಿ ಹೊಂದಿದೆ. ತಮ್ಮ ಸಹಮತಿಯೊಡನೆ ಈಗ ಮಂಡನೆಯಾಗಿರುವ ವರದಿಯನ್ನು ನಾವು ಓದಿಲ್ಲ. ಅದನ್ನು ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಅದರ ಚರ್ಚೆಗೆ ಕಾಲ ನಿಗದಿ ಮಾಡಿದರೆ ಸರ್ಕಾರವು ಚರ್ಚೆಗೆ ಸಿದ್ಧವಿದೆ. ಇವತ್ತು ಮಂಡನೆ ಮಾಡಿದ ನಂತರ ತಾವು ಮುಂದಿನ ಕಾರ್ಯಕಲಾಪವನ್ನು ಕೈಗೆತ್ತಿಕೊಳ್ಳಬೇಕೆಂದು ವಿನಂತಿಸುತ್ತೇನೆ.

(ಮುಂದು)

(10)/29.01.2021/11.40/ಹೆಚ್ಎಃವಿಕೆ

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಸನ್ಮಾನ್ಯ ಸಭಾಪತಿಯವರೇ, ಈಗ ಸದನದ ಮುಂದೆ ಮಂಡನೆ ಮಾಡಿರುವುದು ಸಮಿತಿಯ ಮಧ್ಯಂತರ ವರದಿಯಾಗಿದೆ. ಮಾನ್ಯ ಸಭಾ ನಾಯಕರು ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೇಳುತ್ತಿದ್ದಾರೆ. ಪೂರ್ತಿ ವರದಿ ಮಂಡನೆಯಾದ ನಂತರ ತಾವು ಚರ್ಚೆಗೆ ಅವಕಾಶವನ್ನು ಕೊಟ್ಟರೆ, ಆಗ ನಮ್ಮ ಅಭ್ಯಂತರವೇನೂ ಇರುವುದಿಲ್ಲ.

**ಸಭಾಪತಿಯವರು**:- ಮಾನ್ಯ ಸಭಾನಾಯಕರೇ, ಈಗ ಮಂಡನೆಯಾಗಿರುವುದು ಸಮಿತಿಯ ಮಧ್ಯಂತರ ವರದಿಯಾಗಿದೆ. ಇದರ ಮೇಲೆ ಚರ್ಚೆಗೆ ಅವಕಾಶವನ್ನು ಕೇಳುವುದು ಸರಿಯಲ್ಲ. ಏಕೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ಣ ವರದಿಯನ್ನು ಸದನಕ್ಕೆ ಸಲ್ಲಿಸುವವರೆವಿಗೂ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಪೂರ್ಣ ರೂಪದ ವರದಿ ಕೊಡುವವರೆವಿಗೂ ಅದರ ಮೇಲೆ ಚರ್ಚೆ ನಡೆಸುವುದು ಬೇಡವೆನ್ನುವುದು ನನ್ನ ಅನಿಸಿಕೆಯಾಗಿದೆ.

## 7. ಉಪ ಸಭಾಪತಿ ಚುನಾವಣೆ

**ಸಭಾಪತಿಯವರು:-** ಈಗ ಉಪ ಸಭಾಪತಿ ಚುನಾವಣೆಯನ್ನು ಕೈಗೆತ್ತಿಗೊಳ್ಳಲಾಗುವುದು. ನನ್ನ ಮುಂದೆ ನಾಲ್ಕು ಪ್ರಸ್ತಾವನೆಗಳು ಬಂದಿದ್ದು, ಅದರಲ್ಲಿ ಎರಡು ಪ್ರಸ್ತಾವನೆಗಳು ಮಾನ್ಯ ಎಂ.ಕೆ.ಪ್ರಾಣೇಶ್‌ರವರ ಹೆಸರನ್ನು ಸೂಚಿಸುತ್ತಿವೆ. ಉಳಿದ ಎರಡು ಪ್ರಸ್ತಾವನೆಗಳು ಮಾನ್ಯ ಕೆ.ಸಿ.ಕೊಂಡಯ್ಯನವರ ಹೆಸರನ್ನು ಸೂಚಿಸುತ್ತಿವೆ. ಈಗ ಈ ಪ್ರಸ್ತಾವನೆಗಳನ್ನು ಸಭೆಯ ಮುಂದೆ ಮಂಡಿಸಲಾಗುವುದು.

### ಮೊದಲನೆಯ ಪ್ರಸ್ತಾವ

**ಶ್ರೀ ಶಶಿಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಶಶಿಲ್ ಜಿ.ನಮೋಶಿಯವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

### ಎರಡನೆಯ ಪ್ರಸ್ತಾವ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಡಾ:ತೇಜಸ್ವಿನಿಗೌಡ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**<u>ಮೂರನೆಯ ಪ್ರಸ್ತಾವ</u>**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಶ್ರೀ ಕೆ.ಸಿ.ಕೊಂಡಯ್ಯ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಆರ್.ಪಾಟೀಲ್‌ರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು</u>**

**<u>ನಾಲ್ಕನೆಯ ಪ್ರಸ್ತಾವ</u>**

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಶ್ರೀ ಕೆ.ಸಿ.ಕೊಂಡಯ್ಯ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಶ್ರೀ ಅಲ್ಲಂ ವೀರಭದ್ರಪ್ಪನವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ಉಪ ಸಭಾಪತಿಗಳನ್ನಾಗಿ ಚುನಾಯಿಸುವುದು”

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಡಿವಿಜನ್‌ಗೆ ಒತ್ತಾಯಿಸುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭೆಯನ್ನು ವಿಭಜಿಸಿ ಮತಗಳ ಎಣಿಕೆ ಮಾಡಲಾಯಿತು**

**ಪರ : 41**

**ವಿರೋಧ : 24**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ಉಪ ಸಭಾಪತಿಯವರನ್ನಾಗಿ ಚುನಾಯಿಸಲಾಯಿತು.**

**( ಸಭಾ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ಶ್ರೀ ಶಶಿಲ್ ಜಿ.ನಮೋಶಿಯವರು ಮತ್ತು ಶ್ರೀ ರಘುನಾಥ್‌ರಾವ್ ಮಲ್ಕಾಪುರೆಯವರು ಉಪ ಸಭಾಪತಿಯವರ ಸ್ಥಾನಕ್ಕೆ ಆಯ್ಕೆಯಾದ ಸನ್ಮಾನ್ಯ ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ಉಪ ಸಭಾಪತಿಗಳ ಪೀಠದತ್ತ ಕರೆದುಕೊಂಡು ಹೋದರು. ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮಾನ್ಯ ಎಂ.ಕೆ.ಪ್ರಾಣೇಶ್‌ರವರನ್ನು ಹಾರ್ದಿಕವಾಗಿ ಬರಮಾಡಿಕೊಂಡು ಉಪ ಸಭಾಪತಿಯವರ ಪೀಠದಲ್ಲಿ ಕೂರಿಸಿದರು.)**

**ನೂತನ ಉಪ ಸಭಾಪತಿಯಾಗಿ ಆಯ್ಕೆಗೊಂಡ ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪ ಸಭಾಪತಿಗಳ ಪೀಠವನ್ನು ಅಲಂಕರಿಸಿದರು.**

(ಮುಂದುವರಿದಿದೆ)

(11) 29.1.2021 11.50 ಪಿಕೆ:ವಿಕೆ

(ಮಾನ್ಯ ಸಭಾಪತಿಗಳ ಉಪಸ್ಥಿತಿ)

**ಸಭಾಪತಿಯವರು:-** ನೂತನವಾಗಿ ಉಪಸಭಾಪತಿಗಳಾಗಿ ಚುನಾಯಿತರಾಗಿರತಕ್ಕಂಥ ಶ್ರೀ ಎಂ.ಕೆ. ಪ್ರಾಣೇಶ್‌ರವರನ್ನು ನಾನು ಅಭಿನಂದಿಸುತ್ತೇನೆ.

**೮. ಅಭಿನಂದನೆ**

**ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪಸಭಾಪತಿಗಳಾಗಿ ಆಯ್ಕೆಗೊಂಡಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಗೌರವಾನ್ವಿತ ಸಭಾಪತಿಯವರೇ, ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ತಾವು ಇವತ್ತು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉಪಸಭಾಪತಿಯವರ ಚುನಾವಣೆಯನ್ನು ಅತ್ಯಂತ ವ್ಯವಸ್ಥಿತವಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನಾಬದ್ಧವಾಗಿ, ಶಾಂತಿಯುತವಾಗಿ ಹಾಗೂ ನಿರಾಳವಾಗಿ ಮಾಡಿಕೊಟ್ಟಿದ್ದಕ್ಕಾಗಿ ನಾನು ಸರ್ಕಾರದ ಪರವಾಗಿ ತಮ್ಮ ಪೀಠಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರು ನಮ್ಮ ಮಧ್ಯೆ, ಸಾರ್ವಜನಿಕ ಜೀವನದಲ್ಲಿ ಬೆಳೆದವರು. ಒಂದು ದೃಷ್ಟಿಯಲ್ಲಿ ನೋಡಿದರೆ, ಕೆಲವರಿಗಿಂತ ತುಂಬಾ ಎಳೆಯರು. ಅವರು ಈ ಸದನಕ್ಕೆ ಬಂದ ದಿವಸದಿಂದ ಸದನದ ಕಲಾಪಗಳಲ್ಲಿ ತುಂಬಾ ಚಟುವಟಿಕೆಯಿಂದ ಭಾಗವಹಿಸುತ್ತಿದ್ದಾರೆ.

(ಮುಂದು . . .)

(12) 29–01–2021/12.00/ಡಿಎಸ್–ಬಿಎನ್‌ಎಸ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):–**

ಸಂಖ್ಯೆ ಕಡಿಮೆ ಇರುವುದರಿಂದ ಯಾರ್‍ಯಾರು ಇದ್ದಾರೆ ನಮ್ಮ ಮಧ್ಯೆ ಎಂದು ನಾನು ಹುಡುಕಾಡುತ್ತಿದ್ದೆ. ಆಗ ಮಾನ್ಯ ಪ್ರಾಣೇಶ್‌ರವರು ನನಗೆ ಎದ್ದು ಕಾಣಿಸಿದರು. ಹೀಗೆ ನಮ್ಮ ಮಧ್ಯೆ ಬೆಳೆದು ಇವತ್ತು ಉಪ ಸಭಾಪತಿ ಸ್ಥಾನದಂತಹ ಉನ್ನತ ಹುದ್ದೆಯನ್ನು ಅವರು ಏರಿದಾಗ ನನಗೆ ಆಶ್ಚರ್ಯ, ಸಂಭ್ರಮ ಮತ್ತು ಸಂತೋಷವಾಗುತ್ತದೆ. ಈ ಸದನದಲ್ಲಿ ಅಲ್ಲೋ ಇಲ್ಲೋ ಲೋಪಗಳಿರಬಹುದು, ಆದರೆ ಹಿರಿಯರ ಮನೆ ಎಂದು ಶತಮಾನಗಳಿಂದ ಇತಿಹಾಸ ಇರುವಂತಹ ಸದನ. ಕಾಲಕಾಲಕ್ಕೆ ನಮಗಿಂತ ಹಿರಿಯರು ಇದ್ದದ್ದನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ. ನಾನು ಈ ಸದನಕ್ಕೆ ಮೂರನೇ ಬಾರಿ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಿ ಬಂದಿರುತ್ತೇನೆ. ಆ ಸಂದರ್ಭದಲ್ಲಿ ನಾನು ಪ್ರಥಮವಾಗಿ ಬರುವಾಗ ಮಾನ್ಯ ನಾಣಯ್ಯನವರು ಎದುರುಗಡೆ ಕುಳಿತುಕೊಳ್ಳುತ್ತಿದ್ದರು. ಅವರು ಒಂದೊಂದು ವಿಷಯದ ಬಗ್ಗೆಯೂ ಆಳವಾಗಿರುವಂತಹ ಅಧ್ಯಯನ, ಅನುಭವಗಳು, ವಿಚಾರಗಳನ್ನು ಮಂಡಿಸಿರುವುದನ್ನು ನಾನು ಗಮನಿಸಿದ್ದೇನೆ. ಮಾನ್ಯ ನಾಣಯ್ಯನವರು ನಿರ್ಗಮಿಸಿದಾಗ ನಾಣಯ್ಯನವರು ಇಲ್ಲದಿರುವಂತಹ ಸದನದಲ್ಲಿ ಅನುಭವದ ಕೊರತೆಯಾಗುತ್ತದೆಯೇನೋ ಎಂದು ಅನೇಕರು ಹೇಳುತ್ತಿದ್ದರು. ಹೀಗೆ ಈ ಸದನಕ್ಕೆ ಅನೇಕರು ತಮ್ಮ ಅನುಭವಗಳನ್ನು ಕಟ್ಟಿಕೊಟ್ಟಿರುವುದನ್ನು ನಾವು ಇತಿಹಾಸದ ಉದ್ದಕ್ಕೂ ನೋಡುತ್ತಿದ್ದೇವೆ. ಹಿಂದೆ ಮಾನ್ಯ ತಂಗಾರವರು, ಡಾ॥ವಿ.ಎಸ್.ಆಚಾರ್ಯ, ಮಾನ್ಯ ಶಂಕರಮೂರ್ತಿಯವರು, ಮಾನ್ಯ ಎಚ್.ಕೆ.ಪಾಟೀಲ್‌ರವರು ಇದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಮೌಲ್ಯಾಧಾರಿತ ರಾಜಕಾರಣವನ್ನು ಎತ್ತಿಹಿಡಿದಿದ್ದರು. ನಮ್ಮ ರಾಜ್ಯದ ಮೂಲಕ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಎಚ್.ಡಿ.ದೇವೇಗೌಡರು ಇದ್ದರು. ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹಾಗೂ ಇನ್ನೂ ಅನೇಕರು ಈ ಸದನದಲ್ಲಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ರಮೇಶ್ ಕುಮಾರ್‌ರವರು ನನಗೊಂದು ಮಾತನ್ನು ಹೇಳಿದರು. ಕಾರ್ಮಿಕರ ಸಮಸ್ಯೆಗಳು ಬಂದಾಗ ಈ ಸದನದಲ್ಲಿ ನಿಯಮ 330 ರಡಿ ಮೂರೂವರೆ ಗಂಟೆಗಳ ಕಾಲ ಚರ್ಚೆಯಾಗಿತ್ತು, ಉತ್ತರ ಎಷ್ಟು ಹೊತ್ತು ಕೊಟ್ಟರು ಎಂದಲ್ಲ. ಅದು ಮೂರೂವರೆ ಗಂಟೆಗಳ ಕಾಲ ಪ್ರಸ್ತಾಪವಾಗಿತ್ತು. ಅಂದರೆ ಕಾರ್ಮಿಕರ ಬದುಕನ್ನು ಎಳೆ ಎಳೆಯಾಗಿ ಬಿತ್ತುವಂತಹ ವಿಚಾರಗಳು ಈ ಸದನದಲ್ಲಿ ಬಂದಿದ್ದವು. ಕೆಳಮನೆಯಲ್ಲಿ ಬಿಲ್ ಪಾಸ್ ಮಾಡಿಕೊಂಡ ಮಂತ್ರಿಗಳು ಮೇಲ್ಮನೆಗೆ ಬಂದಾಗ ತುಂಬಾ ಆತಂಕದಿಂದ ಬರುತ್ತಾರಂತೆ. ಏಕೆಂದರೆ, ಈ ಕಾಯ್ದೆಗಳಲ್ಲಿ ಒಂದೊಂದು ಎಳೆಯನ್ನು ವಿಶ್ಲೇಷಣೆ ಮಾಡಿ, ಸಮಸ್ಯೆಗಳನ್ನು ಹೇಳಿ ಸರ್ಕಾರವನ್ನು ಸರಿ ದಾರಿಗೆ ತರುವಂತಹ ಸದನ ಯಾವುದೆಂದರೆ ಅದು ಮೇಲ್ಮನೆ ಎಂದು ಹೇಳುವಂತಹ ಭಾವನೆಗಳಿವೆ. ಮೇಲ್ಮನೆಯಲ್ಲಿ ಬಿಲ್ ಪಾಸ್ ಆದಾಗ ಪರೀಕ್ಷೆಯಲ್ಲಿ ಗೆದ್ದಂತಹ ವಿದ್ಯಾರ್ಥಿಯೊಬ್ಬ ನಿರಾಳವಾಗಿ ಹೊರಗೆ ಹೋಗುವಂತಹ ಸ್ಥಿತಿ ಇದೆಯಲ್ಲಾ ಆ ರೀತಿ ಉತ್ತೀರ್ಣರಾಗಿ ಬರುವಂತಹ ಮಾನಸಿಕ ನೆಮ್ಮದಿ ಮಂತ್ರಿಗಳಿಗೆ ಸಿಗುತ್ತದೆ ಎಂದು ನಾವು ಅನೇಕ ಹಿರಿಯರಿಂದ ಕೇಳಿದ್ದೇವೆ. ಹಾಗಾಗಿ ಈ ಮೇಲ್ಮನೆಯ ಸದನಕ್ಕೆ ತನ್ನದೇ ಆದ ಘನತೆ, ಗೌರವಗಳಿವೆ. ನಮ್ಮ ಮಧ್ಯೆ ಬೆಳೆದಂತಹ ಪ್ರಾಣೇಶ್‌ರವರು ಇವತ್ತು ಉಪ ಸಭಾಪತಿಯವರಾಗಿ ಆಯ್ಕೆಯಾಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ತುಂಬಾ ಸವಾಲುಗಳು, ಸಮಸ್ಯೆಗಳನ್ನು ಮೆಟ್ಟಿ ನಿಂತು ಈ ಸದನಕ್ಕೆ ಬಂದು ಪ್ರಥಮ ಅವಧಿಯಲ್ಲಿ ಉಪ ಸಭಾಪತಿಯಾದಂತಹ ಪ್ರಾಣೇಶ್‌ರವರು ಅತ್ಯಂತ ಜಾಗರೂಕತೆಯಿಂದ ಹೆಜ್ಜೆ ಇಡಲಿ. ಅವರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತಹ ಮನಸ್ಥಿತಿಯುಳ್ಳವರು. ಅವರಿಗೆ ಬೇಕಾದಂತಹ ಎಲ್ಲಾ ಮಾರ್ಗದರ್ಶನವನ್ನು ನಮ್ಮ ಎಲ್ಲಾ ಪಕ್ಷದವರು ಒಟ್ಟಾಗಿ ಕೊಡೋಣ. ಅವರು ಇವತ್ತು ಉಪ ಸಭಾಪತಿ ಹುದ್ದೆಗೇರುವ ಮೂಲಕ ಸರ್ವರನ್ನು ಸಮಾನತೆಯಿಂದ ಕಾಣುವ ಮೂಲಕ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತಹ ಮತ್ತು ಈ ಸದನದಲ್ಲಿ ಪೀಠದಲ್ಲಿದ್ದಾಗ, ಸಭಾಪತಿ ಸ್ಥಾನದಲ್ಲಿದ್ದಾಗ ಅತ್ಯಂತ ಯೋಜನಾಬದ್ಧವಾಗಿ ಈ ಸದನವನ್ನು ನಡೆಸುವಂತಹ ಶಕ್ತಿ ಅವರಿಗೆ ದೇವರು ಕೊಡಲಿ ಎಂದು ಹಾರೈಸುತ್ತೇನೆ. ಮತ್ತೊಮ್ಮೆ ಈ ಚುನಾವಣೆಯನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಿಕೊಟ್ಟಿರುವುದಕ್ಕೋಸ್ಕರ ಸರ್ವಪಕ್ಷದ ಎಲ್ಲಾ ಶಾಸಕರಿಗೆ, ಮುಖಂಡರಿಗೆ, ವಿಶೇಷವಾಗಿ ಸಭಾಪತಿಯವರಾದ ತಮಗೆ ಧನ್ಯವಾದಗಳನ್ನು ಹೇಳಿ ಮಾನ್ಯ ಪ್ರಾಣೇಶ್‌ರವರಿಗೆ ಶುಭ ಹಾರೈಸುತ್ತೇನೆ, ಧನ್ಯವಾದಗಳು, ನಮಸ್ಕಾರ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಇಲಾಖೆ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಉಪ ಸಭಾಪತಿ ಚುನಾವಣೆಯನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಎಲ್ಲರನ್ನು ತಾವು ವಿಶ್ವಾಸಕ್ಕೆ ತೆಗೆದುಕೊಂಡು ಈ ಮನೆಯ ಘನತೆ, ಗೌರವಕ್ಕೆ ತಕ್ಕಹಾಗೆ ಚುನಾವಣೆಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸಿ ಕೊಟ್ಟಿದ್ದೀರಿ. ತಮಗೆ ನನ್ನ ಹೃದಯಪೂರ್ವಕವಾದ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅದೇ ರೀತಿ ಈ ಚುನಾವಣೆಯನ್ನು ಒಂದು ಮಾದರಿಯಾಗಿರುವಂತಹ ರೀತಿಯಲ್ಲಿ ತಾವೆಲ್ಲರೂ ಸೇರಿ ನಡೆಸಿ ಕೊಟ್ಟಿದ್ದೀರಿ. ಈ ಸದನದ ಆ ಕಡೆ, ಈ ಕಡೆ ಎಲ್ಲಾ ಸದಸ್ಯರುಗಳಿಗೂ ಕೂಡ ನಾನು ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಾನ್ಯ ಪ್ರಾಣೇಶ್‌ರವರ ಬಗ್ಗೆ ನಮ್ಮ ಸಭಾನಾಯಕರು ಎಲ್ಲಾ ಹೇಳಿದ್ದಾರೆ. 'ಪ್ರಾಣೇಶ್' ಎಂದರೆ, ನಿಜವಾಗಿಯೂ ಕೂಡ 'ಪ್ರಾಣಕ್ಕೆ ಪ್ರಿಯವಾಗಿರುವಂತಹ ಒಬ್ಬ ಈಶ್ವರ.' ಹೀಗಾಗಿ ಅವರ ಹೆಸರು 'ಪ್ರಾಣೇಶ್' ಎಂದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಯಾರ ಪ್ರಾಣಕ್ಕೆ ಎಂದು ಕೇಳುತ್ತಿದ್ದೇನೆ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಎಲ್ಲರ ಪ್ರಾಣಕ್ಕೂ ಕೂಡ ಈಶ್ವರ. ಆ ಈಶ್ವರಿನಿಗೆ ಒಬ್ಬ ಪಾರ್ವತಿ ಇದ್ದಾಳೆ. ಹಾಗಾಗಿ ಮಾನ್ಯ ಪ್ರಾಣೇಶ್‌ರವರನ್ನು ನಾನು ಮೊದಲ ಬಾರಿಗೆ ನೋಡಿದಾಗ ಅವರ ಚಟುವಟಿಕೆ, ಅವರ ಮಾತು, ವಿನಯ, ಇದೆಲ್ಲವನ್ನೂ ಗಮನಿಸಿ ಒಂದು ರೀತಿಯಲ್ಲಿ ನನಗೆ ಬಹಳ ಸಂತೋಷವಾಯಿತು. ಚಿಕ್ಕಮಗಳೂರು ಜಿಲ್ಲೆಯ ಸೌಜನ್ಯದ ಸೊಗಡು ಅವರಲ್ಲಿ ಕಾಣುತ್ತಿತ್ತು. ಅವರು ವಿಧಾನ ಪರಿಷತ್ತಿಗೆ ಆಯ್ಕೆಯಾದಾಗ ಸಂತೋಷಪಟ್ಟವರಲ್ಲಿ ನಾನೂ ಕೂಡ ಒಬ್ಬ. ಹಲವಾರು ಪ್ರಸಂಗಗಳಲ್ಲಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಿದ್ದೇವೆ. ಅವರು ಬಂದಿರುವಂತಹ ಹಿನ್ನೆಲೆ, ಸಂಸ್ಕೃತಿ, ಸಂಘಟನೆಯ ಪ್ರಭಾವ ಎಲ್ಲವೂ ಮೈಗೂಡಿಸಿಕೊಂಡು ಜನಪರವಾದಂತಹ ನಿಲುವನ್ನು ಸದನದೊಳಗೆ, ಸದನದ ಹೊರಗಡೆ ಸದಾ ತೆಗೆದುಕೊಂಡು ಬಂದಿದ್ದಾರೆ. ಜಿಲ್ಲೆಯಲ್ಲೂ ಹಲವಾರು ವಿಚಾರಗಳಿಗೆ ಅವರು ಜನರ ಧ್ವನಿಯಾಗಿ ಕೆಲಸ ಮಾಡಿದ್ದಾರೆ. ಈ ಮೇಲ್ಮನೆ ಸದನದ ಬಗ್ಗೆ ಹೇಳಬೇಕಾದರೆ, ನಾನೂ ಕೂಡ ಇಲ್ಲಿ ಎರಡು ಅವಧಿಯಲ್ಲಿ 12 ವರ್ಷಗಳ ಕಾಲ ಕೆಲಸ ಮಾಡುವಂತಹ ಸೌಭಾಗ್ಯ ನನಗೆ ಸಿಕ್ಕಿದೆ. ಇದಕ್ಕೆ ತನ್ನದೇ ಆದಂತಹ ಮಹತ್ವವಿದೆ. ಯಾವ ದೇಶದಲ್ಲಿ ಪ್ರಜಾಪ್ರಭುತ್ವ ಆಳವಾಗಿ ಬೇರೂರಿದೆಯೋ, ಆ ಮೌಲ್ಯವನ್ನು ಆ ದೇಶ ಉಳಿಸಿಕೊಂಡು ಬಂದಿದೆಯೋ ಅಲ್ಲಿ ದ್ವಿಸದನ ವ್ಯವಸ್ಥೆ ಇದೆ. ಇನ್ನು ಕೆಲವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದ್ವಿಸದನ ವ್ಯವಸ್ಥೆ ಇಲ್ಲ. ಅದೇ ರೀತಿ ನಮ್ಮ ದೇಶದಲ್ಲಿ ಯಾವುದು ಪ್ರಗತಿಪರವಾದಂತಹ ರಾಜ್ಯವಿದೆ ಅಲ್ಲಿ ನಾವು ದ್ವಿಸದನವನ್ನು ನೋಡುತ್ತೇವೆ. ಇನ್ನು ಕೆಲವು ರಾಜ್ಯಗಳಲ್ಲಿ ಇಲ್ಲ. ದ್ವಿಸದನ ಏಕೆ ಇರಬೇಕೆನ್ನುವುದರ ಬಗ್ಗೆ ಹಿಂದೆ ಬಹಳ ದೊಡ್ಡ ವಾದ ವಿವಾದಗಳೆಲ್ಲಾ ಆಗಿವೆ. ಯಾವುದಾದರೊಂದು ಶಾಸನಸಭೆಯಲ್ಲಿ ನಿರ್ಣಯಗಳಾದಂತಹ ಸಂದರ್ಭಗಳಲ್ಲಿ ಅದಕ್ಕೆ ಇನ್ನೊಂದು ಪರಾಮರ್ಶೆ, ಇನ್ನೊಂದು angle ನಲ್ಲಿ ನೋಡುವಂತಹ ಒಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆ ಬೇಕು. ಆ ಹಿನ್ನೆಲೆಯಲ್ಲಿ ಕೇವಲ ಮೆಜಾರಿಟಿ ಮೇಲೆ ಅಲ್ಲ, ಒಂದು conscious decision ಗಳಾಗಬೇಕು ಎನ್ನುವಂತಹ ಒಂದು ನೀತಿಯಿಂದ ಇವತ್ತು ದ್ವಿಸದನ ಆಗಿದೆ. ಒಂದು ಗುರುತರವಾದಂತಹ, ಜವಾಬ್ದಾರಿ ಕೂಡ ಈ ಸದನಕ್ಕೆ ಇದೆ. ಅದೇ ರೀತಿ ಈ ಸದನದ ಗೌರವ ಬಹಳ ಎತ್ತರದಲ್ಲಿದೆ ಎನ್ನುವುದನ್ನು ನಾವೆಲ್ಲರೂ ಸಂತೋಷದಿಂದ ಒಪ್ಪಿಕೊಂಡು ನಡೆದುಕೊಳ್ಳಬೇಕಾಗಿದೆ.

ಈಗ His Excellency Governor ಆದ ನಂತರ ಶಿಷ್ಟಾಚಾರದಲ್ಲಿ ಎರಡನೇ ಸ್ಥಾನ ನಮ್ಮ ವಿಧಾನ ಪರಿಷತ್ತಿನ ಸಭಾಪತಿಯವರಿಗಿದೆ. ಅಷ್ಟು ಮಹತ್ವವನ್ನು ಇವತ್ತು ಈ ಸದನ ಪಡೆದಿದೆ. ಈ ಮಹತ್ವವನ್ನು ನಾವು ಉಳಿಸಿಕೊಂಡು ಹೋಗಬೇಕಾಗಿದೆ ಮತ್ತು ಜನರ ಧ್ವನಿಯಾಗಿ ನಾವು ಕೆಲಸ ಮಾಡಬೇಕು. ವಿಶೇಷವಾಗಿ ಅಲ್ಲಿ ಯಾರ representation ಆಗುವುದಿಲ್ಲ, ಅಂತಹವರಿಗೆ ಇಲ್ಲಿ ಅವಕಾಶ ಕೊಡುವಂತಹ ವ್ಯವಸ್ಥೆಯಾಗಿದೆ. ಪದವೀಧರರ ಕ್ಷೇತ್ರ, ಶಿಕ್ಷಕರ ಕ್ಷೇತ್ರ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ನಾಮನಿರ್ದೇಶನದ ಮೂಲಕ ಬೇರೆ ಕ್ಷೇತ್ರದಲ್ಲಿ ಸೇವೆ ಮಾಡಿದಂಥವರು ಇರಬಹುದು, ವಿಧಾನಸಭಾ ಕ್ಷೇತ್ರದಿಂದ ಬಂದವರಿರಬಹುದು. ಹೀಗಾಗಿ ರಾಜಕೀಯವಾಗಿ, ಸಾಮಾಜಿಕವಾಗಿ ಎಲ್ಲಿ ಸೇವಾಕಾಂಕ್ಷಿಗಳು ಉತ್ತಮವಾಗಿ ಸಾಧನೆ ಮಾಡಿದಂಥವರಿಗೆ ಇಲ್ಲಿ ಅವಕಾಶ ಇದೆ. The contribution of this House is very important. ಆದ್ದರಿಂದ ಆ ಕೆಲಸ ಆಗಬೇಕಾಗಿರುವಂಥದ್ದು ಬಹಳ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಅಲ್ಲದೆ ಸಭಾಪತಿ ಮತ್ತು ಉಪ ಸಭಾಪತಿಗಳ ನಡುವೆ ಅನ್ಯೋನ್ಯವಾಗಿರುವಂತಹ ಒಂದು ಸಂಬಂಧದ ಅವಶ್ಯಕತೆ ಕೂಡ ಬಹಳ ಇದೆ. ಹಲವಾರು ವಿಚಾರಗಳಲ್ಲಿ, ಹಲವಾರು ಸಂದರ್ಭಗಳಲ್ಲಿ ಬಹಳಷ್ಟು ಭಿನ್ನಭಿನ್ನ ವಿಚಾರಗಳು ಬಂದಾಗ, the Chair has to lead the whole thing. ಹೀಗಾಗಿ ಉಪ ಸಭಾಪತಿ ಕುಳಿತಂತಹ ಸಂದರ್ಭದಲ್ಲಿ ಅಥವಾ ಸಭಾಪತಿಯವರು ಕುಳಿತಂತಹ ಸಂದರ್ಭದಲ್ಲಿ, the Chair should have a similar view. ಅದು ರೂಲ್ಸ್‌ನ್ನು, ಸಂವಿಧಾನವನ್ನು ಮತ್ತು practices ನ್ನು ಫಾಲೋ ಮಾಡುವಂತಹ ಒಂದು bonding. ಇದು ಇವರಿಬ್ಬರ ನಡುವಿನ ಸಂಬಂಧ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಒಂದು bonding ಇದೆ. ಮಾನ್ಯ ಸಭಾಪತಿಯವರು ನನಗೆ ಬಹಳ ಹಳೆಯ ಸ್ನೇಹಿತರು. ಅವರು ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದಾರೆ, ಆಡಳಿತ ಪಕ್ಷದಲ್ಲಿಯೂ ಕೆಲಸ ಮಾಡಿದ್ದಾರೆ. ಅವರ ನಿಲುವುಗಳು ನಮಗೆ ಗೊತ್ತಿದೆ. ಅವರು ಬಹಳ ಉನ್ನತ ಮಟ್ಟದ ಸಾರ್ವಜನಿಕ ಜೀವನವನ್ನು ನಡೆಸಿರುವಂತಹ ವ್ಯಕ್ತಿಗಳು. ಅದೇ ರೀತಿ ಪ್ರಾಣೇಶ್ ಕೂಡ ಒಬ್ಬ ಯುವಕ. ಹೀಗಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಒಂದು ಸಿದ್ಧಾಂತದಿಂದ ಮತ್ತು ಜನಪರವಾದಂತಹ ಕೆಲಸ ಮಾಡುವುದರ ಮುಖಾಂತರ ಅವರಿಬ್ಬರ ನಡುವೆ ಒಳ್ಳೆಯ ಸಂಬಂಧ ಇರಲಿ.

(13)ದಿನಾಂಕ:29-1-2021/12-10/ಬಿಕೆಪಿ-ಬಿಎನ್ಎಸ್

**ಶ್ರೀಬಸವರಾಜ ಬೊಮ್ಮಾಯಿ(ಮುಂದು.**

ಮತ್ತೆ, ಮುಂದೆ ನಡೆಯುವಂತಹ ಕಾರ್ಯಕಲಾಪಗಳಲ್ಲಿ ಚರ್ಚೆ ಮಾಡೋಣ. ಅಭಿಪ್ರಾಯ ಇರಬೇಕು, ಬಿನ್ನಾಭಿಪ್ರಾಯ ಇರಬೇಕು. ಈಗ, 'dissent is the essence of democracy' ಎಂದು ಏನು ಹೇಳುತ್ತೇವೆ ಅದನ್ನು ಒಪ್ಪಿಕೊಳ್ಳುತ್ತಾ, discussion is necessity of democracy. Dissent ಗೆ ನಿಲ್ಲಬಾರದು, dissent ಆದಮೇಲೆ, ಚರ್ಚೆಯಾಗಿ ಒಂದು ಇತ್ಯರ್ಥಕ್ಕೆ ಬರುವಂತಹ ಒವಂದು ಪದ್ಧತಿ ಏನಿದೆ, ಇದನ್ನು letter and spirit ನಲ್ಲಿ ಮಾಡುವಂತಹ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ. ನಾನು ಹೊಸದಾಗಿ ಕಾನೂನು ಮತ್ತು ಸಂಸದೀಯ ಸಚಿವನಾಗಿದ್ದೇನೆ. ನಾನು ಕಾನೂನನ್ನು ಪಾಲನೆ ಮಾಡುವಂತಹದ್ದು ಮತ್ತು law enforcing and law making ಎನ್ನುವಂತಹ ಎರಡು ಗುರುತರವಾದ ಜವಾಬ್ದಾರಿ ನನ್ನ ಮೇಲೆ ಇದೆ. ಹೀಗಾಗಿ, ಈ ಸದನ ಮತ್ತು ಆ ಸದನ ಒಟ್ಟಾಗಿ ಎರಡು ಸದನಗಳ ಸಹಕಾರ ಬಹಳ ಮುಖ್ಯ. ಇದಕ್ಕೆ ತಮ್ಮ ಸಂಪೂರ್ಣವಾದ ಸಹಕಾರ ಇರಬೇಕು. ನಾನು ಸಂಸದೀಯ ಸಚಿವನಾಗಿ, ಈ ಸದನದ ಪರಂಪರೆ ಮತ್ತು ಈ ಸದನದ ನಿಯಮಾವಳಿಗಳು ಇವೆಲ್ಲವನ್ನೂ ಎತ್ತಿ ಹಿಡಿಯುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಹೀಗಾಗಿ, ಇವತ್ತು ಉಪ ಸಭಾಪತಿಯವರ ಚುನಾವಣೆ ಬಹಳ ಉತ್ತಮ ರೀತಿಯಲ್ಲಿ ಆಗಿದ್ದು, ಮುಂದೆ ಬರುವಂತಹ ಎಲ್ಲಾ ಕಾರ್ಯಕಲಾಪಗಳಿಗೆ ಒಂದು ಮಾದರಿಯಾಗಿದೆ. ಅದೇ ರೀತಿ ಎಲ್ಲಾ ಕೆಲಸಗಳಲ್ಲಿ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಿ, ಬಗೆಹರಿಸಿಕೊಂಡು ಒಂದಾಗಿ ಹೋಗುವಂತಹ ಕೆಲಸವನ್ನು ಎಲ್ಲರೂ ಮಾಡೋಣ. ಕೆಲವು ಘಟನೆಗಳು ನಡೆದಿವೆ. ಅದರ ಬಗ್ಗೆ ನಮಗೆಲ್ಲರಿಗೂ ವಿಷಾದವಿದೆ. ಆ ರೀತಿ ಆಗಬಾರದು. ನಮ್ಮ ಗೌರವವನ್ನು ನಾವೇ ಎತ್ತಿಹಿಡಿಯಬೇಕೇ ಹೊರತು, ಇನ್ನೊಬ್ಬರು ಯಾರೇ ಆಗಲಿ ಎತ್ತಿ ಹಿಡಿಯಲಿಕ್ಕೆ ಸಾಧ್ಯವಿಲ್ಲ. ನಾವುಗಳು ಸಮಾಜದಲ್ಲಿ, ಸರ್ಕಾರದಲ್ಲಿ, ವ್ಯವಸ್ಥೆಯಲ್ಲಿ ತಪ್ಪು ಕಂಡು ಹಿಡಿಯುವವರು. ನಾವೇ ಆ ಸ್ಥಾನದಲ್ಲಿ ನಿಲ್ಲುವಂತಹ ಕೆಲಸಗಳನ್ನು ನಾವುಗಳೂ ಯಾರು ಸಹ ಮಾಡಬಾರದು. ನಾನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಕಡೆ, ಈ ಕಡೆ ಎಂದು ಮಾತನಾಡುತ್ತಿಲ್ಲ. ನಮಗೆಲ್ಲರಿಗೂ ಸಮೂಹಿಕ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ನಾವೆಲ್ಲರೂ ನಿರ್ವಹಣೆ ಮಾಡಿಕೊಂಡು ಹೋಗೋಣ. ನನ್ನ ಮತ್ತು ನಮ್ಮ ಸರ್ಕಾರದ ಹಾಗೂ ನಮ್ಮ ಸದಸ್ಯರ ಸಂಪೂರ್ಣವಾದ ಸಹಕಾರ ಈ ಸದನಕ್ಕೆ ಇರುತ್ತದೆ. ತಾವು ಕೂಡ ಸಹಕಾರ ಮಾಡಿ. ಶ್ರೀ. ಎಂ.ಕೆ. ಪ್ರಾಣೇಶ್ ರವರ ಆಯ್ಕೆ ಮುಂದಿನ ದಿನಗಳಲ್ಲಿ ಸುಗಮವಾಗಿ ಕಾರ್ಯಕಲಾಪಗಳು ನಡೆಯುವುದಕ್ಕೆ ನಾಂದಿಯಾಗಲಿ ಎಂದು ನಾನೂ ಕೂಡ ಹಾರೈಸಿ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ, ಮತ್ತೊಮ್ಮೆ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**(ಈ ಹಂತದಲ್ಲಿ ನೂತನ ಸಚಿವರಾಗಿ ಆಯ್ಕೆಯಾಗಿ ಸದನಕ್ಕೆ ಹಾಜರಾಗಿರುವ ಶ್ರೀ ಅರವಿಂದ ಲಿಂಬಾವಳಿ ಅವರನ್ನು ಮಾನ್ಯ ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ಸದನಕ್ಕೆ ಪರಿಚಯ ಮಾಡಿಕೊಟ್ಟರು)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಚಿಂತಕರ ಭಾವಡಿಯಲ್ಲಿ ಉಪ ಸಭಾಪತಿ ಚುನಾವಣೆಯನ್ನು ತಾವು ಬಹಳಷ್ಟು ಮುತವರ್ಜಿ ವಹಿಸಿ, ನ್ಯಾಯಸಮ್ಮತವಾಗಿ, ನಿಷ್ಪಕ್ಷಪಾತವಾಗಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ದಿಸೆಯಲ್ಲಿ ತಾವು ಅತ್ಯುತ್ತಮ ರೀತಿಯಿಂದ ನಡೆಸಿಕೊಟ್ಟಿದ್ದೀರಿ, ತಮಗೆ ವಿಶೇಷವಾದಂತಹ ಕೃತಜ್ಞತೆಗಳನ್ನು ಮತ್ತು ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಬಯಸುತ್ತೇನೆ. ತಮ್ಮ ವ್ಯಕ್ತಿತ್ವವೂ ಹಾಗೆಯೇ ಇದೆ. ಒಬ್ಬ ವ್ಯಕ್ತಿ ಕುರ್ಚಿಯ ಮೇಲೆ ಕುಳಿತಾಗ, ಆ ಕುರ್ಚಿಗಿಂತ ಎತ್ತರಕ್ಕೆ ಏರಬೇಕೆಂದು ಹೇಳುತ್ತಾರೆ. ಆ ವ್ಯಕ್ತಿಯಿಂದ ಕುರ್ಚಿಗೆ ಗೌರವ ಬರಬೇಕೇ ಹೊರತು, ಕುರ್ಚಿಯಿಂದ ವ್ಯಕ್ತಿಗೆ ಗೌರವ ಬರಬಾರದು ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಆ ದಿಸೆಯಲ್ಲಿ ತಾವು ತಮ್ಮ ಸ್ಥಾನಕ್ಕಿಂತ ಹಿರಿದಾದ ವ್ಯಕ್ತಿತ್ವದಿಂದ ಆ ಪವಿತ್ರವಾದ ಸ್ಥಾನಕ್ಕೆ ಗೌರವ ತರುವಂತಹ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಾ ಬಂದಿದ್ದೀರಿ ಮತ್ತು ಇವತ್ತಿನ ಚುನಾವಣೆಯಲ್ಲಿಯೂ ಕೂಡ ಬಹಳಷ್ಟು ನಿಷ್ಪಕ್ಷಪಾತವಾಗಿ ಅತ್ಯುತ್ತಮ ರೀತಿಯಿಂದ, ಒಂದು ಕ್ರೀಡಾ ಮನೋಭಾವನೆ ಇಲ್ಲಿ ಉತ್ಪತ್ತಿಯಾಗುವ ದಿಸೆಯಲ್ಲಿ ತಾವು ಚುನಾವಣೆ ನಡೆಸಿಕೊಟ್ಟಿರುವುದಕ್ಕೆ ಮತ್ತೊಮ್ಮೆ ತಮಗೆ ಹೃದಯಪೂರ್ವಕವಾದಂತಹ ಅಭಿನಂದನೆಯನ್ನು ಮತ್ತು ಕೃತಜ್ಞತೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಯುವಕ ಸ್ನೇಹಿತರಾದಂತಹ ಮತ್ತು ನೂತನವಾಗಿ ಉಪ ಸಭಾಪತಿಯವರ ಸ್ಥಾನಕ್ಕೆ ಚುನಾಯಿತರಾಗಿ ನಮ್ಮ ಪಕ್ಕದ ಕುರ್ಚಿಯಲ್ಲಿ ಬಂದು ಕುಳಿತಿರುವಂತಹ ಮಾನ್ಯ ಎಂ.ಕೆ.ಪ್ರಾಣೇಶ್‌ರವರಿಗೆ ನಾನು ಹೃದಯಪೂರ್ವಕವಾದಂತಹ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಯಸುತ್ತೇನೆ. ಈ ಸದನದ ಬಗ್ಗೆ ಬಹುತರವಾಗಿ 113 ವರ್ಷಗಳ ಶತಮಾನಗಳ ಇತಿಹಾಸ ಇರುವಂತಹ ಈ ಸದನ ಇಡೀ ಭಾರತ ದೇಶದಲ್ಲಿ ಅತ್ಯಂತ ಹಿರಿದಾದಂತಹ ಹಿರಿಮನೆ, ಈ ಸದನದ ಬಗ್ಗೆ ಬಹಳ ಸಂತೋಷವಾದ ವಿಷಯವನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಇದರ ರೂವಾರಿಗಳು ಮತ್ತು ಇದನ್ನು ಸ್ಥಾಪನೆ ಮಾಡಿದಂತಹವರ ಫೋಟೋ ಈ ಸದನದಲ್ಲಿ ಇರಲಿಲ್ಲ. ಈ ಅಧಿವೇಶನದಲ್ಲಿ ಇವತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಫೋಟೋ ಹಾಕಿ, ಶತಮಾನಗಳ ಹಿಂದೆ ಈ ಸದನವನ್ನು ಸ್ಥಾಪನೆ ಮಾಡಿದಂತಹ, ರೂವಾರಿಗಳಾಂತಹ ಮತ್ತು ಸಂಸ್ಥಾಪಕರಾದಂತಹವರ ಫೋಟೋ ಹಾಕುವಂತಹ ಒಂದು ನಿರ್ಣಯ, ನಮ್ಮ ಸದನದ ಸಭಾಪತಿಯವರು ತೆಗೆದುಕೊಂಡಿದ್ದು ನಿಜವಾಗಿಯೂ ಅಭಿನಂದನಾರ್ಹವಾದಂತಹ ಕೆಲಸ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತಿನ ದಿವಸ ನನಗೆ ಬಹಳ ಖುಷಿ ಎನಿಸುತ್ತಿದೆ. 113 ವರ್ಷಗಳ ಶತಮಾನದ ಇತಿಹಾಸದ ಘನತೆ ಗೌರವದ ಬಗ್ಗೆ ಮಾತನಾಡುವುದರ ಜೊತೆಗೆ ಇದರ ಮೂಲ ಸಂಸ್ಥಾಪಕರನ್ನು ಇವತ್ತು ಎಲ್ಲಾ ಸದನದ ಸದಸ್ಯರು ನೋಡುವಂತಹ ಅವಕಾಶ ದೊರೆತಿದ್ದು ಬಹಳ ಸಂತೋಷಕರವಾದಂತಹ ಸಂಗತಿಯಾಗಿದೆ. ನನಗೆ ಒಂದು ಕೊರತೆ ಇತ್ತು. ಚಿಕ್ಕಮಗಳೂರಿನ ನನ್ನ ಸ್ನೇಹಿತರು ನನ್ನ ಪಕ್ಕದಲ್ಲಿ ಇಲ್ಲದ ಹಾಗೆ ಆಯಿತು ಎಂದು ನೆನ್ನೆಯ ದಿವಸ ನಡೆದ obituary ಯಲ್ಲಿ ನಾನು ಬಹಳಷ್ಟು ನೆನಪಿಸಿಕೊಂಡೆ. ಮತ್ತೆ ಚಿಕ್ಕಮಗಳೂರಿನ ನನ್ನ ಸ್ನೇಹಿತರು ನನ್ನ ಪಕ್ಕಕ್ಕೆ ಬಂದಿದ್ದಾರೆ. ನಿಜವಾಗಿಯೂ ನನಗೆ ಬಹಳ ಸಂತೋಷ ಎನಿಸುತ್ತಿದೆ. ಆ ಕೊರಗು ಏನಿತ್ತು, ಆ ಕೊರಗನ್ನು ಮಾನ್ಯ ಎಂ.ಕೆ.ಪ್ರಾಣೇಶ್‌ರವರು ನಿವಾರಿಸಿದ್ದಾರೆ ಎಂದು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ಬಹಳಷ್ಟು ಹೆಚ್ಚಿನ ಮತಗಳ ಮುಖಾಂತರ ಮಾನ್ಯ ಎಂ.ಕೆ.ಪ್ರಾಣೇಶ್‌ರವರನ್ನು ಆಯ್ಕೆ ಮಾಡುವುದಕ್ಕೆ ಬಹಳಷ್ಟು ಸಹಕಾರ ಮಾಡಿದ್ದಾರೆ. ನಾವು ಕೂಡ ಅಷ್ಟೇ. ನಿಜವಾಗಿ ಹೇಳಬೇಕೆಂದರೆ, ಮಾನ್ಯ ಎಂ.ಕೆ.ಪ್ರಾಣೇಶ್‌ರವರ ಹೆಸರಿಗೆ ನಮ್ಮ ಅಭ್ಯರ್ಥಿ ಇದ್ದವರೂ ಕೂಡ ಅವರು ಎದ್ದು ನಿಂತಿದ್ದರು. ಈ ಕಡೆಯವರು ಅಷ್ಟೇ ಅವರ ಮೇಲೆ ಪ್ರೀತಿ, ವಿಶ್ವಾಸವನ್ನು ಹೊಂದಿದ್ದಾರೆ ಎನ್ನುವುದಕ್ಕೆ ಅದೊಂದು ಧ್ಯೋತಕ. ತಾವು ಎಷ್ಟು ಅವರನ್ನು ಪ್ರೀತಿಸುತ್ತೀರಿ, ಅಷ್ಟೇ ಪ್ರತಿಪಕ್ಷದಲ್ಲಿರುವಂತಹ ಎಲ್ಲಾ ಸದಸ್ಯರು, ಒಬ್ಬರನ್ನು ಬಿಡದೇ ಎಲ್ಲರೂ ಬಂದು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ಅವರನ್ನು ಪ್ರೀತಿಯಿಂದ ಅಪ್ಪಿಕೊಂಡು, ಅವರ ಭವಿಷ್ಯತ್‌ಗೆ ಒಳ್ಳೆಯದಾಗಲಿ ಎಂದು ನಮ್ಮ ಕಡೆಯ ಬಹುತೇಕ ಸದಸ್ಯರು ಹಾರೈಸಿದರು. ಆದರೆ ತಾವು ಇಷ್ಟು ಹೆಚ್ಚು ಮತಗಳಿದ್ದರೂ ಕೂಡ ಮಾನ್ಯ ಎಂ.ಕೆ.ಪ್ರಾಣೇಶ್‌ರವರನ್ನು ತಮಗೆ ಅಲ್ಲಿ ಇಟ್ಟುಕೊಳ್ಳುವುದಕ್ಕೆ ಆಗಲಿಲ್ಲ. ಕೊನೆಗೆ ಅವರು ನಮ್ಮ ಕಡೆಗೆ ಬಂದರು. ಮಾನ್ಯ ಸಭಾನಾಯಕರೇ ಅವರನ್ನು ನಮ್ಮ ಕಡೆಗೆ ಕರೆದುಕೊಂಡು ಬಂದೆವು. ಆ ದೃಷ್ಟಿಯಿಂದ ಶತಮಾನಗಳ ಇತಿಹಾಸವಿರುವ ಚಿಂತಕರ ಚಾವಡಿಗೆ ಇಡೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾರತ ದೇಶದ 130 ಕೋಟಿ ಜನತೆ ಯಾವುದಾದರೂ ಮೇಲ್ಮನೆಗೆ ಗೌರವಿಸುತ್ತಾರೆ ಎಂದರೆ ಅದು ನಮ್ಮ ಕರ್ನಾಟಕದಲ್ಲಿರುವಂತಹ ನಮ್ಮ ಮೇಲ್ಮನೆಗೆ ಎಂದು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ. ಆ ಘಟನೆಯ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಆ ಘಟನೆಯನ್ನು ಮರೆತು ಬಿಡುವುದೇ ಒಳ್ಳೆಯದು. ಮರೆವು ಒಮ್ಮೊಮ್ಮೆ ವರ ಎಂದು ಹೇಳುತ್ತಾರೆ. ಮರೆವು ಸಹ ವರ. ಆ ದೃಷ್ಟಿಯಿಂದ ಇವತ್ತಿನ ದಿವಸ ಈ ಚಿಂತಕರ ಛಾವಡಿಯಲ್ಲಿ ಬಹಳಷ್ಟು ಚಿಂತನಪರ ವಿಚಾರಗಳು ಚರ್ಚೆಯಾಗುತ್ತಿವೆ. ಏಕೆ ಇರಬೇಕು two chambers ಅಂದರೆ ಕೆಳಮನೆಯಲ್ಲಿ ಚರ್ಚೆ ಅಪೂರ್ಣವಾಗಿ, gigantic majority ಯಿಂದ ಒಮ್ಮೊಮ್ಮೆ ಯಾವುದಾದರು ಕಾನೂನು hurry-burry ಅಲ್ಲಿ ಪಾಸ್ ಆಗಿ ಇಲ್ಲಿಗೆ ಬಂದರೂ ಸಹ ಅದರ ನಿಜವಾದ ಚಿಂತನೆ ಇಲ್ಲಿಯೇ ಆಗುತ್ತದೆ. ಬಹಳಷ್ಟು ಸಚಿವರುಗಳು ಇದರ ಬಗ್ಗೆ ಮಾತನಾಡುತ್ತಾರೆ. ಅವರುಗಳ ಹೆಸರುಗಳನ್ನು ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಅವರುಗಳೂ ಏನು ಹೇಳುತ್ತಾರೆಂದರೆ "ಏನ್ರೀ ನಾವುಗಳು ಕೆಳ ಮನೆಯಲ್ಲಿ ಏನಾದರೂ ಪರವಾಗಿಲ್ಲ, ಅದನ್ನು ನಿಭಾಯಿಸಿಕೊಂಡು ಬರುತ್ತೇವೆ, ನಿಮ್ಮಲ್ಲಿ ನಿಭಾಯಿಸುವುದು ಬಹಳ ಕಷ್ಟ ಇದೆ" ಪಾಟೀಲರೇ ಎಂದು ಹೇಳುತ್ತಾರೆ.

ಈ ವಿಚಾರ ನಮ್ಮ ಪಕ್ಷದ ಸರ್ಕಾರದಲ್ಲಿ ನಾನು ಮಂತ್ರಿ ಇದ್ದಾಗಲೂ ಸಹ ಆಯಿತು, ಬೇರೆ ಪಕ್ಷದ ಸರ್ಕಾರ ಇದ್ದಾಗಲೂ ಸಹ ಮಂತ್ರಿಗಳು ಈ ಸದನದ ಬಗ್ಗೆ ಹೇಳುತ್ತಿದ್ದರು. ಈ ಸದನದ ಬಗ್ಗೆ ಅಪಾರವಾದ ಗೌರವ ಇದೆ. ಇಲ್ಲಿ ಏನೋ ಸುಮ್ಮನೆ ಹೇಳಲಿಕ್ಕೆ ಆಗುವುದಿಲ್ಲ. ಏಕೆಂದರೆ, ಇಲ್ಲಿ ಉತ್ತಮ ಸಂಸದೀಯ ಪಟುಗಳು ಹೊಂದಿದ್ದಂತಹವರು, ಕಾರ್ಯನಿರ್ವಹಿಸಿ ಹೋಗಿರುತ್ತಾರೆ. ಇಲ್ಲಿ ಬಹಳಷ್ಟು ಒಳ್ಳೆಯ ಚಿಂತನ ಮಂಥನ ಮಾಡಿದಂತಹವರು. ಸಮಾಜದ ಎಲ್ಲಾ ವರ್ಗದಿಂದ ಇಲ್ಲಿಗೆ ಬಂದಿರುತ್ತಾರೆ. ತಮ್ಮ ತಮ್ಮ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದಂತಹವರು; ಇಂತಹವರೆಲ್ಲರೂ ಬರುವುದರಿಂದ ಇಲ್ಲಿ ಏನು ಚರ್ಚೆಗಳಾಗುತ್ತವೆ, ಈ ಚರ್ಚೆಗಳು ಅರ್ಥಪೂರ್ಣ ಚರ್ಚೆಗಳಾಗುತ್ತವೆ. ಜೊತೆಗೆ ಸರಿಯಾದ ನ್ಯಾಯ ಕೂಡ ಈ ಮೇಲ್ಮನೆಯಿಂದ ದೊರಕುತ್ತದೆ. ಅಂತಹ ಒಂದು ಚಿಂತಕರ ಛಾವಡಿಗೆ ಉಪ ಸಭಾಪತಿಯವರಾಗಿ ಶ್ರೀ ಎಂ.ಕೆ. .ಪ್ರಾಣೇಶ್‌ರವರು ಆಯ್ಕೆಯಾಗಿದ್ದು ನಮಗೆ ಬಹಳ ಸಂತೋಷ. ಶ್ರೀ ಎಂ.ಕೆ.ಪ್ರಾಣೇಶರವರು ಉತ್ಸಾಹಿ ಯುವಕರು. He is a young and energetic man. ನಮ್ಮ ಪಕ್ಷ ಮತ್ತು ಅವರ ಪಕ್ಷ ಬೇರೆ ಬೇರೆ ಇರಬಹುದು. ಆದರೆ, ವ್ಯಕ್ತಿಗತವಾದಂತಹ, ಸುಮಧುರವಾದಂತಹ ಸಂಬಂಧ ನನ್ನ ಮತ್ತು ಶ್ರೀ ಎಂ.ಕೆ.ಪ್ರಾಣೇಶ್‌ರವರ ನಡುವೆ ಇದೆ ಎಂದು ಇವತ್ತು ಹೇಳಬೇಕಾಗುತ್ತದೆ. ಶ್ರೀ ಎಂ.ಕೆ.ಪ್ರಾಣೇಶ್‌ರವರು ಒಳ್ಳೆಯ ಸಂಸದೀಯ ಪಟುವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಅರ್ಥಪೂರ್ಣವಾದ ಚರ್ಚೆಯಲ್ಲಿ ಭಾಗವಹಿಸಿ ಅತ್ಯುತ್ತಮವಾದಂತಹ ವಿಚಾರಗಳನ್ನು ಅವರಿಂದ ಕೇಳಿದ್ದೇನೆ. He is really a gift of gab.

ಮುಂದು.. .

**(14) 29.01.2021 12.20 ಎಸ್‌ವಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ವಿಷಯವನ್ನು ಉತ್ತಮವಾಗಿ ಮಂಡನೆ ಮಾಡುವಂತಹ ಕಲೆ ಅವರಿಗಿದೆ. ಈ ಸದನದ ಯುವ, ಉತ್ಸಾಹಿ, ಸಮರ್ಥ ಸಂಸದೀಯ ಪಟು ಶ್ರೀ ಎಂ.ಕೆ.ಪ್ರಾಣೇಶ್ ಅವರು ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವೆನಿಸುತ್ತಿದೆ. ಅದರ ಜೊತೆಯಲ್ಲಿಯೇ ಯುವಕರಿಗೆ ಬಿಸಿ ರಕ್ತವಿರುತ್ತದೆ. ಮಾನ್ಯ ಪ್ರಾಣೇಶ್ ಅವರು ಸದಸ್ಯರಾಗಿದ್ದಾಗ ಇದ್ದಂತಹ ವಿಚಾರಗಳು ಬೇರೆಯಾಗುತ್ತವೆ, ಉಪ ಸಭಾಪತಿ ಸ್ಥಾನವನ್ನು ಅಲಂಕರಿಸಿದ ನಂತರ ವಿಚಾರಗಳು ಬೇರೆಯಾಗುತ್ತವೆ. ಸದಸ್ಯರಾಗಿದ್ದಾಗ ಸ್ವಲ್ಪ ಹೆಚ್ಚು ಕಡಿಮೆಯಾದರೂ ನಡೆಯುತ್ತದೆ. ಆದರೆ ಇಲ್ಲಿ ಅವರು ನ್ಯಾಯಾಸ್ಥಾನದ ನ್ಯಾಯಾಧೀಶರಾಗಿ ಬಂದು ಕುಳಿತುಕೊಳ್ಳುವಂತಹ ಸ್ಥಾನವು ಇದಾಗಿದೆ. ಮಾನ್ಯ ಪ್ರಾಣೇಶ್ ಅವರು ತಕ್ಷಣದಿಂದಲೇ ತಮ್ಮ ಸ್ಥಾನಕ್ಕನುಗುಣವಾಗಿ ತಮ್ಮ ವಿಚಾರ ಧಾರೆಗಳನ್ನು ಬದಲಾವಣೆ ಮಾಡಿಕೊಳ್ಳುತ್ತಾರೆಂಬ ವಿಶ್ವಾಸ ಮತ್ತು ನಂಬಿಕೆ ನನಗಿದೆ. ಇಂದು ವಿಧಾನ ಪರಿಷತ್ತಿನ ಉಪಸಭಾಪತಿಯಾಗಿ ಅವರು ಅತ್ಯಂತ ಗುರುತರವಾದಂತಹ ಜವಾಬ್ದಾರಿಯನ್ನು ಸಮರ್ಥವಾಗಿ ಬದ್ಧತೆಯಿಂದ, ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ, ಕರ್ತವ್ಯಪ್ರಜ್ಞೆಯಿಂದ ನಿರ್ವಹಿಸುತ್ತಾರೆಂಬ ವಿಶ್ವಾಸ ನನಗಿದೆ.

ಮಾನ್ಯ ಪ್ರಾಣೇಶ್ ಅವರೇ, ಬಿಸಿ ರಕ್ತದ ತರುಣರಾದ ತಾವು ಉನ್ನತ ಸ್ಥಾನಕ್ಕೆ ಬಂದಿದ್ದೀರಿ. ಹಿಂದೆ ಉಪಸಭಾಪತಿ ಆಗಿ ಹೋದವರೂ ಸಹ ನೆನಪು ಮಾಡಿಕೊಳ್ಳುವಷ್ಟರ ಮಟ್ಟಿಗೆ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸುತ್ತೀರಿ ಎನ್ನುವ ವಿಶ್ವಾಸ ನನಗಿದೆ. ಭಗವಂತನು ನಿಮಗೆ ಎಲ್ಲಾ ರೀತಿಯಲ್ಲಿಯೂ ಅನುಕೂಲ ಮಾಡಲಿ. ಮೊದಲನೆಯ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ತಾವು ಉಪಸಭಾಪತಿಯ ಸ್ಥಾನಕ್ಕೆ ಬಂದಿರುತ್ತೀರಿ. ಇದು ಬಹಳ ವಿಶೇಷ. ಇದು ಬಹಳ ಉನ್ನತವಾದ ಸ್ಥಾನ. ನಿಮಗಾಗಿರುವ ಸಂತೋಷಕ್ಕಿಂತ ಹೆಚ್ಚು ಸಂತೋಷ ನನಗೆ ಆಗಿದೆ ಎಂದು ಹೇಳುತ್ತಾ, ತಮಗೆ ಶುಭವನ್ನು ಕೋರುತ್ತೇನೆ. ನೀವು ಉಪಸಭಾಪತಿಯಾಗಿ ಅತ್ಯಂತ ಜವಾಬ್ದಾರಿಯಿಂದ, 'ನ ಭೂತೋ ನ ಭವಿಷ್ಯತಿ' ಎನ್ನುವ ರೀತಿಯಲ್ಲಿ ಅರ್ಥಪೂರ್ಣವಾಗಿ ಈ ಸ್ಥಾನವನ್ನು ನಿಭಾಯಿಸುತ್ತೀರೆನ್ನುವ ವಿಶ್ವಾಸದೊಂದಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿಪಕ್ಷದಲ್ಲಿರುವ ನಾವು ನಿಮಗೆ ಸಹಕಾರವನ್ನು ನೀಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿಮ್ಮ ಬದುಕಿನಲ್ಲಿ ಉಪಸಭಾಪತಿ ಸ್ಥಾನವು memorable ಆಗಿ ಉಳಿಯಲಿ ಎನ್ನುವಂತಹ ಮಾತನ್ನು ಹೇಳಿ ಮತ್ತೊಮ್ಮೆ ನೂತನ ಉಪಸಭಾಪತಿಯವರಾದ ಶ್ರೀ ಎಂ.ಕೆ.ಪ್ರಾಣೇಶ್ ಅವರನ್ನು ನಮ್ಮೆಲ್ಲಾ ಸದಸ್ಯರ ಜೊತೆಗೆ ಅತ್ಯಂತ ಪ್ರೀತ್ಯಾದರಗಳಿಂದ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**9. ನೂತನ ಸಚಿವರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರಾದ ಶ್ರೀ ಆರ್.ಶಂಕರ್ ಅವರು ನಮ್ಮ ಸದನಕ್ಕೆ ಬಂದಿದ್ದು, ಅವರನ್ನು ಸದನಕ್ಕೆ ಪರಿಚಯಿಸುತ್ತೇನೆ. ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರಾದ ಶ್ರೀ ಎಂ.ಟಿ.ಬಿ.ನಾಗರಾಜ್ ಅವರು ನಮ್ಮ ಸದನಕ್ಕೆ ಬಂದಿದ್ದು, ಅವರನ್ನು ಸಹ ಸದನಕ್ಕೆ ಪರಿಚಯಿಸುತ್ತೇನೆ. ಅಂತೆಯೇ ಮಾನ್ಯ ಅರವಿಂದ ಲಿಂಬಾವಳಿಯವರು ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ನಿರ್ವಹಣೆ ಮಾಡುತ್ತಾರೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**10. ಶ್ರೀ ಎಂ.ಕೆ.ಪ್ರಾಣೇಶ್‌ರವರು ಉಪಸಭಾಪತಿಗಳಾಗಿ ಆಯ್ಕೆಗೊಂಡ ಬಗ್ಗೆ ಮುಂದುವರೆದ ಅಭಿನಂದನೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದು ಸದನದಲ್ಲಿ ಉಪಸಭಾಪತಿಯವರ ಚುನಾವಣೆಯನ್ನು ನಾವೆಲ್ಲರೂ ಕೂಡಿ ಬಹಳ ಹೆಮ್ಮೆಯಿಂದ ನಡೆಸಿಕೊಟ್ಟಿದ್ದೇವೆ ಎಂಬುದನ್ನು ಬಹಳ ಅಭಿಮಾನದಿಂದ ಹೇಳಲಿಚ್ಛಿಸುತ್ತೇನೆ. ಈ ಹಿನ್ನೆಲೆಯಲ್ಲಿ ಚುನಾವಣೆಯನ್ನು ಅರ್ಥಪೂರ್ಣವಾಗಿ ನಡೆಸಿದುದಕ್ಕಾಗಿ ತಮಗೂ ಸಹಿತ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಎಂ.ಕೆ.ಪ್ರಾಣೇಶ್ ಅವರು ಇಂದು ಉಪಸಭಾಪತಿಗಳಾಗಿ ಆಯ್ಕೆಯಾಗಿದ್ದಾರೆ. ಅವರು ಈ ಸದನಕ್ಕೆ ಬಂದಾಗಿನಿಂದಲೂ ನಾನು ಅವರನ್ನು ನೋಡುತ್ತಿದ್ದೇನೆ. ಅವರು ಒಬ್ಬ ಉತ್ತಮ ಸಂಸದೀಯ ಪಟು ಎಂದು ನಾನು ಆಗಿನಿಂದಲೂ ಗಮನಿಸಿದ್ದೇನೆ. ಯಾವುದೇ ಒಂದು ವಿಷಯ ಬಂದಾಗ ವಿಷಯವನ್ನು ಸಂಪೂರ್ಣವಾಗಿ ಅರಿತು, ಅದರ ಸಾಧಕ-ಬಾಧಕಗಳನ್ನು ತಿಳಿದುಕೊಂಡು ಮಾತನಾಡುವಂತಹ ಪ್ರವೃತ್ತಿಯನ್ನು ಮಾನ್ಯ ಪ್ರಾಣೇಶ್ ಅವರು ಹೊಂದಿರುವುದನ್ನು ನೋಡಿದರೆ ಬಹಳ ಅಭಿಮಾನ ಮತ್ತು ಹೆಮ್ಮೆಯೆನ್ನಿಸುತ್ತದೆ. ಮೊದಲನೆಯ ಬಾರಿ ವಿಧಾನಪರಿಷತ್ ಸದಸ್ಯರಾಗಿದ್ದರೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲವು ಬಾರಿ ಮಾರ್ಗದರ್ಶನವನ್ನು ಮಾಡುವಂತಹ ಕೆಲಸವನ್ನು ಅವರು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಅವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಸಭಾಪತಿಗಳ ಸ್ಥಾನದಲ್ಲಿ ಕುಳಿತಿರುವ ಉಪಸಭಾಪತಿಯವರನ್ನು 'ಮಾನ್ಯ ಉಪಸಭಾಪತಿಯವರೇ' ಎಂದು ಸಂಬೋಧನೆ ಮಾಡುವುದಿಲ್ಲ. ಇದು ವಾಡಿಕೆ. ಉಪಸಭಾಪತಿಯವರಿದ್ದರೂ ಸಹ 'ಮಾನ್ಯ ಸಭಾಪತಿಯವರೇ' ಎಂದು ಕರೆಯಲಾಗುವುದು. ಅಷ್ಟು ಗೌರವಯುತವಾದಂತಹ ಹುದ್ದೆಯನ್ನು ಮಾನ್ಯ ಪ್ರಾಣೇಶ್ ಅವರು ಅಲಂಕರಿಸಿದ್ದಾರೆ.

ಮಾನ್ಯ ಪ್ರಾಣೇಶ್ ಅವರೇ, ಯುವಕರಾದಂತಹ ತಾವು ಉತ್ತಮ ಸಂಸದೀಯ ಪಟುಗಳಾಗಿದ್ದು, ಸಭಾಪತಿಯವರ ಪೀಠದಲ್ಲಿ ಕುಳಿತು ಸದನವನ್ನು ನಡೆಸಬೇಕಾದಂತಹ ಪರಿಸ್ಥಿತಿ ಬಂದಾಗ ತಮ್ಮ ಅನುಭವವನ್ನು ಬಳಸಿಕೊಂಡು ಉತ್ತಮವಾದ ರೀತಿಯಲ್ಲಿ ಸಭೆಯನ್ನು ನಡೆಸುತ್ತೀರೆಂಬ ನಂಬಿಕೆ ನನಗಿದೆ. ಇಡೀ ಸದನ ನಿಮಗೆ ಎಲ್ಲಾ ರೀತಿಯಿಂದ ಸಹಕಾರವನ್ನು ನೀಡುತ್ತದೆ. ಪೀಠದಲ್ಲಿ ಕುಳಿತಾಗ ಇಡೀ ಸದನದ ಗೌರವವನ್ನು ಎತ್ತಿ ಹಿಡಿಯುವ ಕೆಲಸವನ್ನು ತಾವು ಮಾಡಬೇಕೆಂದು ಹೇಳಿ ಸದನದ ಹಿರಿಯ ಸದಸ್ಯನಾಗಿ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಅದನ್ನು ತಾವು ಮಾಡುತ್ತೀರೆನ್ನುವ ನಂಬಿಕೆ ನನಗಿದೆ. ಸದನವು ಗೌರವದಿಂದ, ಪ್ರೀತಿ-ವಿಶ್ವಾಸಗಳಿಂದ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದೆ. ದೇವರು ನಿಮಗೆ ಒಳ್ಳೆಯದನ್ನು ಮಾಡಲಿ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಅಹಿತಕರ ಘಟನೆಯ ಕುರಿತು ಒಂದು ಮಾತನ್ನು ಹೇಳಿದರು. ನಿನ್ನೆ ಮತ್ತು ಇಂದು ತಾವೆಲ್ಲಾ ನೋಡಿದ್ದೀರಿ. ಈ ಸದನದಲ್ಲಿ ಆದಂತಹ ತಪ್ಪುಗಳನ್ನು ಮರೆತು ಪಕ್ಷಾತೀತವಾಗಿ ನಾವೆಲ್ಲರೂ ಸೇರಿ ಒಂದು ಉತ್ತಮವಾದಂತಹ ವಾತಾವರಣವನ್ನು ನಿರ್ಮಾಣ ಮಾಡಿದಂತಹ ಕೀರ್ತಿ ಇಡೀ ಸದನದ ಮೂರು ಪಕ್ಷಗಳಿಗೂ ಸಲ್ಲುತ್ತದೆ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಯಾವುದೇ ಸಂದರ್ಭ ಬಂದರೂ ಸದನದ ಘನತೆ ಗೌರವವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವ ಸ್ಪಷ್ಟವಾದ ಭರವಸೆಯನ್ನು ಈ ನಾಡಿನ ಜನರಿಗೆ ಕೊಡಲಿಕ್ಕೆ ನಾನು ಇಷ್ಟ ಪಡುತ್ತೇನೆ. ಮತ್ತೊಮ್ಮೆ ಶ್ರೀ ಎಂ.ಕೆ.ಪ್ರಾಣೇಶ್ ಅವರಿಗೆ ಶುಭವನ್ನು ಹಾರೈಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇಂದು ನಮ್ಮ ಸದನದ ಉಪಸಭಾಪತಿಯವರಾಗಿ ಆಯ್ಕೆಯಾಗಿರುವಂತಹ ಶ್ರೀ ಎಂ.ಕೆ.ಪ್ರಾಣೇಶ್ ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜ್ಯದ ಎಲ್ಲಾ ಜನತಂತ್ರವಾದಿಗಳ ಪರವಾಗಿ ಅತ್ಯಂತ ಅಭಿಮಾನದಿಂದ ಶುಭಕಾಮನೆಗಳನ್ನು ಕೋರುತ್ತೇನೆ. ನಿನ್ನೆ ರಾತ್ರಿಯಿಂದ ಇಂದು ಇಲ್ಲಿಗೆ ಬರುವವರೆವಿಗೂ ಏನೋ ಆಗಿ ಹೋಗುತ್ತದೆ ಎಂದು ಏನೆಲ್ಲಾ ಕಾರ್ಮೋಡಗಳು ಕವಿದಿದ್ದವು; ಈ ಸದನ 2020ರ ಡಿಸೆಂಬರ್ 15ರ ಘಟನೆಯನ್ನು ಕಂಡಿದೆ. ದಿವಂಗತ ಧರ್ಮೇಗೌಡರು ನಿಜಕ್ಕೂ ಒಬ್ಬ ಧರ್ಮರಾಯನಂತಿದ್ದರು. ತಾವು ಸಹ ಅವರೊಂದಿಗೆ ಶಾಂತಿ ಮತ್ತು ಸೌಹಾರ್ದಯುತವಾಗಿ ಸದನದ ನಡವಳಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಿರಿ. ಡಿಸೆಂಬರ್ 15ರ ಘಟನೆ, ಗೊಂದಲ, ಆಕ್ರಮಣ ನೀತಿ ಎಲ್ಲವೂ ದುರದೃಷ್ಟಕರ. ಆದರೆ ಇಂದಿನ ಶಾಂತಿ, ಸೌಹಾರ್ದಯುತ ವಾತಾವರಣವನ್ನು ನೋಡಿದರೆ 'ಅಯ್ಯಯ್ಯೋ, ಅದು ಹೇಗೆ? ಇದು ಹೇಗೆ?' ಎನಿಸುತ್ತದೆ. That is the beauty of democracy. ಜನತಂತ್ರದ ಸೌಂದರ್ಯವೇ ಇದು. ಡಿಸೆಂಬರ್ 15, 2020 ಅನ್ನು ಈ ಸದನ ನೋಡಿದೆ, ಅಂತೆಯೇ ಜನವರಿ 29, 2021 ಅನ್ನು ಕೂಡ ಈ ಸದನ ನೋಡುತ್ತಿದೆ. ನಾನು ಕೂಡ ಬ್ರಿಟಿಷ್ ಪಾರ್ಲಿಮೆಂಟ್‌ನ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದೇನೆ. ಅದರ ಹೆಸರು 'The Talking Shop'. ಪ್ರಜಾಪ್ರಭುತ್ವದಲ್ಲಿ ಗ್ರಾಮಪಂಚಾಯಿತಿಯಿಂದ ಪಾರ್ಲಿಮೆಂಟ್‌ನವರೆವಿಗೂ deliberations, debates, interaction and then a decision. That is the beauty of democracy. ಅದಕ್ಕಾಗಿಯೇ ನನ್ನ ಪುಸ್ತಕಕ್ಕೆ ನಾನು 'The Talking Shop' ಎಂದು ಹೆಸರು ಕೊಟ್ಟಿದ್ದೇನೆ. ಈ ಜನತಂತ್ರ ವ್ಯವಸ್ಥೆಯ ಸೌಂದರ್ಯವನ್ನು ಎಷ್ಟು ಚೆನ್ನಾಗಿ ಕಂಡೆವು. ನಾನು 1978ರಿಂದಲೂ ಈ ಶಾಸಕಾಂಗ ವ್ಯವಸ್ಥೆಯನ್ನು ನೋಡುತ್ತಾ ಬಂದಿದ್ದೇನೆ. ನಿಜಕ್ಕೂ ಬಹಳ ಸಂತೋಷವಾಯಿತು. ಡಿಸೆಂಬರ್ 15ರ ಘಟನೆಯಿಂದ ನಮ್ಮ ಮನಸ್ಸುಗಳು ವೇದನೆಗೊಳಗಾಗಿದ್ದು, ಅವುಗಳನ್ನು ಮರೆಸಿ ನಾವು ಶಾಂತಿಯುತವಾಗಿ, ಸೌಹಾರ್ದಯುತವಾಗಿ ಎಲ್ಲಾ ಪಕ್ಷಗಳ ಮುಖಂಡರು ಒಂದುಗೂಡಬಲ್ಲೆವು, ಶಾಂತಿಯನ್ನು ಸ್ಥಾಪನೆ ಮಾಡಬಲ್ಲೆವು; ಆಡಳಿತಕ್ಕೆ, ಅಭಿವೃದ್ಧಿಗೆ ನಾಂದಿ ಹಾಡಬಲ್ಲೆವು ಎನ್ನುವುದನ್ನು ಇಡೀ ಸದನ ಇಂದು ತೋರಿಸಿಕೊಟ್ಟಿದೆ. ಇಂದು ತಮ್ಮ ಅಧ್ಯಕ್ಷತೆಯಲ್ಲಿ ಅದು ನಡೆದಿದೆ. ನಾನು ಬಹಳ ವರ್ಷಗಳಿಂದ ತಮ್ಮನ್ನು ನೋಡಿದ್ದೇನೆ. ನಾನು, ಮಾನ್ಯ ಹೊರಟ್ಟಿಯವರು ಎಲ್ಲರೂ ಒಟ್ಟಾಗಿ 1978ರಲ್ಲಿ ಬಂದವರು. ತಮ್ಮ ಅಧ್ಯಕ್ಷತೆಯಲ್ಲಿ ಉಪಸಭಾಪತಿಯವರ ಚುನಾವಣೆ ಅತ್ಯಂತ ಸೌಹಾರ್ದಯುತ ವಾತಾವರಣದಲ್ಲಿ ನಡೆದಿದೆ. ಅದಕ್ಕಾಗಿ ತಮಗೆ, ಸಹಕಾರ ನೀಡಿದ ಸದನದ ಎಲ್ಲಾ ಸದಸ್ಯರಿಗೆ, ಮುಖಂಡರಿಗೆ ಅಭಿನಂದನೆಗಳನ್ನು ಹೇಳುತ್ತೇನೆ. ಮತ್ತೊಮ್ಮೆ ಈ ಸದನದ ಗೌರವವನ್ನು ಯಾವುದೇ ಕಾರಣಕ್ಕೆ ಎಲ್ಲಿಯೂ ಕಳೆಯುವುದಕ್ಕೆ ನಾವು ಅವಕಾಶವನ್ನು ಕೊಡಬಾರದೆಂದು ವಿನಂತಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಸಭಾಪತಿಯವರೇ, ಉಪಸಭಾಪತಿಯವರೇ' ಎಂದು ಸಂಬೋಧನೆ ಮಾಡಬೇಕಿದ್ದು, ಕೆಲವೊಮ್ಮೆ 'ಎಲ್ಲೈ ಪ್ರಾಣೇಶನೇ' ಎಂದು ಕರೆಯಬಹುದು.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು.)**

ಅವರ ಹೆಸರು ಕೂಡ ಅಷ್ಟು ಚೆನ್ನಾಗಿದೆ. ಅವರಿಗೆ ನಾನು ಮತ್ತೊಮ್ಮೆ ಅಭಿನಂದನೆಗಳನ್ನು ಹೇಳುತ್ತಾ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**(..ಮುಂದು)**

**(15) 29.01.2021 12.30 KG.GR** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರು ನಮ್ಮ ಆತ್ಮೀಯ ಗೆಳೆಯರು ಮತ್ತು ನಮ್ಮ ಜಿಲ್ಲೆಯವರು. ಅವರು ಇಂದು ಉಪ ಸಭಾಪತಿಯವರಾಗಿ ಆಯ್ಕೆಯಾಗಿರುವುದು ಬಹಳ ಸಂತೋಷವಾದ ವಿಚಾರ. ಅದರಲ್ಲೂ ವಿಶೇಷವಾಗಿ ನನಗೆ ಮತ್ತು ನಮ್ಮ ಜಿಲ್ಲೆಗೆ ಕೊಟ್ಟಂತಹ ದೊಡ್ಡ ಕಾಣಿಕೆಯಾಗಿದೆ. ಇದಕ್ಕೆ ಭಾಗಿಯಾದಂತಹ ಮಾನ್ಯ ಎಲ್ಲಾ ಸದಸ್ಯರುಗಳಿಗೂ ಸಹ ಈ ಸಂದರ್ಭದಲ್ಲಿ ಹೃದಯ ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರು ನನಗಿಂತಲೂ ನನ್ನ ಅಣ್ಣನವರಾದ ದಿವಂಗತ ಎಸ್.ಎಲ್.ಧರ್ಮೇಗೌಡರವರಿಗೆ ಆತ್ಮೀಯ ಗೆಳೆಯರು. ದಿವಂಗತ ಎಸ್.ಎಲ್.ಧರ್ಮೇಗೌಡರವರು 2ನೇ ಬಾರಿಗೆ ಜಿಲ್ಲಾ ಪಂಚಾಯಿತಿ ಸದಸ್ಯರಾದಂತಹ ಸಂದರ್ಭದಲ್ಲಿ ನಮ್ಮ ಅಣ್ಣ ಮತ್ತು ಶ್ರೀ ಎಂ.ಕೆ.ಪ್ರಾಣೇಶ್‌ರವರು ಒಟ್ಟಿಗೆ ಕೆಲಸ ಮಾಡಿದ್ದಾರೆ. ಈ ವಿಷಯವನ್ನು ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಅನೇಕ ಬಾರಿ ಪ್ರಸ್ತಾಪ ಮಾಡುತ್ತಿದ್ದರು. ಶ್ರೀ ಎಂ.ಕೆ.ಪ್ರಾಣೇಶ್‌ರವರು ಜಿಲ್ಲಾಧ್ಯಕ್ಷರಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಾವು ಅವರ ನಡೆ-ನುಡಿಗಳನ್ನು ನೋಡಿದ್ದೇವೆ. ನಾವುಗಳು ಬೇರೆ ಬೇರೆ ಪಕ್ಷಗಳಲ್ಲಿ ಕೆಲಸ ಮಾಡಿದ್ದರೂ ಸಹ, ಅವರು ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿರುವಂತಹ ಒಬ್ಬ ಒಳ್ಳೆಯ ಗೆಳೆಯರು. ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದ ದಿವಸದಿಂದ ಅವರ ವ್ಯಕ್ತಿತ್ವದ ಬಗ್ಗೆ ಈ ಸದನದ ಎಲ್ಲ ಸದಸ್ಯರಿಗೂ ಗೊತ್ತಿದೆ. ಅವರು ಮಲೆನಾಡಿನ ಪ್ರದೇಶದಿಂದ ಬಂದವರು. ಅಲ್ಲಿ ಎರಡು family ಗಳಿವೆ. ನಾವು ಅತ್ಯಂತ ಚಿಕ್ಕವರಿದ್ದಾಗ Parliament ಸದಸ್ಯರು ಒಂದು ಬಾರಿ ದಾರದಹಳ್ಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕುಟುಂಬಕ್ಕೆ ಸೇರುತ್ತಿತ್ತು. ತದನಂತದಲ್ಲಿ ಇನ್ನೊಂದು ಬಾರಿ ಮಾಕೋನಹಳ್ಳಿ ಕುಟುಂಬಕ್ಕೆ ಬರುತ್ತಿತ್ತು ಎಂದು ಹೇಳುತ್ತಿದ್ದರು. ಇಂದು ಮಾಕೋನಹಳ್ಳಿ ಕುಟುಂಬ ವರ್ಗಕ್ಕೆ ಸೇರಿದಂತಹ ಒಬ್ಬ ಸದಸ್ಯರು ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ. ಇದು ಕೇವಲ ಮಾಕೋನಹಳ್ಳಿ ಕುಟುಂಬಕ್ಕೆ ಮಾತ್ರವಲ್ಲ. ಇಡೀ ನಮ್ಮ ರಾಜ್ಯಕ್ಕೆ ಕೊಟ್ಟಂತಹ ಗೌರವ. ಅದರ ಋಣವನ್ನು ತೀರಿಸುವಂತಹ ಸರ್ವಶಕ್ತಿಯನ್ನು ಮಾನ್ಯ ಸದಸ್ಯರಾದ ಎಂ.ಕೆ.ಪಾಣೇಶ್‌ರವರಿಗೆ ಭಗವಂತ ನೀಡಲಿ ಎಂದು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಈಗಾಗಲೇ ಅನೇಕ ಹಿರಿಯ ಸದಸ್ಯರು ಸವಿಸ್ತಾರವಾಗಿ ಮಾತನಾಡಿದ್ದಾರೆ. ಹಾಗಾಗಿ, ನಾನು ಈ ಸಂದರ್ಭದಲ್ಲಿ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಸದನದ ಹಿರಿಮೆ ಮತ್ತು ಗೌರವನ್ನು ಎತ್ತಿ ಹಿಡಿಯುವಂತಹ ಎಲ್ಲಾ ಗುಣಗಳು ಮಾನ್ಯ ಎಂ.ಕೆ.ಪ್ರಾಣೇಶ್‌ರವರಲ್ಲಿದೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಕಳೆದ ನಾಲ್ಕೂವರೆ ವರ್ಷಗಳಿಂದ ಈ ಸದನದ ಕಾರ್ಯಕಾಲಪಗಳನ್ನು ಬಹಳ ಹತ್ತಿರದಿಂದ ನೋಡಿದ್ದಾರೆ. ಹಾಗಾಗಿ, ಅವರು ಎಲ್ಲರ ನಾಡಿ ಮಿಡಿತಗಳನ್ನು ಅರಿತಿದ್ದಾರೆ. ಅವರು ಸಂವಿಧಾನಕ ಬದ್ಧವಾದ ಈ constitutional post ಅನ್ನು ಭಗವಂತನ ಹಾಗೂ ಹಿರಿಯರ ಆರ್ಶೀವಾದದಿಂದ ಅಲಂಕರಿಸಿದ್ದಾರೆ. ಅವರು ಪೀಠದಲ್ಲಿ ಕುಳಿತಾಗ ಈ ಸದನದ ಹಿರಿಮೆಯನ್ನು ಮತ್ತು ಗರಿಮೆಯನ್ನು ಎತ್ತಿಹಿಡಿಯುವುದರ ಜೊತೆಗೆ ಎಲ್ಲಾ ಸದಸ್ಯರುಗಳನ್ನು ಒಂದೇ ರೀತಿಯಲ್ಲಿ ಕಾಣುವಂತಹ ಕೆಲಸವನ್ನು ಮಾಡುವುದಕ್ಕೆ ಅವರು ಸರ್ವಶಕ್ತರಿದ್ದಾರೆ. ಅವರು ಈ ಕೆಲಸವನ್ನು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರಿಂದ ನಮ್ಮ ಜಿಲ್ಲೆಗೆ ಮತ್ತು ನಮ್ಮ ನಾಡಿಗೆ ಗೌರವ ತರುವಂತಹ ಕೆಲಸವಾಗಲಿ ಎಂದು ಈ ಸಂದರ್ಭದಲ್ಲಿ ಹೇಳಿ ಇದಕ್ಕೆ ಕಾರಣಕರ್ತರಾದಂತಹ ಎಲ್ಲರಿಗೂ ಮತ್ತೊಮ್ಮೆ ನನ್ನ ಹೃದಯಪೂರ್ವಕವಾದ ವಂದನೆಗಳನ್ನು ಹೇಳಿ, ಭಗವಂತ ಅವರಿಗೆ ಎಲ್ಲಾ ರೀತಿಯ ಶ್ರೇಯಸ್ಸನ್ನು ನೀಡಲಿ ಎಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ವಂದನೆಗಳು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇಂದು ನಡೆದ ಮಾನ್ಯ ಉಪ ಸಭಾಪತಿಯವರ ಚುನಾವಣೆಯನ್ನು ಅರ್ಥಪೂರ್ಣವಾಗಿ ಮತ್ತು ಒಂದು ಉತ್ತಮವಾದ ರೀತಿಯಲ್ಲಿ ನಡೆಸಿಕೊಟ್ಟಂತಹ ತಮಗೆ ನಾನು ಎಲ್ಲರ ಪರವಾಗಿ ಧನ್ಯವಾದಗಳನ್ನು ಹೇಳುವುದಕ್ಕೆ ಇಚ್ಛೇಪಡುತ್ತೇನೆ. ಈ ಸದನ ಒಂದು ಇತಿಹಾಸವನ್ನು ನಿರ್ಮಾಣ ಮಾಡುತ್ತಿದೆ. ಅದು ಯಾವ ರೀತಿ ಎಂದರೆ, ಮಾನ್ಯ ಸಭಾಪತಿಯವರು ಮತ್ತು ಉಪ ಸಭಾಪತಿಯವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಆಯ್ಕೆಯಾದಂತವರು. ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ನಾಯಕರು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಆಯ್ಕೆಯಾದಂತವರು. ಅದೇ ರೀತಿ ಆಡಳಿತ ಪಕ್ಷದ ಮುಖ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚೇತಕರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರಾದ ನಾನು ಸಹ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಆಯ್ಕೆಯಾದಂತವರು. ಈ ಆರು ಸ್ಥಾನಗಳಲ್ಲಿರುವವರು ಚುನಾವಣೆಯನ್ನು ಎದುರಿಸಿ ಆಯ್ಕೆಯಾಗಿ ಬಂದಂತಹವರು. 113 ವರ್ಷಗಳ ಇತಿಹಾಸವುಳ್ಳ ಈ ಸದನಕ್ಕೆ ನಾನು ಭಾವಿಸಿದಂತೆ, ಇದು ಪ್ರಪ್ರಥಮ ಬಾರಿಗೆ ಈ ಆರು ಸ್ಥಾನಗಳನ್ನು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿರುವಂತಹವರು ಅಲಂಕರಿಸಿರುವುದು ಎಲ್ಲೋ ಒಂದು ಕಡೆ ಸಂತೋಷವನ್ನು ತರುವಂತಹ ಕೆಲಸವಾಗಿದೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಚಿಕ್ಕಮಗಳೂರು ಜಿಲ್ಲೆಯವರು. ಅವರು ಕೃಷಿಕ ಕುಟುಂಬದಲ್ಲಿ ಹುಟ್ಟಿ ಬಂದವರು. ಅವರು ಸ್ನೇಹಜೀವಿ. ನಾನು ಯಾವ ರೀತಿ ಮೊದಲನೇ ಬಾರಿಗೆ ಈ ಸದನಕ್ಕೆ ಆಯ್ಕೆಯಾಗಿ ಬಂದಿದ್ದೇನೆಯೋ, ಅದೇರೀತಿ ಅವರು ಸಹ ಮೊದಲನೇ ಬಾರಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂತಹವರು. ಅವರು ವಿರೋಧ ಪಕ್ಷದಲ್ಲಿ ಕುಳಿತ್ತಿದ್ದಾಗ, ತದನಂತರ ಆಡಳಿತ ಪಕ್ಷಕ್ಕೆ ಹೋದಾಗಲೂ ಸಹ, ಯಾವುದಾದರೊಂದು ವಿಷಯದ ಮೇಲೆ ಪ್ರಸ್ತಾಪಗಳನ್ನು ಮಾಡಬೇಕೆಂದರೆ, ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಕಲೆಹಾಕಿ ಅರ್ಥಪೂರ್ಣವಾಗಿ ಮಂಡನೆ ಮಾಡುವಂತಹ ಕೆಲಸವನ್ನು ಅವರು ಮಾಡಿಕೊಂಡುಬಂದರು. ಈ ಸದನವನ್ನು "ಚಿಂತಕರ ಭಾವಣಿ" ಎಂದು ಕರೆಯುತ್ತೇವೆ. ಈ ಸದನಕ್ಕೆ 113 ವರ್ಷಗಳ ಇತಿಹಾಸವಿದೆ. ಇದನ್ನು ಮೈಸೂರು ಮಹಾರಾಜರು ಸ್ಥಾಪನೆ ಮಾಡಿದರು. ಇದು ಇಡೀ ನಮ್ಮ ದೇಶಕ್ಕೆ ಮಾದರಿಯಾಗಿರುವಂತಹ ವಿಧಾನ ಪರಿಷತ್ತು.

ಮಾನ್ಯ ಸಭಾಪತಿಯವರಿಗೆ ನಾನು ಎಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸದನದಲ್ಲಿ ಮೇಲುಗಡೆ ಬಂದಂತಹ ಹೊಸ ನಾಲ್ಕು ಫೋಟೋಗಳನ್ನು ಹಾಕಿಸಿದ್ದೀರಿ. ಅದರಲ್ಲಿ ಇದನ್ನು ಸ್ಥಾಪನೆ ಮಾಡಿದಂತಹ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಫೋಟೋವನ್ನು ಹಾಕಿಸಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇರೀತಿ ನಮ್ಮ ದೇಶದ ಮೊಟ್ಟ ಮೊದಲ ಪ್ರಧಾನ ಮಂತ್ರಿಗಳಾದಂತಹ ಶ್ರೀ ಪಂಡಿತ್ ಜವಹಾರಲಾಲ್ ನೆಹರು ರವರ ಫೋಟೋವನ್ನು ಸಹ ಹಾಕಿಸಿದ್ದೀರಿ. ಆದರೆ, ಇಲ್ಲಿ ನಾನು ಎಲ್ಲರ ಪರವಾಗಿ ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದ ಪ್ರಪ್ರಥಮ ಮುಖ್ಯ ಮಂತ್ರಿಯವರಾದ ಶ್ರೀ ಕೆ.ಸಿ.ರೆಡ್ಡಿಯವರ ಫೋಟೋವನ್ನು ಸದನದಲ್ಲಿ ಎಲ್ಲಾದರೊಂದು ಕಡೆಗೆ ಬಂದರೆ, ಅದಕ್ಕೆ ಒಂದು ಅರ್ಥ ಇರುತ್ತದೆ ಎಂಬುದು ನನ್ನ ಅನಿಸಿಕೆ. ಇದನ್ನು ದಯಮಾಡಿ, ಸಾಧ್ಯವಾದರೆ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಕೆ.ಪ್ರಾಣೇಶ್‌ರವರ ಬಗ್ಗೆ ಹೇಳಬೇಕೆಂದರೆ, ಅವರು ಒಬ್ಬ ಉತ್ತಮವಾದಂತಹ ವಾಗ್ಮಿ. ಆದರೆ, ವಿರೋಧ ಪಕ್ಷದಲ್ಲಿದ್ದಾಗ ಯಾವ ರೀತಿ ಮಂಡನೆ ಮಾಡಬೇಕು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತ ಪಕ್ಷದಲ್ಲಿದ್ದಾಗ ಸರ್ಕಾರವನ್ನು ಯಾವ ರೀತಿ ಸಮರ್ಥನೆ ಮಾಡಿಕೊಳ್ಳಬೇಕು ಎನ್ನುವುದನ್ನು ಉತ್ತಮವಾಗಿ ನಿರ್ವಹಣೆ ಮಾಡಿಕೊಂಡು ಬಂದಂತಹ ಒಬ್ಬ ಒಳ್ಳೆಯ ವ್ಯಕ್ತಿ. ನಾವು ಇಂದು ಈ ಗೌರವಾನ್ವಿತ ಸ್ಥಾನವನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಡಬೇಕಾಗಿತ್ತು. ನಾವು ಒಂದು ನಿರ್ಧಿಷ್ಟವಾದ ಕಾರಣ ಇರುವುದಕೋಸ್ಕರ Division ಗೆ ಕೇಳಿದ್ದೇವೆ ವಿನಃ, ನಮಗೆ ಮಾನ್ಯ ಎಂ.ಕೆ.ಪ್ರಾಣೇಶ್‌ರವರ ಬಗ್ಗೆ ಅಪಾರವಾದ ಗೌರವ ಇದೆ. ಇವತ್ತು ಅವರು ಮಾನ್ಯ ಉಪ ಸಭಾಪತಿಗಳಾಗಿ ಆಯ್ಕೆಯಾಗಿದ್ದಾರೆ. ನಾವು ಅವರಿಗೆ ಪಕ್ಷಾತೀತವಾಗಿ ನಮ್ಮ ರಾಜ್ಯದ ಜನತೆಯ ಪರವಾಗಿ ನಾನು ತುಂಬು ಹೃದಯದ ಧನ್ಯವಾದಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಸ್ಥಾನವನ್ನು ಇಲ್ಲಿಯವರೆಗೆ ಎಷ್ಟೋ ಜನ ಸದಸ್ಯರು ಅಲಂಕರಿಸಿ ಹೋಗಿರುವಂತಹ ಸ್ಥಾನ. ಮಾನ್ಯ ಎಂ.ಕೆ.ಪ್ರಾಣೇಶ್‌ರವರಿಗೆ ಇದು ಬಹಳ ಕಿರಿಯ ವಯಸ್ಸಿನಲ್ಲಿ ಸಿಕ್ಕಿದೆ. ಮಾನ್ಯ ಪ್ರಾಣೇಶ್‌ರವರು ಈ ಸದನಕ್ಕೆ ಗೌರವ ಮತ್ತು ನ್ಯಾಯಯುತ ರೀತಿಯಲ್ಲಿ ಆ ಪೀಠದಲ್ಲಿ ಕುಳಿತಾಗ ಪಕ್ಷಾತೀತವಾಗಿ, ಮೊದಲನೇ ಬಾರಿಗೆ ಆಯ್ಕೆಯಾಗಿರಬಹುದು, ಹಿರಿಯ ಸದಸ್ಯರು ಇರಬಹುದು, ಎಲ್ಲರನ್ನು ಸಹ ಸಮಾನ ರೀತಿಯಲ್ಲಿ ಕಾಣುವಂತಹ ದೃಷ್ಟಿಯಲ್ಲಿ ಎಲ್ಲರಿಗೂ ಸಹ ಅವಕಾಶವನ್ನು ಕೊಡುವಂತಹ ರೀತಿಯಲ್ಲಿ ಈ ಸದನದ ಗೌರವವನ್ನು ಎತ್ತಿಹಿಡಿಯುವಂತಹ ಕೆಲಸವನ್ನು ಪ್ರಮಾಣಿಕವಾಗಿ ಮಾಡುತ್ತಾರೆಂಬ ನಂಬಿಕೆ ನನಗಿದೆ. ಅಲ್ಲದೇ, ಮುಂದೆ ಬರುವಂತಹ ಸಭಾಪತಿಯವರಿಗೆ ಮತ್ತು ಉಪ ಸಭಾಪತಿಯವರಿಗೆ ಒಂದು ಮಾದರಿಯಾಗಿ ಕೆಲಸವನ್ನು ಮಾಡುವಂತಹ ಶಕ್ತಿ ಚಾತುರ್ಯ ಅವರಲ್ಲಿದೆ. ಆ ಶಕ್ತಿಯನ್ನು ಭಗವಂತ ಅವರಿಗೆ ನೀಡಲಿ. ನಾವು ಸದನದಲ್ಲಿರುವಂತಹ ಆಡಳಿತ ಪಕ್ಷದವರು ಇರಬಹುದು, ವಿರೋಧ ಪಕ್ಷದವರು ಇರಬಹುದು ನಾವೆಲ್ಲರೂ ಸಹ ಅವರಿಗೆ ಸಂಪೂರ್ಣವಾದಂತಹ ಜವಬ್ದಾರಿಯನ್ನು ಕೊಡುವುದಕ್ಕೆ ಮತ್ತು ಅವರಿಗೆ ಬೆಂಬಲವನ್ನು ಕೊಡುವುದಕ್ಕೆ ತಯಾರಿಗಿದ್ದೇವೆ ಎನ್ನುವ ಮಾತನ್ನು ಸಹ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಮುಂದು.,)

(16)29-01-2021(12-40)ಎಂವಿ-ವಿಕೆ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು...):-**

ಅವರ ಪಕ್ಷ ಯಾವುದೇ ಇರಬಹುದು. ಅವರ ಪಕ್ಷದಲ್ಲಿ ಕೊಟ್ಟಂತಹ ಯಾವುದೇ ರೀತಿಯ ಕೆಲಸ ಕಾರ್ಯಗಳಿದ್ದರು, ಅವುಗಳನ್ನೆಲ್ಲವನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಬಂದಿರುವುದಕ್ಕೆ, ಮೊದಲನೆಯ ಬಾರಿ ಈ ಸದನಕ್ಕೆ ಆಯ್ಕೆಯಾಗಿ ಬಂದ ಕೂಡಲೆ ಇಂತಹ ಒಂದು ಉತ್ತಮವಾದ ಸ್ಥಾನ ಸಿಕ್ಕಿರುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಜವಾಗಿ ಹೆಮ್ಮೆಪಡುವುದರಲ್ಲಿ ನಾನು ಕೂಡ ಒಬ್ಬ ಎನ್ನುವಂತಹ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ನಾವೆಲ್ಲರೂ ಸಹ ಮಾನ್ಯ ಎಂ.ಕೆ.ಪ್ರಾಣೇಶ್‌ರವರ ಜೊತೆಯಲ್ಲಿದ್ದೇವೆ. ಅವರು ನಡೆಸುವಂತಹ ಕಾರ್ಯಕಲಾಪಗಳಿಗೆ ನಾವೆಲ್ಲರೂ ಸಹಕಾರ ಕೊಡುವುದಕ್ಕೆ ತಯಾರಾಗಿದ್ದೇವೆ. ಮತ್ತೊಮ್ಮೆ ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡಿಕೊಂಡು, ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಉಪ ಸಭಾಪತಿಗಳಾಗಿ ಆಯ್ಕೆಯಾಗಿದ್ದಾರೆ, ಅವರಿಗೆ ಎಲ್ಲರ ಪರವಾಗಿ ಶುಭ ಹಾರೈಕೆಯನ್ನು ಹೇಳುತ್ತಾ, ಅವರಿಗೆ ಭಗವಂತ ಆಯುರಾರೋಗ್ಯ, ಐಶ್ವರ್ಯಗಳನ್ನು ನೀಡಲಿ ಎಂದು ಪ್ರಾರ್ಥನೆ ಮಾಡಿ. ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳು. ತಾವು ಈ ದಿವಸ ಉಪ ಸಭಾಪತಿ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಚುನಾವಣೆಯನ್ನು ನಡೆಸಿದ್ದೀರಿ. ತಾವು ಅತ್ಯಂತ ಗಂಭೀರವಾಗಿ ಮತ್ತು ಗೌರವಯುತವಾಗಿ ಈ ಚುನಾವಣೆಯನ್ನು ನಡೆಸಿಕೊಟ್ಟು, ನಮ್ಮ ಸ್ನೇಹಿತರಾದಂತಹ ಮಾನ್ಯ ಎಂ.ಕೆ.ಪ್ರಾಣೇಶ್‌ರವರನ್ನು ಆಯ್ಕೆ ಮಾಡಲಾಗಿದೆ. ಇವತ್ತು ನಾನು ಕೂಡ ಉಪ ಸಭಾಪತಿ ಸ್ಥಾನಕ್ಕೆ ಸ್ಪರ್ಧಿಸಿದ್ದೆ. ಆದರೆ, ಸಂಖ್ಯಾಬಲ ಇಲ್ಲದೆ ಇರುವ ಸಲುವಾಗಿ ನಾನು ಆಯ್ಕೆಯಾಗಲಿಲ್ಲ. ಈ ಸದನದಲ್ಲಿ 75 ಜನ ಶಾಸಕರಿದ್ದೇವೆ. ಅವರ ಅಭಿಪ್ರಾಯದಂತೆ ಇವತ್ತು ಉಪ ಸಭಾಪತಿಯವರನ್ನು ಆಯ್ಕೆ ಮಾಡಿದ್ದೇವೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರು 2016ನೇ ಇಸವಿಯಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಮೊದಲನೆ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದಾರೆ. ಈ ಸದನದಲ್ಲಿ 25 ಜನ ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೇವೆ. ಇವತ್ತು ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹೇಳಿದ ಹಾಗೆ, ಸಭಾಪತಿ, ಉಪ ಸಭಾಪತಿ, ವಿರೋಧ ಪಕ್ಷದ ನಾಯಕರು, ಸಭಾ ನಾಯಕರು, ಆಡಳಿತ ಪಕ್ಷದ ಸರ್ಕಾರಿ ಮುಖ್ಯ ಸಚೇತಕರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು ಈ ಎಲ್ಲಾ ಸ್ಥಾನಗಳನ್ನು ಸ್ಥಳೀಯ ಸಂಸ್ಥೆ ಕ್ಷೇತ್ರದವರು ಅಲಂಕರಿಸಿದ್ದಾರೆ. ನಮ್ಮ ಉದ್ದೇಶ ಏನೆಂದರೆ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಬೇಕೆಂದು. ನಾನು ವಿವಿಧ ರೂಪದಲ್ಲಿ ಆಯ್ಕೆಯಾಗಿದ್ದೇನೆ. ಅಂದರೆ ಎರಡು ಬಾರಿ ಲೋಕ ಸಭಾ ಸದಸ್ಯನಾಗಿದ್ದೆ. ರಾಜ್ಯ ಸಭಾ ಸದಸ್ಯನಾಗಿದ್ದೆ. ಎರಡು ಬಾರಿ ಎಂ.ಎಲ್.ಸಿ ಆಗಿದ್ದೇನೆ. ಮೊದಲು ಎಂ.ಎಲ್.ಎ ಗಳಿಂದ ಆಯ್ಕೆಯಾಗಿ ಬಂದಿದ್ದೆ. ಆದರೆ, ಮೊಟ್ಟ ಮೊದಲ ಬಾರಿಗೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿದ್ದೇನೆ. ನಾನು ಇಲ್ಲಿಗೆ ಆಯ್ಕೆಯಾಗಿ ಬಂದ ಮೇಲೆ ಏನನ್ನು ನೋಡಿದೆ ಎಂದರೆ, ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಲ್ಲಿ ಯಾವುದೇ ಇಶ್ಯು ಇದ್ದರೆ, ಅಂದರೆ ಶಿಕ್ಷಕರಿಗೆ ಸಂಬಳ ಮತ್ತು ಪ್ರಮೋಷನ್ ಬರದಿದ್ದರೆ ಅವರೆಲ್ಲರೂ ಸಹ ಒಗ್ಗಟ್ಟಾಗಿ ಈ ಸದನಕ್ಕೆ ಬರುತ್ತಿದ್ದರು. ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳೀಯ ಸಂಸ್ಥೆಯ ಕ್ಷೇತ್ರದಿಂದ 25 ಜನರು ಆಯ್ಕೆಯಾಗಿ ಬಂದರೂ ಸಹ ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಎತ್ತಿಹಿಡಿಯುವುದಕ್ಕೆ ಆಗುತ್ತಿಲ್ಲ. ಅದು ಏಕೆ ಆಗುತ್ತಿಲ್ಲವೆಂದರೆ, ನಮ್ಮಲ್ಲಿ ಒಗ್ಗಟ್ಟಿಲ್ಲ. ನಾವು ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ಅದು ಆಗುತ್ತದೆ. ಮಾನ್ಯ ಸಭಾಪತಿಯವರೇ, ತಾವು ಸಭಾಪತಿ ಸ್ಥಾನಕ್ಕೆ ಬಂದ ನಂತರ ನಾವುಗಳು ತಮ್ಮ ಬಳಿಯೂ ಚರ್ಚೆ ಮಾಡುವುದಕ್ಕೆ ಸಮಸ್ಯೆಗಳನ್ನು ತೆಗೆದುಕೊಂಡು ಬಂದಿದ್ದೆವು. ಇವತ್ತು ಯಾರೇ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬಂದಾಗ, ಸದನ ನಡೆಯುವಾಗ ಒಮ್ಮತದಿಂದ ನಮ್ಮ ಹಳ್ಳಿಗಳ ಸಮಸ್ಯೆಯನ್ನು ಅವರ ಬಳಿಗೆ ತೆಗೆದುಕೊಂಡು ಹೋಗಿ, ಸಮಸ್ಯೆಯನ್ನು ಪರಿಹಾರ ಮಾಡಿಸುತ್ತೇವೆ. ಈ ಹಿನ್ನೆಲೆಯಲ್ಲಿ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಅತ್ಯಂತ ಗಂಭೀರವಾದ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರು ಇವತ್ತು ಉಪ ಸಭಾಪತಿಗಳಾಗಿ ಆಯ್ಕೆಯಾಗಿರುವುದು ನಿಜವಾಗಿ ಸಂತೋಷವಾಗಿದೆ. ನಾನು ಸ್ಪರ್ಧೆ ಮಾಡಿದ್ದರೂ ಸಹ ಯಾವುದೇ ರೀತಿಯ ಭಾವನೆ ಇಲ್ಲ. ಇವತ್ತು ನಾನೇ ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದೇನೆ ಎಂಬ ಭಾವನೆಯಿಂದ ನನಗೆ ಸಂತೋಷವಾಗಿದೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರಿಗೆ ಅತ್ಯಂತ ಅನುಭವವಿದೆ. ಅವರು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮಾಡಿದ್ದಾರೆ. ಅವರು ಉಪ ಸಭಾಪತಿಯ ಸ್ಥಾನದಲ್ಲಿ ಕುಳಿತಾಗ ನಿಷ್ಪಕ್ಷಪಾತವಾಗಿ ಸದನವನ್ನು ನಡೆಸಿಕೊಂಡು ಹೋಗುತ್ತಾರೆ ಎಂಬ ನಂಬಿಕೆ ನನಗೆ ಇದೆ. ಈ ಹಿನ್ನೆಲೆಯಲ್ಲಿ ನಾನು ಮತ್ತೊಮ್ಮೆ ಮಾನ್ಯ ಎಂ.ಕೆ.ಪ್ರಾಣೇಶ್‌ರವರನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರು ಈ ಸ್ಥಾನಕ್ಕೆ ಗೌರವ ತರಲಿ ಎಂದು ಆಶಿಸುತ್ತಾ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು. ನಾವೆಲ್ಲರೂ ನಿನ್ನೆ, ಮೊನ್ನೆ ಹಾಗು ಇವತ್ತು ಬೆಳಗ್ಗೆ ಅತ್ಯಂತ ಆತಂಕದಲ್ಲಿದ್ದೆವು. ಮತ್ತೆ ಪರಿಸ್ಥಿತಿ ಎಲ್ಲಿಗೆ ಹೋಗುತ್ತದೆ ಮತ್ತು ಏನಾಗುತ್ತದೆಂದು. ಇವತ್ತು ಅತ್ಯಂತ ಸಮಧಾನಕರವಾದ ವಾತಾವರಣದಲ್ಲಿ ಉಪ ಸಭಾಪತಿಗಳನ್ನು ಆಯ್ಕೆ ಮಾಡಿಕೊಟ್ಟಂತಹ ತಮಗೆ ಹಾಗೂ ನಮ್ಮೆಲ್ಲಾ ಸದಸ್ಯರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಾಸ್ತವವಾಗಿ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಈ ಸದನಕ್ಕೆ ಬಂದಾಗ ಮತ್ತು ನಾನು ಎರಡನೆ ಬಾರಿ ಆಯ್ಕೆಯಾಗಿ ಬಂದಾಗ ಪರಿಚಯವಾದರು. ಧರಣಿ ಮಾಡುವಂತಹ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಾಗಿ ಮಲಗಿದಾಗ, ಅತ್ಯಂತ ಆತ್ಮೀಯವಾಗಿ ಆರಂಭವಾದಂತಹ ಅಂದಿನ ಸ್ನೇಹ, ಇಂದು ಅದು ಹೆಮ್ಮರವಾಗಿ ಬೆಳೆದಿದೆ. ಅವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೇರೆ ತಾಲ್ಲೂಕಿನ ಮಾಕೋನಹಳ್ಳಿಯ ಕೃಷಿಕ ಕುಟುಂಬದಿಂದ ಬಂದಿದ್ದಾರೆ. ಅವರು ಇವತ್ತಿಗೂ ಸಹ ಒಬ್ಬ ಹೆಸರಾಂತ ಪ್ಲಾಂಟರ್. ಅವರು ಕಳೆದ ಮೂರುವರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಶಕಗಳಿಂದ ಸಾರ್ವಜನಿಕ ಬದುಕಿನಲ್ಲಿದ್ದಾರೆ. ಭಾರತೀಯ ಜನತಾ ಪಕ್ಷದ ಕಾರ್ಯದರ್ಶಿಯಾಗಿ, ಅದರ ಜಿಲ್ಲಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅದರ ಜೊತೆಗೆ ಜಿಲ್ಲಾಪಂಚಾಯಿತಿ ಸದಸ್ಯರಾಗಿ ಆಮೇಲೆ ಮೇಲ್ಮನೆಗೆ ಬಂದಿದ್ದಾರೆ. ಅದಕ್ಕೂ ಮುಂಚೆ ರಾಜ್ಯದ ಜಂಗಲ್ ರೆಸಾರ್ಟ್ಸ್‌ನ ಚೇರ್ಮನ್ ಆಗಿ ಕೆಲಸ ಮಾಡಿದ್ದಾರೆ. ಅವರು ನಮಗೆ ಏಕೆ ಅತ್ಯಂತ ಆತ್ಮೀಯರಾಗಿ ಮತ್ತು ಪ್ರೀತಿಯಿಂದ ಕಾಣುತ್ತಾರೆಂದರೆ, ಅವರು ಅಧ್ಯಯನಶೀಲರು. ಈ ಸದನದ ಯಾವುದೇ ವಿಷಯಗಳು ಬಂದರೆ, ಅವರು ಹತ್ತಾರು ಜನರ ಜೊತೆ ಚರ್ಚೆ ಮಾಡಿ, ಅದನ್ನು ಅಧ್ಯಯನ ಮಾಡಿ, ವಿಷಯಕ್ಕೆ ತಯಾರಾಗಿ ಬಂದು ಇಲ್ಲಿ ಮಾತನಾಡುತ್ತಿದ್ದರು. ಅದು ನಮಗೆ ಬಹಳ ಇಷ್ಟವಾಗಿದ್ದು ಮತ್ತು ಸ್ನೇಹಕ್ಕೆ ಅವರು ಮತ್ತೊಂದು ಹೆಸರು. ನಮ್ಮ ಮಾನ್ಯ ಹೆಚ್.ವಿಶ್ವನಾಥ್‌ರವರು ಹೇಳಿದ ಹಾಗೆ, ಪ್ರಾಣ ಪ್ಲಸ್ ಈಶ ಪ್ರಾಣೇಶ ಅದು ಸರಿ. ಸ್ನೇಹ ಪ್ಲಸ್ ಈಶ ಸ್ನೇಹೇಶನೂ ಹೌದು. ಹಾಗಾಗಿ ಅತ್ಯಂತ ಪ್ರೀತಿ ಮತ್ತು ಸ್ನೇಹಮಯಿಯಾದ ಅವರಿಗೆ ನಾನು ಮತ ಚಲಾಯಿಸುವ ಅವಕಾಶ ಸಿಕ್ಕಿತು ಎನ್ನುವಂತಹ ಸಮಾಧಾನವಿದೆ. ಸದಸ್ಯರಾದ ಮಾನ್ಯ ಸುನೀಲ್ ಸುಬ್ರಮಣಿಯವರ ಬಳಿ ಹೇಳುತ್ತಿದ್ದೆ. ಈಗ ಬಹಳ ಜನರು ಸಭಾಪತಿ ಮತ್ತು ಉಪ ಸಭಾಪತಿ ಆಗಬೇಕೆಂದುಕೊಂಡಿದ್ದರು. ಆದರೆ, ಅವರು ಈ ರೀತಿ ಅಂದುಕೊಂಡಿದ್ದವರಲ್ಲ. ಇವರ ಮೂಲ ದಿವಂಗತ ಎಸ್.ಎಲ್.ಧರ್ಮೇಗೌಡರ ನೆಲೆಯಿಂದ ಬಂದಂತಹವರು. ಇವತ್ತು ನಮ್ಮೆಲ್ಲರಿಗೂ ನೋವು ಇದ್ದರು ಕೂಡ, ನಮ್ಮ ಹಿರಿಯರು ಹೇಳಿದ ಹಾಗೆ ಆ ನೋವನ್ನು ಮರೆಸುವಂತಹ ಕೆಲಸವೂ ಸಹ ನಡೆದಿದೆ. ಅದೇ ನೆಲದಿಂದ ಬಂದಂತಹವರಿಗೆ ಮತ್ತೆ ಈ ಉಪ ಸಭಾಪತಿ ಸ್ಥಾನ ಸಿಕ್ಕಿರುವಂಥದ್ದು ಎಲ್ಲೋ ಒಂದು ಕಡೆ ಕೊಂಚ ಮಟ್ಟಿನ ಸಮಾಧಾನ ತರುವಂತಹ ವಿಚಾರವಾಗಿದೆ. ನಾನು ಅವರಲ್ಲಿ ಮನವಿ ಮಾಡುವುದೇನೆಂದರೆ, ಅವರು ಈ ಉಪ ಸಭಾಪತಿ ಪೀಠದ ಘನತೆ ಮತ್ತು ಗೌರವವನ್ನು ಹೆಚ್ಚಿಸುವಂತಹ ಕೆಲಸ ಮಾಡಲಿ ಎಂದು ನಾಡಿನ ಸಮಸ್ತ ಜನರ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪ್ರತಾಪ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು. ಅವರು ನನ್ನ ಪ್ರಾಣೇಶ ಕೂಡ. ಏಕೆಂದರೆ, ಅವರು ಚಿಕ್ಕಮಗಳೂರಿನ ಜಿಲ್ಲಾಧ್ಯಕ್ಷರಾಗಿದ್ದಾಗ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧ್ಯಕ್ಷನಾಗಿದ್ದೆ. ಅವರ ಚಿಕ್ಕಮಗಳೂರು ಜಿಲ್ಲೆ ಮತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಎರಡೂ ಸಹ ತಾಗಿಕೊಂಡು ಇರುವಂತಹ ಜಿಲ್ಲೆಗಳು. ಹಾಗಾಗಿ, ನನ್ನ ಸ್ನೇಹಿತರೊಬ್ಬರು ಉಪ ಸಭಾಪತಿ ಸ್ಥಾನಕ್ಕೆ ಏರಿದಂತಹ ಈ ಸಂದರ್ಭದಲ್ಲಿ, ನಾವು ಕೆಲವು ಮಂದಿ ಅನುಭವದ ಹಿನ್ನೆಲೆಯಲ್ಲಿ ಅತ್ಯಂತ ಕಿರಿಯ ಸದಸ್ಯರು. ಆದರೆ, ಇವತ್ತು ಮನಸ್ಸಿಗೆ ಒಂದು ರೀತಿಯ ವಿಶ್ವಾಸ ಬರುವಂತಹ ವಾತಾವರಣ ಸದನದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಾಣವಾಗಿದೆ ಎಂದು ಹೇಳುವಂತಹ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಮನಸ್ಸಿಗೆ ಸಾಕಷ್ಟು ಗೊಂದಲಗಳಿವೆ. ಅಂದರೆ ಮೌಲ್ಯಗಳು ಮತ್ತು ಜೀವನದ ಆದರ್ಶಗಳ ಬಗ್ಗೆ ಮಾತನಾಡುವಾಗ, ಈ ಮೇಲ್ಮನೆಯ ಚಿಂತಕರ ಚಾವಡಿಯಲ್ಲಿ ಈ ರೀತಿಯ ವಾತಾವರಣವಾದದ್ದು ಮನಸ್ಸಿಗೆ ಎಲ್ಲೋ ಒಂದು ಕಡೆ ನೋವು ಇತ್ತು. ಅಂದರೆ,

ಎಲ್ಲಿದೆ ಬಂಧನ,
ಎಲ್ಲಿದೆ ನಂದನ,
ಎಲ್ಲಾ ಇದೆ ಈ ನಮ್ಮೊಳಗೆ,
ಒಳಗಿನ ತಿಳಿಯನ್ನು ಕಲುಕದೆ ಇದ್ದರೆ,
ಅಮೃತದ ಸವಿಯಿದೆ ನಾಲಿಗೆಗೆ.

ಎಂದು ಕವಿ ಒಂದು ಕಡೆ ಹೇಳುತ್ತಾರೆ. ಬಹುಶಃ ನಮ್ಮೊಳಗಿನ ಈ ತಿಳಿಯನ್ನು ಅರ್ಥ ಮಾಡಿಕೊಂಡು, ಕೆಲವೊಂದು ಸಂದರ್ಭಗಳಲ್ಲಿ, ಕೆಲವೊಂದು ನಿರ್ದಿಷ್ಟ ಕಾರಣಗಳಿಂದ ಮೇಲೆ ನಿಂತು ಇದನ್ನೆಲ್ಲಾ ಯೋಚನೆ ಮಾಡಿದಾಗ, ಬಹುಶಃ ಈ ಮೇಲ್ಮನೆಯ ಗೌರವ ಏನಿದೆ, ಹೊಸ ಸದಸ್ಯರುಗಳು ಯಾವ ನಿರೀಕ್ಷೆಯನ್ನು ಇಟ್ಟುಕೊಂಡು ಬಂದಿದ್ದೇವೆ ಆ ಸ್ಥಾನಕ್ಕೆ ಒಂದು ಅರ್ಥವನ್ನು ಕೊಡುವಂತಹ ದೃಷ್ಟಿಯಲ್ಲಿ ಆಗುತ್ತದೆ. ನಮ್ಮ ಈ ಸದನಕ್ಕೆ ಘನತೆ ಮತ್ತು ಗೌರವವಿದೆ ಅದು ಇನ್ನಷ್ಟು ಎತ್ತರಕ್ಕೆ ಏರುವಂತಹ ರೀತಿಯಲ್ಲಿ ನಮ್ಮೆಲ್ಲರ ಸಾಮೂಹಿಕ ಪ್ರಯತ್ನವಾಗಲಿ. ಜೊತೆಗೆ ಅನುಭವಸ್ಥರು ಹೇಳುವಂತಹ ಮಾತಿನಂತೆ, ಆದದ್ದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಅದನ್ನು ತಿದ್ದಿ ಇನ್ನಷ್ಟು ಒಳ್ಳೆಯ ವಾತಾವರಣಕ್ಕೆ ಕೊಂಡೊಯ್ಯುವಂತಹ ಅವಕಾಶ ನಮ್ಮೆಲ್ಲರಿಗೂ ಇದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸದಸ್ಯರು ಒಳ್ಳೆಯ ಮನಸ್ಸಿನಿಂದ ಉಪ ಸಭಾಪತಿಯವರ ಚುನಾವಣೆಯನ್ನು ಮಾಡಿದ್ದಾರೆ. ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಬಹಳ ಹತ್ತಿರದಿಂದ ಗೊತ್ತಿರುವ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆ. ಬಹುಶಃ ಆ ಸ್ಥಾನಕ್ಕೆ ಸರಿಯಾದ ಗೌರವವನ್ನು, ಸರಿಯಾದ ನ್ಯಾಯವನ್ನು ಕೊಡುವಂತಹ ದೃಷ್ಟಿಯಲ್ಲಿ ಖಂಡಿತವಾಗಿ ಅವರಲ್ಲಿ ಆ ಸಾಮರ್ಥ್ಯವಿದೆ. ಅವರಿಗೆ ದೇವರು ಆ ಶಕ್ತಿಯನ್ನು ಕೊಡಲಿ ಎಂದು ಹೇಳಿ, ಒಬ್ಬ ಸ್ನೇಹಿತನಾಗಿ ನಮ್ಮ ಎಂ.ಕೆ.ಪ್ರಾಣೇಶ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳು. ಇವತ್ತು ನನಗೆ ತುಂಬಾ ಸಂತೋಷದ ದಿವಸ. ಏಕೆಂದರೆ, ನಾನು ಮತ್ತು ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಸುಮಾರು ನಲವತ್ತು ವರ್ಷದ ಸ್ನೇಹಿತರು. ಮಾನ್ಯ ಪ್ರಾಣೇಶ್‌ರವರು ಯಾವೊತ್ತು ಸಹ ಹುದ್ದೆಯನ್ನು ಕೇಳಿ ಪಡೆದಿಲ್ಲ. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿಕ್ಕಮಗಳೂರು ಜಿಲ್ಲಾ ಬಿ.ಜೆ.ಪಿ ಅಧ್ಯಕ್ಷರಾಗಿದ್ದರು. ಹಾಗೆಯೇ ಅವರು ಮೇಲಕ್ಕೆ ಏರಿದರು. ಹಾಗೆಯೇ ನಾನು ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರಾಗಿದ್ದಾಗ ಅವರು ನಮ್ಮ ಕೊಡಗು ಜಿಲ್ಲೆಗೆ ವೀಕ್ಷಕರಾಗಿ ಬಂದಿದ್ದರು. ಅವರು ವೀಕ್ಷಕರಾಗಿ ಬಂದಂತಹ ಸಂದರ್ಭದಲ್ಲಿ ತುಂಬಾ ನಿಷ್ಪಕ್ಷಪಾತವಾಗಿ ಕೆಲಸ ಮಾಡಿದರು. ಆಗ ನಮ್ಮ ಸ್ನೇಹ ಬೆಳೆಯಿತು. ನಾನು ಅವರಿಗೆ ಕೇಳಿದೆ ಏನಪ್ಪ ಏನೋ ಉಪ ಸಭಾಪತಿ ಸ್ಥಾನ ಇದೆಯಂತಲ್ಲಾ ಎಂದು. ಆಗ ಅವರು ನನಗೆ ಒಂದು ಮಾತು ಹೇಳಿದರು.

**(ಮುಂದು...)**

(17) 29.01.2021 01.50 LL-MD(VK)

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ(ಮುಂದು):–**

ಅದೇನೆಂದರೆ, "ಬೇಡ ಕಣೋ, ಯಾವುದನ್ನೂ ಕೇಳಿ ತೆಗೆದುಕೊಳ್ಳಬಾರದು. ನಾವು ಜೂನಿಯರ್ ಇದ್ದೇವೆ. ನಮಗೆ ಇದರ ಅವಶ್ಯಕತೆ ಇಲ್ಲ" ಎಂದು ಹೇಳಿದರು. ಅವರಿಗೆ ಇದು ಬಯಸದೇ ಬಂದಂತಹ ಭಾಗ್ಯ. ಅದೇ ರೀತಿ ಜಂಗಲ್ ಲಾಡ್ಜ್‌ನಲ್ಲಿಯೂ ಸಹ ಅವರಿಗೆ ತಾನು ಅಧ್ಯಕ್ಷನಾಗುತ್ತೇನೆಂದು ಗೊತ್ತಿರಲಿಲ್ಲ. ಆದರೆ, ಆಗ ಅವರಿಗೆ ಅಧ್ಯಕ್ಷ ಸ್ಥಾನ ಸಿಕ್ಕಿರುತ್ತದೆ. ಅದೇ ರೀತಿ ಜಿಲ್ಲಾ ಪಂಚಾಯತ್ ಚುನಾವಣೆಗೆ ಅವರನ್ನು ಬಹಳ ಒತ್ತಾಯ ಮಾಡಿ ನಿಲ್ಲಿಸಿರುತ್ತಾರೆ. ಎಂ.ಎಲ್.ಸಿ. ಸ್ಥಾನಕ್ಕೆ ಚುನಾಯಿಸಬೇಕಾದಾಗ ಕೂಡ ಚಿಕ್ಕಮಗಳೂರು ಜನ ಅವರಿಗೆ ಬಹಳ ಒತ್ತಾಯ ಮಾಡಿ ಚುನಾವಣೆಗೆ ನಿಲ್ಲಿಸಿರುತ್ತಾರೆ. ಇದು ಅವರ ಯೋಗದಲ್ಲಿತ್ತು. ಅದರಂತೆ, ಯೋಗದಲ್ಲಿರುವುದನ್ನು ಯಾರು ಕೂಡ ತಪ್ಪಿಸುವುದಕ್ಕೆ ಸಾಧ್ಯವಿಲ್ಲವೆನ್ನುವುದಕ್ಕೆ ಶ್ರೀ ಎಂ.ಕೆ. ಪ್ರಾಣೇಶ್‌ರವರೇ ಉದಾಹರಣೆ. ಶ್ರೀ ಎಂ.ಕೆ. ಪ್ರಾಣೇಶ್‌ರವರು ಈ ಸದನದ ಗೌರವವನ್ನು ಎತ್ತಿ ಹಿಡಿಯುತ್ತಾರೆ ಎಂದು ನನಗೆ ಒಂದು ನಂಬಿಕೆ ಇದೆ. ಅದೇ ರೀತಿ, ಶ್ರೀ ಎಂ.ಸಿ. ನಾಣಯ್ಯನವರನ್ನು ನಾನು ತುಂಬಾ ಹತ್ತಿರದಿಂದ ನೋಡಿರುತ್ತೇನೆ. ಅವರನ್ನು ಈ ಸದನದಲ್ಲಿ ಎಲ್ಲರೂ ಹೊಗಳುತ್ತಾರೆ ಮತ್ತು ಅವರ ಬಗ್ಗೆ ಒಳ್ಳೆಯ ವಿಚಾರಗಳನ್ನು ಹೇಳುತ್ತಾರೆ. ದಿವಂಗತ ಶ್ರೀ ಎ.ಕೆ. ಸುಬ್ಬಯ್ಯನವರು ಸಹ ಒಳ್ಳೆಯ ಕೆಲಸ ಮಾಡಿದ್ದಾರೆ. ಅದೇ ರೀತಿ ಶ್ರೀ ಎಂ.ಕೆ. ಪ್ರಾಣೇಶ್‌ರವರು ಯಾವಾಗ ಸಭಾಪತಿ ಸ್ಥಾನದಲ್ಲಿ ಕೂರುತ್ತಾರೆ, ಆ ಸಂದರ್ಭದಲ್ಲಿ ಸದನದ ಎಲ್ಲಾ ಸದಸ್ಯರ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳುತ್ತಾರೆ ಮತ್ತು ಆ ಸ್ಥಾನಕ್ಕೆ ಯಾವುದೇ ರೀತಿಯ ಚ್ಯುತಿ ಬಾರದ ರೀತಿಯಲ್ಲಿ ಕೆಲಸ ಮಾಡುತ್ತಾರೆಂಬ ನಂಬಿಕೆ ನನಗೆ ಇದೆ. ಹಾಗಾಗಿ, ನಾನು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಶ್ರೀ ಎಂ.ಕೆ. ಪ್ರಾಣೇಶ್‌ರವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಲಿ ಮತ್ತು ಅವರು ಎಲ್ಲಾ ಸಂದರ್ಭಗಳಲ್ಲಿಯೂ ಇನ್ನೂ ಒಳ್ಳೆಯ ಸ್ಥಾನಕ್ಕೆ ಹೋಗಲಿ ಎಂದು ಹಾರೈಸುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ಶ್ರೀ ಎಂ.ಕೆ. ಪ್ರಾಣೇಶ್‌ರವರು ಉಪಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗಾಗಲೇ ಅನೇಕ ಜನ ಉಪಸಭಾಪತಿ ಚುನಾವಣೆ ಬಗ್ಗೆ ಮತ್ತು ಅದರ ಪ್ರಕ್ರಿಯೆ ಬಗ್ಗೆ ಮಾತನಾಡಿದ್ದಾರೆ. ನನಗೆ ವಿಶೇಷವಾಗಿ ಮಾನ್ಯ ಸಭಾಪತಿಯವರ ಮೇಲೆ ಬಹಳ ವಿಶ್ವಾಸ ಮತ್ತು ಅವರ ಹಿನ್ನೆಲೆ ನೋಡಿದಾಗ, ಡಿಸೆಂಬರ್ 15ನೇ ತಾರೀಖು ಈ ಸದನದಲ್ಲಿ ಯಾವ ಅನಾಹುತ ಆಯಿತು, ಅದು ಬೇರೆ ಬೇರೆ ಕಾರಣಕ್ಕೋಸ್ಕರ, ಯಾರೂ ಊಹಿಸದ ರೀತಿಯಲ್ಲಿ ಆಯಿತು. ಆದರೆ, ಸುಮಾರು ಎರಡು ದಿವಸದಿಂದ ಉಪಸಭಾಪತಿ ಚುನಾವಣೆ ಮತ್ತು ಪ್ರಕ್ರಿಯೆ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿತ್ತು. ಆದರೆ, ಮಾನ್ಯ ಸಭಾಪತಿಯವರು ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿಯುವಂತಹ ಕೆಲಸ ಮಾಡಿದ್ದಾರೆ. ಅದಕ್ಕಾಗಿ ನಾನು ಮೊದಲಿಗೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರ ಜೊತೆಗೆ, ನಾನು, ಶ್ರೀ ಎಂ.ಕೆ. ಪ್ರಾಣೇಶ್‌ರವರು ಮತ್ತು ಶ್ರೀ ಬಿ.ಎಂ.ಎಲ್. ಕಾಂತರಾಜುರವರು ಮೊದಲನೇ ಬಾರಿಗೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದಾಗ ಪ್ರಮಾಣ ವಚನವನ್ನು ಒಟ್ಟಿಗೆ ತೆಗೆದುಕೊಂಡಿರುತ್ತೇವೆ, ಅಲ್ಲಿಂದ ನಮ್ಮ ಸ್ನೇಹ ಪ್ರಾರಂಭವಾಗಿರುತ್ತದೆ. ಈಗಾಗಲೇ ಮಾನ್ಯ ಕೆ.ಸಿ. ಕೊಂಡಯ್ಯನವರು ಹೇಳಿದ ಹಾಗೆ, ಸ್ಥಳೀಯ ಸಂಸ್ಥೆಗಳಿಂದ ಸುಮಾರು 25 ಜನ ಸದಸ್ಯರು ಈ ಸದನಕ್ಕೆ ಆಯ್ಕೆಯಾಗಿರುತ್ತೇವೆ. ಅದರಂತೆ, 25 ಜನ ಸದಸ್ಯರು ಆಯ್ಕೆಯಾಗಿದ್ದರೂ ಸಹ ಒಬ್ಬರಿಗೊಬ್ಬರ ನಡುವೆ ಚರ್ಚೆ ಮಾಡತಕ್ಕಂತಹ ಪರಿಪಾಠ ಹಿಂದೆ ಇರಲಿಲ್ಲ. ಮಾನ್ಯ ಹಿರಿಯ ಶಾಸಕರಾದ ಶ್ರೀ ಕೆ.ಸಿ. ಕೊಂಡಯ್ಯನವರು ಸ್ಥಳೀಯ ಸಂಸ್ಥೆಗಳ ಶಾಸಕರ ಕೂಟವನ್ನು ರಚನೆ ಮಾಡಿ, ಯಾವಾಗ ಸದನ ನಡೆಯುತ್ತದೆ, ಆಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಪೌರಾಡಳಿತ ಸಚಿವರನ್ನು ಭೇಟಿ ಮಾಡಿ ನಮ್ಮ ಗ್ರಾಮೀಣ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಂತಹ ಒಂದು ಪರಿಪಾಠ ಪ್ರಾರಂಭವಾಯಿತು. ತನ್ಮೂಲಕ, ಮಾನ್ಯ ಈಶ್ವರಪ್ಪನವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ನಂತರ, ಸ್ಥಳೀಯ ಸಂಸ್ಥೆಗಳಿಂದ ಎಲ್ಲಾ ಶಾಸಕರನ್ನು ಕರೆದು, ಚರ್ಚೆ ಮಾಡಿ ನಮ್ಮ ಸಮಸ್ಯೆಗಳಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಿದ್ದಾರೆ. ಅವರಿಗೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಶ್ರೀ ಎಂ.ಕೆ. ಪ್ರಾಣೇಶ್‌ರವರು ಪ್ರಜಾಪ್ರಭುತ್ವ ಯಾವ ಒಂದು ಸಂವಿಧಾನದಡಿಯಲ್ಲಿ ಇದೆ, ಆ ಸಂವಿಧಾನವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡುತ್ತಾರೆಂದು ಭಾವಿಸಿ, ಈ ಹಿಂದೆ ನಡೆದಂತಹ ಎಲ್ಲಾ ಕಹಿ ಘಟನೆಗಳನ್ನು ಮರೆತು, ಮುಂದೆ ಈ ಸದನದ ಇತಿಹಾಸ ಏನಿದೆ, ಅದಕ್ಕೆ ನಾವೆಲ್ಲರೂ ಮೇಲ್ಪಂಕ್ತಿಯಾಗಿ, ಸಂಯಮದಿಂದ ವರ್ತನೆ ಮಾಡುವಂತಹದ್ದನ್ನು ನಾವು ಬೆಳೆಸಿಕೊಳ್ಳಬೇಕೆಂದು ಹೇಳಿ, ಮತ್ತೊಮ್ಮೆ ಸ್ನೇಹಿತ ಶ್ರೀ ಎಂ.ಕೆ. ಪ್ರಾಣೇಶ್‌ರವರಿಗೆ ಅಭಿನಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಉಪಸಭಾಪತಿ ಸ್ಥಾನಕ್ಕೆ ನಡೆದಂತಹ ಚುನಾವಣೆ ಮತ್ತು ಅದರಲ್ಲಿ ಜಯಗಳಿಸಿದ ನನ್ನ ಮಿತ್ರ ಶ್ರೀ ಎಂ.ಕೆ. ಪ್ರಾಣೇಶ್‌ರವರಿಗೆ ಧನ್ಯವಾದಗಳನ್ನು ಮತ್ತು ಅಭಿನಂದನೆಯನ್ನು ಹೇಳುತ್ತೇನೆ. ಇವೊತ್ತಿನ ದಿವಸ ನಡೆದಂತಹ ಒಟ್ಟು ಕಲಾಪ ಅಂದರೆ, ವಿಶೇಷವಾಗಿ ಉಪಸಭಾಪತಿ ಚುನಾವಣೆ ಮತ್ತು ಇವೊತ್ತಿನ ದಿವಸ ಬೆಳಗ್ಗೆಯಿಂದ ನಡೆದಂತಹ ಕಲಾಪದಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಈ ಸದನದ ಘನತೆ, ಗೌರವಗಳನ್ನು ಎತ್ತಿ ಹಿಡಿಯುವಲ್ಲಿ ಹಾಗೂ ಈ ಹಿಂದೆ ಆದಂತಹ ಘಟನೆಗಳನ್ನು ಮರೆಮಾಚಿಸಿ, ಶತಮಾನದ ಇತಿಹಾಸ ಇರತಕ್ಕಂತಹ ಈ ಸದನಕ್ಕೆ ಹೆಚ್ಚಿನ ಗೌರವ ರೀತಿಯಲ್ಲಿ ತಮ್ಮ ಮುಂದಿನ ಹೆಜ್ಜೆ ಇಡತಕ್ಕಂತಹ ಕೆಲಸವನ್ನು ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಸಭಾನಾಯಕರು ಮತ್ತು ಈ ಸದನದ ಎಲ್ಲಾ ಸದಸ್ಯರು ಮಾಡಿರುವುದು ಬಹಳ ಒಳ್ಳೆಯ ಬೆಳವಣಿಗೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೊತ್ತಿನ ದಿವಸ ಸ್ನೇಹಿತ ಶ್ರೀ ಎಂ.ಕೆ. ಪ್ರಾಣೇಶ್‌ರವರನ್ನು ನಾನು ಹಲವಾರು ಬಾರಿ ನೋಡಿದ್ದೇನೆ. ಅವರು ಈ ಸದನದ ಸದಸ್ಯರಾಗಿ ಆಯ್ಕೆಯಾಗಿ ಬಂದಂತಹ ಸಂದರ್ಭದಲ್ಲಿ ನಾವು ವಿರೋಧ ಪಕ್ಷದಲ್ಲಿದ್ದೆವು. ಅವರು ಯಾವುದೇ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ಪ್ರಶ್ನೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಸಂಪೂರ್ಣ ತಯಾರಿ ಮಾಡಿಕೊಂಡು ಬರುವ ರೀತಿ ಮತ್ತು ಜನಪರವಾಗಿರತಕ್ಕಂತಹ ಚಿಂತನೆಗಳು, ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂತಹ ಅವರು ಅನೇಕ ಪ್ರಶ್ನೆಗಳನ್ನು ಕೇಳಿ ಅದಕ್ಕೆ ತಾರ್ಕಿಕವಾದ ಅಂತ್ಯ ಕಂಡುಕೊಳ್ಳುವಂತಹ ಕೆಲಸ ಮಾಡಿರುತ್ತಾರೆ. ಅದು ಶುದ್ಧ ಕುಡಿಯುವ ನೀರಿನ ಘಟಕಗಳ ವಿಚಾರ ಇರಬಹುದು, ಸ್ಥಳೀಯವಾಗಿರತಕ್ಕಂತಹ ಗ್ರಾಮ ಪಂಚಾಯಿತಿಗಳ ಒಟ್ಟು ಅಭಿವೃದ್ಧಿ ವಿಚಾರ ಇರಬಹುದು, ಈ ಎಲ್ಲಾ ವಿಚಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಒಬ್ಬ ನಿಜವಾದ ಜನಪ್ರತಿನಿಧಿಯಾಗಿ ಯಾವ ರೀತಿ ಜನರಿಗೆ ಸ್ಪಂದಿಸಬಹುದು ಎನ್ನತಕ್ಕಂಥ ರೀತಿಯಲ್ಲಿ ಸದನದ ಒಬ್ಬ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಯಾಗಿ ತಮ್ಮ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿರುತ್ತಾರೆ. ಇವೊತ್ತಿನ ದಿವಸ ಅವರು ಉಪಸಭಾಪತಿ ಆಗತಕ್ಕಂತಹ ಸಂದರ್ಭವೂ ಕೂಡ.., ಆಗಲೇ ನಮ್ಮೆಲ್ಲರ ಸ್ನೇಹಿತರಾದ ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿಯವರು ಹೇಳಿದ ಹಾಗೆ, ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಸಭಾಪತಿ ಸ್ಥಾನ ಬಯಸದೇ ಬಂದ ಭಾಗ್ಯ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಯಾವುದೇ ಸ್ಥಾನವನ್ನು ಬೇಕು ಎಂದು ಕೇಳುವವರು ನಮ್ಮ ಶ್ರೀ ಎಂ.ಕೆ. ಪ್ರಾಣೇಶ್‌ರವರಲ್ಲ. ಆದರೆ, ನಮ್ಮಲ್ಲಿ ಸಂಪ್ರದಾಯ ಏನಿದೆಯೆಂದರೆ, ಯಾವುದೇ ಸ್ಥಾನ ಬಯಸದೇ ಇರುವಂತಹವರಿಗೆ ಅರಸಿಕೊಂಡು ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀ ಎಂ.ಕೆ. ಪ್ರಾಣೇಶ್‌ರವರು ಪಕ್ಷದ ಶಿಸ್ತಿನ ಸಿಪಾಯಿಯಾಗಿ, ಪಕ್ಷದ ಅಧ್ಯಕ್ಷರಾಗಿ ಅನೇಕ ಜವಾಬ್ದಾರಿಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದು ಮತ್ತು ಎಲ್ಲಾ ಹಿರಿಯರನ್ನು ಅತ್ಯಂತ ಗೌರವಯುತವಾಗಿ ಕಾಣುವಂತಹ ಅವರ ಸ್ವಭಾವ ಈ ಒಂದು ಸ್ಥಾನಕ್ಕೆ ಕೂರಿಸಿರುತ್ತದೆ. ಹಾಗಾಗಿ, ಇನ್ನೂ ಹೆಚ್ಚು ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ಅವರು ಈ ಸ್ಥಾನದಲ್ಲಿ ಹೆಚ್ಚು ಸೇವೆ ಮಾಡುತ್ತಾರೆಂಬ ವಿಶ್ವಾಸ ನನಗಿದೆ. ಈ ಸಂದರ್ಭದಲ್ಲಿ ದೇವರು ಅವರಿಗೆ ಹೆಚ್ಚಿನ ಆರೋಗ್ಯ ಮತ್ತು ಆಯಸ್ಸನ್ನು ಕೊಟ್ಟು, ಅವರು ಅತ್ಯಂತ ಯಶಸ್ವಿಯಾಗಿ ಈ ಅವಧಿಯನ್ನು ಪೂರೈಸಲಿ ಎಂದು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ: ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಬಹುಶಃ ಪ್ರಾಮಾಣಿಕವಾಗಿ ಮಾತನಾಡಬೇಕಾದರೆ, ಆಡಳಿತಾರೂಢ ಪಕ್ಷವಾಗಿ ನಾವೆಲ್ಲರೂ ಈ ಪ್ರಕ್ರಿಯೆ ಪ್ರಾರಂಭವಾದಾಗ ಸಭಾಪತಿ ಸ್ಥಾನ ನಮಗೆ ಬರುತ್ತದೆಯೆಂದು ಅಂದುಕೊಂಡಿದ್ದೆವು. ಅದರಂತೆ, ನಮ್ಮಲ್ಲಿ ಅನೇಕ ಹಿರಿಯರು, ಮೇದಾವಿಗಳು, ಧುರೀಣರು ಆ ಸ್ಥಾನಕ್ಕೆ ಅರ್ಹರಿದ್ದಂತಹವರು ಇದ್ದರು. ನಾವು ಜೂನಿಯರ್ಸ್ ಎಂದು ಏನು ಕರೆಸಿಕೊಳ್ಳುತ್ತೇವೆ, ನಾವು ಯಾರು ಕೂಡ ಉಪಸಭಾಪತಿ ಸ್ಥಾನದ ಬಗ್ಗೆ ನಿರೀಕ್ಷೆ ಮಾಡಿರಲಿಲ್ಲ. ಆದರೆ, ನಮ್ಮ ಮತ್ತು ಜೆ.ಡಿ.(ಎಸ್) ಪಕ್ಷದ ಸಹಕಾರದಿಂದ ನಡೆದಂತಹ ಚುನಾವಣೆಯಲ್ಲಿ ಶ್ರೀ ಎಂ.ಕೆ. ಪ್ರಾಣೇಶ್‌ರವರ ಹೆಸರು ಅನಿರೀಕ್ಷಿತವಾಗಿ ಬಂದಾಗ, ನಾವೆಲ್ಲರೂ ಸಹ ಬಹಳ ಸಂತೋಷಪಟ್ಟೆವು. ನಾವು ಅವರೊಂದಿಗೆ ಪಕ್ಷದೊಳಗೆ ಹಾಗೂ ಅನೇಕ ಸಂದರ್ಭಗಳಲ್ಲಿ ಅವರ ಜೊತೆ ಕೆಲಸ ಮಾಡುವಂತಹ ಸಂದರ್ಭದಲ್ಲಿ ಮತ್ತು ಎಲ್ಲಾ ಹಿರಿಯ ಸದಸ್ಯರುಗಳು ಸಹ ಈ ಸದನದಲ್ಲಿ ಮಹಿಳೆಯರಿಗೆ ಯಾವ ಒಂದು ಗೌರವಯುತವಾದ ಪ್ರೀತಿಯ ವಾತಾವರಣವನ್ನು ಕಲ್ಪಿಸಿದ್ದಾರೆಂದು ತಮಗೆಲ್ಲಾ ಗೊತ್ತಿರುತ್ತದೆ. ಏಕೆಂದರೆ, ಈ ಸದನದಲ್ಲಿ ನಾವು ಕಡಿಮೆ ಸಂಖ್ಯೆಯಲ್ಲಿದ್ದರೂ ಸಹ ನಮಗೆ ಯಾವೊತ್ತು ಸಮಯ ನೀಡಿರುವುದಿಲ್ಲವೆಂದು ಅನ್ನಿಸಿರುವುದಿಲ್ಲ. ಕೆಲವೊಮ್ಮೆ ನಾವು ಜಗಳ ಮಾಡಿಯಾದರೂ ಸಮಯ ತೆಗದುಕೊಂಡಿರುತ್ತೇವೆ. ಅದೇ ರೀತಿ ಶ್ರೀ ಎಂ.ಕೆ. ಪ್ರಾಣೇಶ್‌ರವರು ಕೂಡ ಒಂದು ಸ್ವಲ್ಪ ಮಹಿಳಾ ಪಕ್ಷಪಾತಿ ಎಂದು ನಾನು ಇವೊತ್ತಿನ ದಿವಸ ಹೇಳಬೇಕಾಗುತ್ತದೆ. ಶ್ರೀ ಸುನೀಲ್ ಸುಬ್ರಮಣಿ ಮತ್ತು ಶ್ರೀ ಕವಟಗಿಮಠ ಮಹಾಂತೇಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಲ್ಲಿಕಾರ್ಜುನವರು ಹಾಗೂ ಇತರೆ ನಮ್ಮ ಸಮ್ಮಿತ್ರರ ರೀತಿ ಶ್ರೀ ಎಂ.ಕೆ. ಪ್ರಾಣೇಶ್‌ರವರು ನಮಗೆ ಹೆಚ್ಚು ಅವಕಾಶ ನೀಡುವುದು ಇರಬಹುದು; ಯಾವುದೇ ವಿಷಯಗಳ ಬಗ್ಗೆ ಉತ್ತೇಜನ ನೀಡುವುದು ಇರಬಹುದು; ಯಾವುದಾದರೂ ವಿಷಯಗಳಲ್ಲಿ ನಮ್ಮ ಜೊತೆಯಲ್ಲಿ ನಿಲ್ಲುವುದು ಇರಬಹುದು ಅಥವಾ ನಮ್ಮನ್ನು ಸೌಮ್ಯವಾಗಿ ಕಂಡರೂ ಸಹ, ವಿಚಾರಗಳು ಬಂದಾಗ ಅದರಲ್ಲಿ ಅವರಿಗೆ ಸ್ಪಷ್ಟತೆ ಇದೆ, ನಿಷ್ಠುರತೆ ಇದೆ, ಕೋಪ ಕೂಡ ಮಾಡಿಕೊಳ್ಳುತ್ತಾರೆ; ಅಧ್ಯಯನ ಸಹ ಇದೆ, ಮಲೆನಾಡಿನ ಸಂಸ್ಕೃತಿಯಿಂದ ಸಹ ಅವರು ಬಂದಿರುತ್ತಾರೆ ಹಾಗೂ ಹಿರಿಯರನ್ನು ಗೌರವಿಸುವುದು ಇರಬಹುದು ಮತ್ತು ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವುದು ಸೇರಿದಂತೆ ಇತರೆ ಅನೇಕ ಉನ್ನತ ಗುಣಗಳನ್ನು ಸಹ ಅವರು ಹೊಂದಿರುತ್ತಾರೆ. ನಮ್ಮ ನಾಡು ಹಾಗೂ ಇಡೀ ದೇಶದಲ್ಲಿಯೇ ಉನ್ನತ ಪರಂಪರೆಗೆ ಸಾಕ್ಷಿಯಾಗಿರುವಂತಹ ನಮ್ಮ ಕರ್ನಾಟಕ ವಿಧಾನ ಪರಿಷತ್ತಿನ ಇತಿಹಾಸದಲ್ಲಿ ಯಾವುದೋ ನಡೆಯಬಾರದಂತಹ ಕೆಲವು ಘಟನೆಗಳು ನಡೆದು ಹೋಗಿವೆ. ಅದೆಲ್ಲವನ್ನೂ ನಾವೆಲ್ಲರೂ ಸೇರಿ ತಿದ್ದಿಕೊಳ್ಳೋಣ. ಮುಂದಿನ ದಿನಗಳಲ್ಲಿ ಈ ಉನ್ನತ ಪರಂಪರೆಯನ್ನು ಸರಿಪಡಿಸಿಕೊಂಡು ಹೋಗುವುದರಲ್ಲಿ ಅವರದ್ದು ಕೂಡ ಯೋಗಧಾನ ಇರುತ್ತದೆ. ಅದರಂತೆ, ಇನ್ನಷ್ಟು ಯುವಕ–ಯುವತಿಯರಿಗೆ ಹಾಗೂ ಈ ಸದನದ ಕೊನೆಯ ಸಾಲಿನಲ್ಲಿರುವಂತಹ ಸಂಸದೀಯ ಪಟುಗಳಿಗೆ, ಅದು ಯಾವುದೇ ಪೊಲಿಟಿಕಲ್ ಪಾರ್ಟಿ ಇರಬಹುದು, ಇಂತಹ ಅವಕಾಶಗಳು ಜೆ.ಡಿ(ಎಸ್) ಪಕ್ಷದಲ್ಲಿಯೂ ಸಿಕ್ಕಿದೆ, ಕಾಂಗ್ರೆಸ್ ಪಕ್ಷದಲ್ಲಿಯೂ ಸಿಕ್ಕಿದೆ. ಅದೇ ರೀತಿ ನಮ್ಮ ಪಕ್ಷದಲ್ಲಿಯೂ ಸಹ ಸಿಕ್ಕಿರುತ್ತದೆ. ಅನೇಕ ಸಂದರ್ಭಗಳಲ್ಲಿ ವ್ಯಕ್ತಿಗತ ಸಾಧನೆಗಿಂತ ಸಂದರ್ಭ, ವಿಷಯ ಪಾಂಡಿತ್ಯ, ರಾಜಕೀಯದ ಅವಶ್ಯಕತೆಗಳಂತಹ ಆಧಾರದ ಮೇರೆಗೆ ಪೊಲಿಟಿಕಲ್ ಪಾರ್ಟಿ ನಿರ್ಧಾರ ತೆಗೆದುಕೊಳ್ಳುತ್ತದೆ. ಆ ನಿಟ್ಟಿನಲ್ಲಿ ಅಂತಹ ಒಂದು ಸೌಭಾಗ್ಯ ಆ ಸ್ಥಾನದಲ್ಲಿ ಉಪಸಭಾಪತಿಗಳಾಗುವ ಸೌಭಾಗ್ಯ ಸಹೋದರರಾಗಿರುವ ಶ್ರೀ ಎಂ.ಕೆ. ಪ್ರಾಣೇಶ್‌ರವರಿಗೆ ಬಂದಿದೆ. ಅವರಿಗೆ ಭಗವಂತನು ಉತ್ತಮ ಆರೋಗ್ಯ ಮತ್ತು ಒಳ್ಳೆಯ ಭವಿಷ್ಯವನ್ನು ಕರುಣಿಸಲೆಂದು ಹಾರೈಸಿ, ನಾನು ಮಾತನಾಡುವುದಕ್ಕೆ ಸಹಕಾರ ನೀಡಿದಂತಹ ಎಲ್ಲಾ ಹಿರಿಯರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(...ಮುಂದುವರೆದಿದೆ)

(18) 29.01.2021 1.00 ವೈಎಲ್–ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಕೆ.ಪ್ರಾಣೇಶ್ (ಉಪ ಸಭಾಪತಿಯವರು):–** ಮಾನ್ಯ ಸಭಾಪತಿಯವರೇ, ತಾವು ಉಪ ಸಭಾಪತಿ ಚುನಾವಣೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ತಮಗೆ ಪ್ರಥಮವಾಗಿ ಅಭಿನಂದನೆಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸುತ್ತೇನೆ. 113 ವರ್ಷಗಳ ಇತಿಹಾಸ ಹೊಂದಿರುವಂಥ, ಚಿಂತಕರ ಚಾವಡಿ ಎಂದು ಕರೆಸಿಕೊಳ್ಳುವ ಈ ವಿಧಾನ ಪರಿಷತ್ತಿನಲ್ಲಿ ನನ್ನನ್ನು ಜವಾಬ್ದಾರಿಯುತ, ಗೌರವಾನ್ವಿತ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ನನ್ನ ಎಲ್ಲಾ ಶಾಸಕರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನನ್ನ ಪಕ್ಷವು ಈ ಸ್ಥಾನಕ್ಕೆ ಕೂರಿಸಲು ನನ್ನನ್ನು ಪ್ರಥಮ ಬಾರಿಗೆ ಗುರುತು ಮಾಡುವಂಥ ಕೆಲಸ ಮಾಡಿದ್ದೆ. ರಾಜ್ಯಾಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿರಿಯ ನಾಯಕರೆಲ್ಲರೂ ಸೇರಿ ನನ್ನನ್ನು ಆಯ್ಕೆ ಮಾಡುವಂಥ ಸಂದರ್ಭದಲ್ಲಿ ನಾನು ಉಪ ಸಭಾಪತಿ ಸ್ಥಾನಕ್ಕೆ ಬರುತ್ತೇನೆ ಎಂದು ಕನಸಿನಲ್ಲಿಯೂ ಸಹ ಯೋಚನೆ ಮಾಡಿರಲಿಲ್ಲ.

ಸಭೆಗೆ ಕರೆದಂಥ ಸಂದರ್ಭದಲ್ಲಿ ಸಂಜೆ 7.30 ರವರೆಗೂ ಯಾರನ್ನು ಅಭ್ಯರ್ಥಿಯಾಗಿ ಉಪ ಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡಬೇಕೆಂದು ಸುಮ್ಮನೆ ಯೋಚನೆ ಮಾಡಿಕೊಂಡು ಕುಳಿತುಕೊಂಡಿದ್ದೆವು. ನಂತರ ತುಂಬಾ ಹಿರಿಯ ಸದಸ್ಯರಿದ್ದಾರೆ, ಯಾರನ್ನಾದರೂ ಒಬ್ಬರನ್ನು ಆಯ್ಕೆ ಮಾಡುತ್ತಾರೆ, ನಾವು ಮನೆಗೆ ಹೋಗಬಹುದು ಎಂಬ ಭಾವನೆಯಿಂದ ಇದ್ದಂಥ ಸಂದರ್ಭದಲ್ಲಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿದಾಗ ನನಗೆ ಎಲ್ಲಿಯೋ ಒಂದು ಕಡೆ 'ಮೋಡ ಇಲ್ಲದೇ ಸಿಡಿಲು ಬಡಿದಂಥ' ಭಾವನೆ ಆಗಿತ್ತು. ಅಂದರೆ ತಕ್ಷಣ ಶಾಕ್ ಆದಂತೆ ಆಗಿತ್ತು. ಆದರೆ, ನನ್ನ ಪಕ್ಷ ನೀಡುವಂಥ ಜವಾಬ್ದಾರಿಯನ್ನು ನಿಭಾಯಿಸಬೇಕು, ಅವರು ಹೇಳಿದಂಥ ಮಾತಿಗೆ ನಾನು ಏನು ಹೇಳಬಾರದು ಎಂಬ ಉದ್ದೇಶದಿಂದ ಈ ಸ್ಥಾನಕ್ಕೆ ಒಪ್ಪಿಕೊಂಡೆನು. ಅಂದಿನ ದಿವಸ ನನ್ನ ಎಲ್ಲಾ ಶಾಸಕರು ಸಂತೋಷದಿಂದ ನನ್ನನ್ನು ಈ ಸದನದ ಉಪ ಸಭಾಪತಿ ಸ್ಥಾನಕ್ಕೆ ನಾಮಿನೇಶನ್ ಮಾಡಲಾಗಿದೆ ಎಂದು ಹೇಳುವಂಥ ಸಂದರ್ಭದಲ್ಲಿ ಎಲ್ಲರ ಸಹಕಾರವು ಇದೆ ಎಂಬುದು ಗೊತ್ತಾಗಿತ್ತು. ಏಕೆಂದರೆ, ಆ ಸಂದರ್ಭದಲ್ಲಿ ನಾನು ಎಷ್ಟೋ ಜನ ಹಿರಿಯ ಸದಸ್ಯರಿದ್ದಾರೆ, ನನ್ನ ಆಯ್ಕೆಯಿಂದ ಯಾರಿಗಾದರೂ ಅಸಮಧಾನ ಇದೆಯೋ, ಏನೋ ಎಂದು ಎಲ್ಲರ ಮುಖದ ಭಾವನೆಯನ್ನು ನೋಡುತ್ತಿದ್ದೆ. ಆದರೆ, ಅದು ನನ್ನ ಜೊತೆಯಲ್ಲಿದ್ದವರ ವಿಶೇಷತೆಗಳು ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ, ನಾನು ನಡೆದು ಬಂದ ದಾರಿ ಆ ರೀತಿಯಾಗಿತ್ತು. ನಾನು ಒಬ್ಬ ಸ್ವಯಂ ಸೇವಕನಾಗಿ ಈ ಪಕ್ಷಕ್ಕೆ ಬಂದವನು. ಆ ಸಂದರ್ಭದಲ್ಲಿ ನನಗೆ 'ರಾಷ್ಟ್ರೀಯ ಸ್ವಯಂ ಸೇವಕ ಸಂಘ' ಎಂತಹ ಸಂದರ್ಭದಲ್ಲಿ ಹೇಗೆ ಇರಬೇಕೆಂಬುದರ ಬಗ್ಗೆ ಮಾರ್ಗದರ್ಶನ ನೀಡಿತ್ತು. ಪಕ್ಷ ನೀಡಿದ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕು, ಹೇಗೆ ಹಿರಿಯರನ್ನು ಗೌರವಿಸಬೇಕು, ಎಲ್ಲರೊಂದಿಗೆ ಇರುವಾಗ ನನ್ನ ನಡವಳಿಕೆ ಹೇಗೆ ಇರಬೇಕು ಎಂಬುದೆಲ್ಲವನ್ನೂ ಕೂಡಾ 'ರಾಷ್ಟ್ರೀಯ ಸ್ವಯಂ ಸೇವಕ ಸಂಘ' ಹೇಳಿ ಕೊಟ್ಟಿತ್ತು. ನಾನು 10ನೇ ವರ್ಷದ ವಯಸ್ಸಿನಲ್ಲಿ ಬಾಲ ಶಿಬಿರದಲ್ಲಿ ನೆಲೆಸಿದ್ದು, ಅಲ್ಲಿಂದಲ್ಲೂ ಸಹ ಹೇಗೆ ಇರಬೇಕೆಂಬುದರ ಬಗ್ಗೆ ಮಾರ್ಗದರ್ಶನ ಸಿಗುತ್ತಿತ್ತು. ಹಂತ–ಹಂತವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕಾರಣಕ್ಕೆ ಬಂದರೂ, ರಾಜಕಾರಣಕ್ಕೆ ಬಯಸಿ ಬರಲಿಲ್ಲ. 1989ನೇ ಸಾಲಿನಲ್ಲಿ ರಾಜಕಾರಣಕ್ಕೆ ಬರುವಂಥ ಅನಿವಾರ್ಯತೆ ಉಂಟಾಗಿತ್ತು. ಅಯೋಧ್ಯೆಯ ರಾಮಮಂದಿರ ನಿರ್ಮಾಣಕ್ಕಾಗಿ ಹೋರಾಟ ಮಾಡುವಂಥ ಸಂದರ್ಭದಲ್ಲಿ ನನಗೆ ಅದೊಂದು ಭಾವನಾತ್ಮಕ ವಿಚಾರವಾದರಿಂದ ನಾನು ಅದರೊಳಗೆ ಕೈ ಜೋಡಿಸುವಂಥ ಕೆಲಸ ಮಾಡಿದ್ದೆ.

ತದನಂತರ 1989ನೇ ಸಾಲಿನಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡೆ. ಅಂದಿನಿಂದ ಇಲ್ಲಿಯವರೆಗೂ ಹಿರಿಯ ಮಾರ್ಗದರ್ಶನದಂತೆ ಈ ಪಕ್ಷಕ್ಕೆ ನಿಷ್ಠಾವಂಥ ಕಾರ್ಯಕರ್ತನಾಗಿದ್ದೇನೆ. ಏಕೆಂದರೆ, ಪ್ರಾರಂಭದಲ್ಲಿ ಯುವ ಮೋರ್ಚಾ ಪಕ್ಷದ ತಾಲ್ಲೂಕು ಅಧ್ಯಕ್ಷನಾಗಿದ್ದೆನು. ಆ ಸಂದರ್ಭದಲ್ಲಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಯುವ ಮೋರ್ಚಾ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದು, ಅವರ ನೆರವಿನಲ್ಲಿ ನಾನು ಬೆಳೆಯುವುದಕ್ಕೆ ಸಾಧ್ಯವಾಗಿತ್ತು. ಅವರು ನನಗೆ ಉತ್ತೇಜನ ಮತ್ತು ಶಕ್ತಿಯನ್ನು ತುಂಬುವಂಥ ಕೆಲಸ ಮಾಡಿ ಎಂದು ಹೇಳುತ್ತಿದ್ದರು. ಯಾರಾದರೂ ಏನಾದರೂ ಅಂದುಕೊಳ್ಳಬಹುದು. ಆದರೆ, ನಮಗೆ ಬೇರೆ ರಾಜಕಾರಣದ ವಿಚಾರಗಳನ್ನು ಹೇಳಿಕೊಡುತ್ತಿರಲಿಲ್ಲ. ಅವರು ದೇಶದ ವಿಚಾರಗಳ ಬಗ್ಗೆ ತುಂಬಿಸುವಂಥ ಕೆಲಸವನ್ನು ಮಾಡುತ್ತಿದ್ದರು. ಅಂತಹ ವಾತಾವರಣದೊಳಗೆ ನಾನು ಬೆಳೆದಿದ್ದೆನು. ತದನಂತರ ನನ್ನ ರಾಜಕೀಯ ಜೀವನ ಪ್ರಾರಂಭಗೊಂಡಿತು. ಯಾವುದೇ ಬೇರೆ ಚುನಾವಣೆಯಲ್ಲಿ ನಾನು ಸ್ಪರ್ಧೆ ಮಾಡಲಿಲ್ಲ. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷವು ಅವಕಾಶ ಮಾಡಿಕೊಟ್ಟಿತು. ಹಾಗಾಗಿ ನಾನು ಬೇರೆ ಕ್ಷೇತ್ರಕ್ಕೆ ಹೋಗಿ ಸ್ಪರ್ಧಿಸುವ ಸ್ಥಿತಿ ಉಂಟಾಗಿತ್ತು. ಪ್ರಥಮವಾಗಿ ನಮ್ಮ ಜಿಲ್ಲೆಯಲ್ಲಿ ಖಾತೆಯನ್ನು ಪ್ರಾರಂಭ ಮಾಡಬೇಕಾಗಿದ್ದು, ನಮ್ಮ ಮೂಡಿಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಹಾಗೂ ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ. ನಾನು ಯಾರಿಗೂ ಸಹ ತಾರತಮ್ಯ ಮಾಡದೇ ಎಲ್ಲಾ ಪಕ್ಷದವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತಿದ್ದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಾನು ಬೆಳೆದು ಬಂದ ರೀತಿ ಯಾವ ರೀತಿ ಇತ್ತು ಎಂಬುದಕ್ಕಾಗಿ ಹೇಳುತ್ತಿದ್ದೇನೆ. ಸಂಘಟನೆ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಹೇಳಿ ಕೊಟ್ಟ ದಾರಿಯಲ್ಲಿ ನನ್ನ ರಾಜಕಾರಣ ಜೀವನ ನಡೆಸುತ್ತಿದೆ. ನಾನು ಮತ್ತೆ ಹಿಂದೆ ತಿರುಗಿ ನೋಡಲೇ ಇಲ್ಲ. ಪ್ರತಿ ಸಂದರ್ಭದಲ್ಲಿಯೂ ನನ್ನನ್ನು ಗುರುತು ಮಾಡಿಸಿಕೊಡುವಂಥ ಕೆಲಸವನ್ನು ಪಕ್ಷ ಮಾಡಿತ್ತು. ಜಿಲ್ಲಾ ಯುವ ಮೋರ್ಚಾ ಪಕ್ಷದ ಅಧ್ಯಕ್ಷನಾಗಿ ಮಾಡಿತ್ತು. ನಂತರ ಜಿಲ್ಲೆ ಪಂಚಾಯಿತಿಯ ಅಧ್ಯಕ್ಷನಾಗಿ ಎರಡು ಬಾರಿ ಆಯ್ಕೆ ಮಾಡಿ, ನಿಗಮ/ಮಂಡಳಿಯ ಅಧ್ಯಕ್ಷನಾಗಿ ಆಯ್ಕೆ ಮಾಡಿತು. ತದನಂತರ ಎಂ.ಎಲ್.ಸಿ. ಚುನಾವಣೆಗೆ ಸ್ಪರ್ಧಿಸುವಂತೆ ಹೇಳಿತು. ಆದರೆ, ನಾನು ಯಾವತ್ತು ಸಹ ಆ ಸ್ಥಾನಕ್ಕೆ ಹೋಗಲು ಕೇಳಿರಲಿಲ್ಲ. ಈ ರಾಜ್ಯದ ರಾಜಕಾರಣಿಯಾಗಿ ಮಾಡಿ, ಎತ್ತರಕ್ಕೆ ಬೆಳೆಸಿಕೊಂಡು ಹೋಗುವಂಥ ಕೆಲಸ ಮಾಡಿತ್ತು. ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡವಳಿಕೆಗಳು ಹಾಗೂ ನಾವು ಪಕ್ಷಕ್ಕೆ ತೋರಿದ ನಿಷ್ಠೆಯಿಂದ ಈ ಹಂತಕ್ಕೆ ಬಂದಿದ್ದೆವು. ಹಾಗಾಗಿ ಅಂತಹ ವಾತಾವರಣದಲ್ಲಿ ಬೆಳೆದಂಥ ಸಂದರ್ಭದಲ್ಲಿ ನಾನು ಪಕ್ಷದ ನಿಷ್ಠಾವಂತ ರಾಜಕಾರಣಿಯಾಗಿ ಕೆಲಸ ಮಾಡಲು ಸಾಧ್ಯವಾಗಿತ್ತು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಪಕ್ಷಕ್ಕೆ ನಿಷ್ಠೆಯಿಂದ ಕಾರ್ಯಕರ್ತನಾಗಿ ಕೆಲಸ ಮಾಡಿದರೆ ಯಾವ ರೀತಿ ಅವಕಾಶಗಳು ನಮಗೆ ಗೊತ್ತಿಲ್ಲದೇ ಒದಗಿ ಬರುತ್ತದೆ ಎಂಬುದಕ್ಕೆ ನಾನೇ ಸಾಕ್ಷಿ ಎಂದು ಕೊಂಡಿದ್ದೇನೆ.

ಇಂತಹ ಒಂದು ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದೇನೆಂದರೆ, ನಾನೊಬ್ಬ ಮಾಧ್ಯಮ ವರ್ಗದಲ್ಲಿ ಜನಿಸಿದವನು. ಆದರೂ ಸಹ ನನಗೆ ಎಲ್ಲರ ಪ್ರೀತಿ, ವಿಶ್ವಾಸ ದೊರಕಿತು. ಇವತ್ತು ಆ ಪ್ರೀತಿ, ವಿಶ್ವಾಸವನ್ನು ಈ ಸದನದಲ್ಲಿ ನೋಡಿದ್ದೆನು. ಹಿರಿಯರಾದಂಥ ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಶ್ರೀ ಕೆ.ಸಿ.ಕೊಂಡಯ್ಯನವರು ಪ್ರತಿಯೊಬ್ಬರು ನನ್ನನ್ನು ಉಪ ಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡುವಾಗ ಅವರ ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸಿದರು. ಅವರು ಇಷ್ಟೊಂದು ವಿಶಾಲವಾದ ಮನೋಭಾವನೆಯನ್ನು ಹೊಂದಿರುವುದನ್ನು ನೋಡಿ, ನಾನು ನಿಜವಾಗಿಯು ಹೆಮ್ಮೆ ಪಡುತ್ತೇನೆ. ನಾನು ಚಿಕ್ಕವನಾಗಿಯೇ ಇರಬಹುದು. ಆದರೆ, ಅವರೆಲ್ಲರ ಮಾರ್ಗದರ್ಶನದ ಅಡಿಯಲ್ಲಿ ಕರ್ತವ್ಯ ನಿರ್ವಹಿಸುವ ಜವಾಬ್ದಾರಿ ಇದೆ ಎಂದುಕೊಂಡಿದ್ದೇನೆ. ಹಾಗೆಯೇ ನನಗೆ ತಮ್ಮ ನಡವಳಿಕೆ ನೋಡಿದಾಗ ಬಹಳ ಖುಷಿಯಾಗುತ್ತದೆ. ಏಕೆಂದರೆ, ಅಂದು ತಾವು ಕುಳಿತಿದ್ದ ಜಾಗದಲ್ಲಿ ಇವತ್ತು ಶ್ರೀ ಅರವಿಂದ ಲಿಂಬಾವಳಿಯವರು ಆ ಜಾಗದಲ್ಲಿ ಕುಳಿತುಕೊಂಡಿದ್ದಾರೆ. ತಾವು ಸಭಾಪತಿ ಪೀಠವನ್ನು ಅಲಂಕರಿಸುತ್ತೀರಿ ಎಂಬುದು ತಮಗೂ ಗೊತ್ತಿರಲಿಲ್ಲ. ಅದೇ ರೀತಿ ಇವತ್ತು ನಾನು ಉಪ ಸಭಾಪತಿಯಾಗಿದ್ದೇನೆ. ತಾವು ಒಂದು ಹಾಳೆಯನ್ನು ತೆಗೆದುಕೊಂಡು ಏನೋ ಬರೆದುಕೊಂಡು ಕುಳಿತಿರುವಾಗ, ತಾವು ಸಭಾಪತಿ ಪೀಠವನ್ನು ಅಲಂಕರಿಸಬೇಕೆಂದು ಸದನದ ಸದಸ್ಯರು ಪೀಠದ ಹತ್ತಿರ ಕರೆದುಕೊಂಡು ಬರುತ್ತಾರೆ, ಆ ಸಂದರ್ಭದಲ್ಲಿ ತಾವು ಸಭಾಪತಿಗಳಾಗಿ ಆಯ್ಕೆಯಾಗಿದ್ದೀರಿ ಎನ್ನುವ ವಿಚಾರ ತಮಗೆ ಗೊತ್ತಾಗುತ್ತದೆ. ತಾವು ಆ ಪಕ್ಷದಲ್ಲಿ ನಿಷ್ಠೆಯನ್ನಿಟ್ಟುಕೊಂಡು ಆ ಸ್ಥಾನಕ್ಕೆ ಬಂದಿರುತ್ತೀರಿ. ಅದೇ ನಿಷ್ಠೆಯನ್ನು ನಾನು ನಮ್ಮ ಪಕ್ಷದಲ್ಲಿಟ್ಟುಕೊಂಡು ಉಪ ಸಭಾಪತಿ ಸ್ಥಾನಕ್ಕೆ ಆಯ್ಕೆಗೊಂಡಿರುತ್ತೇನೆ. ಪಕ್ಷ ನಮ್ಮನ್ನು ಬೆಳೆಸಿದೆ. ಆದರೆ, ನಾನು ಪಕ್ಷಾತೀತವಾಗಿ ಅವರೆಲ್ಲರ ಸಹಕಾರದೊಂದಿಗೆ ಉಪ ಸಭಾಪತಿಯಾಗಿ ಆಯ್ಕೆಗೊಂಡಿರುತ್ತೇನೆ. ನನಗಿಂತ ಹೆಚ್ಚು ಅರ್ಹತೆ ಇರುವಂಥವರು ತುಂಬಾ ಜನರಿದ್ದರೂ ಸಹ ಯಾವುದೋ ಒಂದು ಯೋಚನೆಯ ಆಧಾರದ ಮೇಲೆ ನನ್ನನ್ನು ಇವತ್ತು ಉಪ ಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ಹಾಗೆಯೇ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವಂಥ ಸಲಹೆ ಕೂಡಾ ಎಲ್ಲಾ ಕಡೆಯಿಂದ ಬಂದಿದೆ. ನನಗೆ ಸಂಪೂರ್ಣವಾಗಿ ವಿಶ್ವಾಸ ಇದೆ. ಎಲ್ಲರೂ ನನಗೆ ಅಭಿನಂದನೆ ಭಾಷಣವನ್ನು ಮಾಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟೊಂದು ಪ್ರೀತಿಯನ್ನು ತೋರಿಸಿದ್ದಾರೆ. ಅದಕ್ಕೆ ಎಲ್ಲಿಯೂ ಚ್ಯುತಿ ಬರದಂತೆ ಖಂಡಿತವಾಗಿ ನಡೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ವಿಷಯದಲ್ಲಿ ನನಗೆ ಮಾತನಾಡಲು ತುಂಬಾ ವಿಚಾರಗಳಿದ್ದು, ಇನ್ನೊಂದು ಎರಡು ಮಾತಗಳನ್ನಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಈ ಸಂದರ್ಭದಲ್ಲಿ ನಾನು ದಿ॥ ಎಸ್.ಎಲ್.ಧರ್ಮೇಗೌಡರ ಬಗ್ಗೆ ಮಾತನಾಡಲೇ ಬೇಕು. ನಿಜವಾಗಿ ಹೇಳಬೇಕೆಂದರೆ, ನನಗೆ ಈ ಜಾಗದಲ್ಲಿ ಕುಳಿತುಕೊಂಡಿರುವುದಕ್ಕೆ ಒಂದು ಕಡೆ ಸಂತೋಷ, ಮತ್ತೊಂದು ಕಡೆ ದುಃಖವಾಗುತ್ತಿದೆ. ನಾನು ಜಿಲ್ಲಾ ಪಂಚಾಯಿತಿಯ ಸದಸ್ಯನಾಗಿದಂತಹ ಸಂದರ್ಭದಲ್ಲಿ ದಿ॥ ಎಸ್.ಎಲ್.ಧರ್ಮೇಗೌಡರು ನನಗೆ ಮಾರ್ಗದರ್ಶನವನ್ನು ನೀಡುತ್ತಿದ್ದರು. ಅವರು ಎರಡು ಬಾರಿ ಆಯ್ಕೆಯಾಗಿದ್ದು, ನಾನು ಪ್ರಥಮ ಬಾರಿಗೆ ಆಯ್ಕೆಗೊಂಡಿದ್ದೇನು. ನಾನು 2000ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಆಯ್ಕೆಗೊಂಡಿದ್ದು, ಆಗ ಶ್ರೀ ಎಸ್.ಆರ್.ಪಾಟೀಲ್‌ರವರದು ಬಿಸಿ ರಕ್ತ. ಆ ಸಂದರ್ಭದಲ್ಲಿ ನಮ್ಮ ಹೋರಾಟ ಇನ್ನೂ ಬಲವಾಗಿತ್ತು. ಆಗ ದಿ॥ ಎಸ್.ಎಲ್.ಧರ್ಮೇಗೌಡರು "ಹೊರಗೆ ಇರುವಾಗ, ಒಳಗೆ ಬಂದಾಗ ಮಾಡುವಂಥ ಕೆಲಸಕ್ಕೂ ವ್ಯತ್ಯಾಸಗಳಿರುತ್ತವೆ brother. ಸ್ವಲ್ಪ ಇಲ್ಲಿಗೆ ಬಂದಾಗ ನಾವು ಮಾಡುವಂಥ ಕೆಲಸದಲ್ಲಿ ಜವಾಬ್ದಾರಿಯಿಂದ ಮಾತನಾಡಬೇಕು. ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮಾತನಾಡುವಂಥ ಸಂದರ್ಭದಲ್ಲಿ ಏನು ಹೇಳುತ್ತಾರೆ, ಎಂಬುದನ್ನು ಮೊದಲು ಕೇಳಿದ ನಂತರ ನಾವು ಮಾತನಾಡಬೇಕು. ಆಗ ನಾವು ಯಶಸ್ವಿ ರಾಜಕಾರಣಿಗಳಾಗುತ್ತೇವೆ" ಎನ್ನುವ ಮಾತನ್ನು ಹೇಳುತ್ತಿದ್ದರು. ಜೊತೆಗೆ ದಿ॥ ಎಸ್.ಎಲ್.ಧರ್ಮೇಗೌಡರು ಯಾವಾಗ ಸಿಕ್ಕಿದರೂ ಸಹ ರಾಜಕಾರಣದಲ್ಲಿ ಇದ್ದರೂ ಸಹ ಹೆಚ್ಚಿನದಾಗಿ ಪರಿಸರದ ಬಗ್ಗೆ ಆಸಕ್ತಿವಹಿಸುತ್ತಿದ್ದರು.

(ಮುಂದು...)

(19) 29.01.2021/1.10/ಎಸ್‌ಕೆ-ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಕೆ. ಪ್ರಾಣೇಶ್, ಉಪ ಸಭಾಪತಿಯವರು (ಮುಂದು):-**

ನಿಜವಾಗಲೂ ಕೂಡ ಅಷ್ಟೊಂದು ನನಗೆ ನೋವಾಗುತ್ತದೆ. ಒಂದು ನುಡಿ ಇದೆ. 'ಆ ಭಗವಂತನಿಗೆ ತುಂಬಾ ಪ್ರೀತಿ ಯಾರ ಮೇಲೆ ಆಗುತ್ತೋ, ಅವರನ್ನು ಆದಷ್ಟು ಬೇಗ ಮೇಲೆ ಕರೆದುಕೊಳ್ಳುತ್ತಾನೆ.' ಅದು ಆ ರೀತಿಯಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಬಹುಶಃ ಸಾವುಗಳು ಬರುವಂತಹದ್ದು, ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ಎಂದರೆ, ವಿಧಿಯಾಟದ ನೆಪದೊಳಗೆ ವಿವಿಧ ತರಹದ ಸಾವುಗಳನ್ನು ನಾವು ನೋಡುತ್ತೇವೆ. ಆದರೆ ಆ ಸಾವುಗಳನ್ನು ವರ್ಣಿಸುವ ರೀತಿ ಬೇರೆ ಇರಬಹುದು. ಆಯಸ್ಸುಗಳು ಮುಗಿದಾಗ, ಆ ಸಾವುಗಳು ಯಾವ ರೀತಿಯಲ್ಲಾದರೂ ಸಂಭವಿಸಿ ಅವರನ್ನು ಮೇಲೆ ಕರೆದುಕೊಳ್ಳುವಂತಹ ಕೆಲಸಗಳು ಆಗುತ್ತದೆ. ಆ ರೀತಿ ಮಾನ್ಯ ಧರ್ಮೇಗೌಡರವರದು ಅಂತ್ಯವಾಗಿದೆ. ಆದರೂ ಕೂಡ ಅವರೊಬ್ಬ ಯಶಸ್ವಿ ರಾಜಕಾರಣಿಯಾಗಿದ್ದರು. ಅವರು ಸಹಕಾರಿ ಕ್ಷೇತ್ರದಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದಂತಹವರು. ಅಂತಹವರ ಜಾಗವನ್ನು ನಾನು ತುಂಬಿದ್ದೇನೆ. ನನಗೆ ನಿಜವಾಗಲೂ ತುಂಬಾ ಸಂತೋಷವಿದೆ. ಆದರೆ ಈ ರೀತಿಯಾಗಬಾರದಿತ್ತು ಎಂಬುದು ಕೂಡ ಇದರ ಮಧ್ಯೆ ನನಗೆ ನೋವಿದೆ. ಹಾಗಾಗಿ ಇವತ್ತು ಮುಂದಿನ ದಿನಗಳಲ್ಲಿ ವಿಧಾನ ಪರಿಷತ್ತಿನಲ್ಲಿ ನಡೆಯುವಂತಹ ನಡವಳಿಗಳಲ್ಲಿ ಹಿಂದೆ ಖಂಡಿತವಾಗಿ ಏನಾಗಿದೆ; ಯಾವತ್ತು ಮನುಷ್ಯ ಹಿಂದಿನ ವಿಚಾರಗಳನ್ನು ಮರೆತು ಮುಂದಿನ ಹೊಸ ದಾರಿ ಮತ್ತು ಹೊಸ ಹೊಸ ವಿಚಾರಗಳನ್ನು ಮೈಗೂಡಿಸಿಕೊಳ್ಳುವಂತಹದ್ದು ಅವರ ಜೀವನದಲ್ಲಿ ಇರಬೇಕು. ಅದಕ್ಕೆ ದೇವರ ಆಶೀರ್ವಾದ ಕೂಡ ಇರುತ್ತದೆ. ಹಾಗಾಗಿ ಹಿಂದೆ ಏನಾಗಿದೆ ಎಂಬುದನ್ನು ಮರೆಯುವಂತಹದ್ದು. ಇದರಲ್ಲಿ ಯಾರದು ತಪ್ಪು ಮತ್ತು ಯಾರದು ಸರಿ ಎನ್ನುವಂತಹ ಹುಡುಕುವ ಪ್ರಯತ್ನಗಳನ್ನು ಮಾಡದೇ, ಮುಂದಿನ ದಿನಗಳಲ್ಲಿ 113 ವರ್ಷಗಳ ಇತಿಹಾಸವನ್ನು ಹೊಂದಿರುವಂತಹ ಈ 'ಚಿಂತಕರ ಛಾವಡಿ'ಯೊಳಗಡೆ ಯಾವುದೋ ಸಂದರ್ಭದಲ್ಲಿ ನಮಗೆ ಗೊತ್ತಿಲ್ಲದೇ ಆಗಿರುವಂತಹ ಘಟನೆಗಳನ್ನು ಇನ್ನು ಮುಂದೆ ಮರುಕಳಿಸದಂತೆ ನೋಡಿಕೊಳ್ಳುವಂತಹ ಜವಾಬ್ದಾರಿ ನಮ್ಮ ಮತ್ತು ನಿಮ್ಮೆಲ್ಲರ ಮೇಲೆ ಇದೆ. ಅದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ. ಆದರೆ ಕೆಲವೊಂದು ಸಂದರ್ಭಗಳಿಗನುಸಾರವಾಗಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಮಾತಿನ ಘರ್ಷಣೆ ಇದ್ದೇ ಇರುತ್ತದೆ. ಆದಷ್ಟು ಮಾತಿನ ಘರ್ಷಣೆ ನಡೆಯುವಂತಹದ್ದು ಸಹಜ. ಆದರೆ ಆ ತರಹದ ಸಂದರ್ಭದಲ್ಲಿ ನಾವೆಲ್ಲರೂ ಸ್ನೇಹಿತರೇ. ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಾಗ, ವಿರೋಧ ಪಕ್ಷದ ನಡವಳಿಕೆಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಆಡಳಿತ ಪಕ್ಷದವರು ಅದನ್ನು ಸಮರ್ಥನೆ ಮಾಡಬೇಕಾಗುತ್ತದೆ. ಇವು ಸಹಜ ಪ್ರಕ್ರಿಯೆ. ಆದರೆ ನಾವು ಹೊರಗಡೆ ಹೋದ ನಂತರ ಇವತ್ತು ರಾಜ್ಯದಲ್ಲಿರುವ ಜನರು ಯಾವ ಪರಿಸ್ಥಿತಿಗಳನ್ನು ಎದುರಿಸುತ್ತಿದೆ ಎಂಬುದರ ಬಗ್ಗೆ ನೋಡುತ್ತಿದ್ದೇವೆ. ಆದರೆ ಸಂಕಷ್ಟದಲ್ಲಿದೆ. ನಾವು ಇಲ್ಲಿ ಪರಸ್ಪರ ವ್ಯಕ್ತಿಗತವಾಗಿ ನಿಂದನೆಗಳನ್ನು ಮಾಡಿಕೊಳ್ಳದೇ, ಆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ನಾವು ಚರ್ಚೆಯನ್ನು ಮಾಡಿ, ನಾವು ಅವರಿಗೊಂದು ಮಾರ್ಗದರ್ಶಕರಾಗಿದ್ದರೆ, ಜನರು ಕೂಡ ನಮ್ಮನ್ನು ಅಭಿನಂದಿಸುತ್ತಾರೆ ಮತ್ತು ಈ ಸಮಾಜವು ನಮ್ಮನ್ನು ಅಭಿನಂದಿಸುತ್ತದೆ. ನಮಗೂ ಅತೃಪ್ತಿ ಆಗುತ್ತದೆ. ಬೇರೆಯವರನ್ನು ಸಂತೋಷಪಡಿಸುವುದಕ್ಕಾಗದಿದ್ದರೂ, ನಮ್ಮಲ್ಲಿ ಒಂದು ಆತ್ಮ ಸಾಕ್ಷಿ ಇರುತ್ತದೆ. ಆ ಆತ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಕ್ಷಿಗನುಗುಣವಾಗಿ, ನಾವು ಕೆಲಸಗಳನ್ನು ಮಾಡೋಣ. ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ. ನಾನು ತಮ್ಮೆಲ್ಲರ ಜೊತೆಯಲ್ಲಿ ಇರುತ್ತೇನೆ. ನಾನು ಯಾವುದೇ ತಾರತಮ್ಯಗಳನ್ನು ಮಾಡುವುದಿಲ್ಲ. ತಮ್ಮೆಲ್ಲರ ಅಂದರೆ ಹಿರಿಯ ಮತ್ತು ಕಿರಿಯರ ಸಹಕಾರ ಮತ್ತು ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ. ಇದನ್ನೆಲ್ಲಾ ಒಟ್ಟಿಗೆ ತೆಗೆದುಕೊಳ್ಳುತ್ತಾ, ಈ ಸಂದರ್ಭದಲ್ಲಿ ನಾನು ಹೇಳುತ್ತಾ, ನನ್ನನ್ನು ಮತ್ತೊಮ್ಮೆ ಈ ಗೌರವಯುತವಾದಂತಹ ಸ್ಥಾನಕ್ಕೆ ನನ್ನನ್ನು ಕೂರಿಸಲು, ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ತಮಗೆಲ್ಲರಿಗೂ ನನ್ನ ಹೃದಯಪೂರ್ವಕ ವಂದನೆಗಳನ್ನು ಅರ್ಪಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ. ಮಾನ್ಯ ಶಶೀಲ್ ಜಿ. ನಮೋಶಿರವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 11. ಪ್ರಶ್ನೋತ್ತರಗಳು

### (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ 54**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಒಟ್ಟು 573 ಬಹು ಗ್ರಾಮಗಳನ್ನು ಆಯ್ಕೆ ಮಾಡಿದ್ದೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ನೀಡಿದ್ದಾರೆ. ಈ ಆಯ್ಕೆ ಮಾಡುವಂತಹ ಮಾರ್ಗಗಳೇನು? ಕುಡಿಯುವ ನೀರಿನ ಕೊರತೆ ಇದೆಯೇನು? ಅಥವಾ ಹಾಗೇ ಯಾರಾದರೂ propose ಮಾಡಿದ್ದಾರೆಂದು ಕೊಟ್ಟಿದ್ದಾರೆ ಎನ್ನುವಂತಹ ಮೊದಲನೆ ಪ್ರಶ್ನೆ. ಇನ್ನೊಂದು ವಿಷಯವೇನೆಂದರೆ, ಹೈದರಾಬಾದ್-ಕರ್ನಾಟಕ ಅಥವಾ ಇವತ್ತಿನ ಕಲ್ಯಾಣ ಕರ್ನಾಟಕದ ಭಾಗದಲ್ಲಿ ನಾನು ನೋಡಿರುವಂತೆ, ಊರುಗಳನ್ನು ಆಯ್ಕೆ ಮಾಡಿರುವ ಮಾಹಿತಿಯನ್ನು ನೋಡಿದರೆ, ಆ ಭಾಗದಲ್ಲಿರುವ ಹಳ್ಳಿಗಳಿಗೆ ನೀರು ಕೊಡುವಂತಹದ್ದು ಬಹಳ ಕಡಿಮೆ ಎಂಬ ಬಗ್ಗೆ ನಾವು ನೋಡುತ್ತಿದ್ದೇವೆ. ಇದು ಏಕಾಯಿತು ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಸುಮಾರು ನೂರು ಗ್ರಾಮಗಳಲ್ಲಿ ಇನ್ನೂ ಕುಡಿಯುವ ನೀರಿನ ಯೋಜನೆ ಪೂರ್ತಿಗೊಂಡಿಲ್ಲ. ಅದನ್ನು ತಕ್ಷಣ ಪೂರ್ತಿಗೊಳಿಸಲಾಗುತ್ತದೆಯೇ? ಈ ಭಾಗದಲ್ಲಿ ಏನು ಕೊರತೆಯಾಗಿದೆ, ಅದನ್ನು ಸರಿಪಡಿಸುತ್ತೀರಾ? ಇನ್ನೂ ಹೆಚ್ಚಿನದಾಗಿ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಒದಗಿಸುತ್ತೀರಾ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಿಜಕ್ಕೂ ಮೆಚ್ಚುವಂತಹದ್ದಾಗಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಪ್ರತಿ ಗ್ರಾಮಕ್ಕೂ ಕೂಡ ಕುಡಿಯುವ ನೀರನ್ನು ಒದಗಿಸಬೇಕು ಎನ್ನುವಂತಹ ಆಸಕ್ತಿ ನಮ್ಮ ಸರ್ಕಾರಕ್ಕೆ ಇದೆ. ಆದರೆ ನೀರಿನ ಲಭ್ಯತೆ ಬಹಳ ಮುಖ್ಯ. ಅದರಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಬಹಳ ದೊಡ್ಡ ದೊಡ್ಡ ನದಿಗಳು ಹರಿಯುತ್ತವೆ. ಆದರೆ ಆ ನದಿಗಳು ಹರಿಯುವಂತಹ ಆ ಭಾಗದ ಜನರಿಗೆ ನೀರು ಕುಡಿಯುವುದಕ್ಕೆ ಸಿಗುತ್ತಿಲ್ಲ. ಆ ಒಂದು ಪರಿಸ್ಥಿತಿ ಇದೆ. ಗ್ರಾಮಾಂತರ ಪ್ರದೇಶಕ್ಕೆ ಹೋದಾಗ ಸಣ್ಣ ಸಣ್ಣ ಕೆರೆಗಳು ಸಿಕ್ಕಿದರೆ ಸಾಕು ಎನ್ನುವಂತಹ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ನಾನು ನೀರಾವರಿ ಸಚಿವನಾಗಿದ್ದಂತಹ ಸಂದರ್ಭದಲ್ಲಿ ಇದನ್ನೆಲ್ಲಾ ಗಮನಿಸಿದ್ದೇನೆ. ಅದರಲ್ಲಿ ವಿಶೇಷವಾಗಿ ವಿಜಯಪುರ, ಬಾಗಲಕೋಟೆ ಜಿಲ್ಲೆಗಳ ಭಾಗಗಳಿಗೆ ಕೆರೆಗಳಲ್ಲಿ ನೀರನ್ನು ತುಂಬಿಸಬೇಕು ಎಂಬುದರ ಬಗ್ಗೆ ಎಲ್ಲಾ ಪಕ್ಷದವರು ದೊಡ್ಡ ದೊಡ್ಡ ಹೋರಾಟವನ್ನು ಮಾಡಿದರು. ಇಲ್ಲಿ ತುಂಬಾ ಸ್ಪಷ್ಟವಾದ ವಿಚಾರವೆಂದರೆ, ಎಲ್ಲಿ ನೀರಿನ ಲಭ್ಯತೆಯಿದೆಯೋ, ಆ ಲಭ್ಯತೆಯ ಮೂಲಕವಾಗಿ ಈ ಒಂದು ಬಹುಗ್ರಾಮ ಕುಡಿಯುವ ನೀರಿಗೆ ವಿಶೇಷವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಯಾವ್ಯಾವ ಗ್ರಾಮಗಳಿಗೆ ಆ ನೀರನ್ನು ಕೊಡಿಸುವುದಕ್ಕೆ ಸಾಧ್ಯ ಎಂಬುದದನ್ನು ಕೂಡ ಸರ್ವೆ ಮಾಡಿ, ಆ ಗ್ರಾಮಗಳಿಗೆ ವಿಶೇಷವಾಗಿ ಆ ಒಂದು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ನಮ್ಮ ಇಲಾಖೆಯಿಂದ ಉತ್ತರ ನೀಡಿದಂತೆ, ಒಟ್ಟು 573 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಈಗ ರಾಜ್ಯ ಸರ್ಕಾರ ಆದೇಶ ಮಾಡಿದ್ದು, ಒಟ್ಟು 474 ಗ್ರಾಮ ಪಂಚಾಯಿತಿಗಳನ್ನು ಪೂರ್ಣ ಮಾಡಿದ್ದೇವೆ. ಇನ್ನು 69 ಪ್ರಗತಿಯಲ್ಲಿರುತ್ತವೆ ಮತ್ತು 30 ಅನುಮೋದನೆಯ ವಿವಿಧ ಹಂತದಲ್ಲಿರುತ್ತವೆ. ಮಾನ್ಯ ಸದಸ್ಯರು ತಿಳಿಸಿರುವ ಪ್ರಕಾರ ಇನ್ನೂ ಎಷ್ಟು ಸಾಧ್ಯವೋ ಅಷ್ಟು ಎಲ್ಲಾ ಗ್ರಾಮಗಳಿಗೂ ಕೂಡ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಒದಗಿಸಬೇಕು ಎನ್ನುವಂತಹ ಆಸಕ್ತಿ ನಮ್ಮ ಸರ್ಕಾರಕ್ಕೆ ಇದೆ. ಮುಂದೆ ಬರುವಂತಹ ದಿನಗಳಲ್ಲಿ ಖಂಡಿತ ಎಷ್ಟು ಸಾಧ್ಯವೋ ಅಷ್ಟು ಗ್ರಾಮಗಳಿಗೆ ಎಲ್ಲೆಲ್ಲಿ ನೀರಿನ ಲಭ್ಯತೆಯಿದೆಯೋ, ಅದಕ್ಕನುಗುಣವಾಗಿ ನಾವು ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 65**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ಈ ಒಂದು ಪ್ರಶ್ನೆ ಬಹಳಷ್ಟು ಗಂಭೀರವಾಗಿರುವಂತಹ ಪ್ರಶ್ನೆಯಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರೊಬ್ಬರ ಅಕೌಂಟ್‌ಗೆ ರೂ.5,000/- ಗಳನ್ನು ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿತ್ತು. ಅದನ್ನು ಯಾವ ರೀತಿಯಾಗಿ ಫಲಾನುಭವಿಗಳಿಗೆ ತಲುಪಿಸಲಾಗಿದೆ ಎನ್ನುವಂತಹ ಪ್ರಶ್ನೆಯನ್ನು ಕೇಳಿರುವಂತಹದ್ದು. ಲಾಕ್‌ಡೌನ್ ಸಂದರ್ಭದಲ್ಲಿ ಟ್ಯಾಕ್ಸಿ ಮತ್ತು ಆಟೋ ಚಾಲಕರಿಗೆ ಘೋಷಿಸಲಾದ ಪ್ಯಾಕೇಜ್ ಫಲಾನುಭವಿಗಳಿಗೆ ತಲುಪಿದೆಯೇ ಎನ್ನುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರವನ್ನು ನೋಡುತ್ತಾ ಹೋದರೆ, ಇದರಲ್ಲಿ ಎಷ್ಟು ಜನರು ಅರ್ಜಿಯನ್ನು ಹಾಕಿದರು? ಇಂತಿಷ್ಟು ಜನ ಫಲಾನುಭವಿಗಳಿಗೆ ಕೊಟ್ಟಿದ್ದೇವೆಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನದೊಂದು ಕಾಳಜಿ ಏನೆಂದರೆ, ತಾವು ಏನೇನು ದಾಖಲೆಗಳನ್ನು ಕೇಳಿದಿರಿ, ಯಾರ್ಯಾರಿಗೆ ಬೇಕಾಗಿದೆಯೋ, ಆನ್‌ಲೈನ್‌ನಲ್ಲಿ ಅಪ್ಲೈ ಮಾಡಬಹುದು ಎಂಬುದರ ಬಗ್ಗೆ ಘೋಷಣೆ ಮಾಡಿದಿರಿ. ಆಟೋ ರಿಕ್ಷಾಗಳು ಬೆಂಗಳೂರು ಮಹಾನಗರದಲ್ಲಿ ಆಟೋ ರಿಕ್ಷಾ ಹೊಂದಿರುವ ಮಾಲೀಕರಿಗಿಂತ, ಅದನ್ನು ಬಾಡಿಗೆ ತೆಗೆದುಕೊಂಡು ಓಡಿಸುವಂತಹ ಆಟೋ ಚಾಲಕರು ಬಹಳಷ್ಟು ಜನರಿದ್ದಾರೆ. ತಾವು ಹೇಳಿರುವಂತಹ ಮಾಹಿತಿಯಲ್ಲಿ, ಆರ್‌ಸಿ ಪುಸ್ತಕ, ಪರವಾನಿಗೆ ಇದೆಲ್ಲವೂ ಕೂಡ ಮಾಲೀಕನ ಹೆಸರಿನಲ್ಲಿ ಇರುತ್ತದೆ. ತಾವು ಕೊಡುವಂತಹ ಪರಿಹಾರ ಏನಿತ್ತು,

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಮಾನ್ಯ ಉಪಸಭಾಪತಿಯವರಾದ ಶ್ರೀ ಎಂ.ಕೆ. ಪ್ರಾಣೇಶ್ ರವರು ಸ್ಥಾನವನ್ನು ಅಲಂಕರಿಸಿದರು.)**

ಆ ದಾಖಲೆ ಪ್ರಕಾರವಾಗಿ ಮತ್ತೆ ತೆಗೆದುಕೊಂಡಾಗ, ಆ ಐದು ಸಾವಿರ ರೂಪಾಯಿ ಆರ್ಥಿಕವಾಗಿ ಚೆನ್ನಾಗಿರುವಂತಹವನೇ ಏನು ಆಟೋ ರಿಕ್ಷಾವನ್ನು ಇಟ್ಟುಕೊಂಡಿರುತ್ತಾನೆ ಅವನಿಗೆ ತಲುಪುತ್ತದೆ. ಆಟೋ ರಿಕ್ಷಾವನ್ನು ಅವನು ಓಡಿಸುವುದಿಲ್ಲ. ಅದನ್ನು ಯಾರಿಗೋ ದಿನಕ್ಕೆ ಇಂತಿಷ್ಟು ಬಾಡಿಗೆ ಎಂದು ಆಟೋವನ್ನು ಬಾಡಿಗೆ ಕೊಡುತ್ತಾನೆ. ಅಂತಹ ಬಡ ಚಾಲಕರು, ಆ ಮಾಲೀಕನಿಂದ ಆಟೋ ರಿಕ್ಷಾವನ್ನು ತೆಗೆದುಕೊಂಡು ಹೋಗಿ ಓಡಿಸುತ್ತಿರುತ್ತಾರೆ. ಇಲ್ಲಿ ತಾವು ಕೇಳಿರುವಂತಹ ದಾಖಲೆಗಳ ಪ್ರಕಾರವಾಗಿ, ಆಟೋ ರಿಕ್ಷಾ ಮತ್ತು ಟ್ಯಾಕ್ಸಿಗೆ ಸಂಬಂಧಪಟ್ಟಂತಹ ಆರ್‌ಸಿ ಪುಸ್ತಕ, ಪರವಾನಿಗೆಗಳು ಮಾಲೀಕನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಸರಿನಲ್ಲಿ ಇರುತ್ತದೆ. ತಾವು ಕೊಟ್ಟಂತಹ ಪರಿಹಾರ ಮಾಲೀಕನಿಗೆ ತಲುಪಿದೆ. ಅದರೆ ಚಾಲಕರಿಗೆ ಬಂದಿಲ್ಲ. ಇದಕ್ಕೆ ತಾವು ಏನಾದರೂ ಕಾನೂನು ರೀತಿಯಾದಂತಹ ಕ್ರಮವನ್ನು ಕೈಗೊಂಡಿದ್ದೀರಾ ಅಥವಾ ತೀರಾ ಬಡ ವರ್ಗದಲ್ಲಿದ್ದುಕೊಂಡು ಚಾಲಕರು ಕೆಲಸ ಮಾಡುವಂತಹವರಿಗೆ ಯಾವುದೇ ರೀತಿಯಾದಂತಹ ಪರಿಹಾರ ಕೊಡುವುದಕ್ಕೆ ಏನಾದರೂ ಸರ್ಕಾರ ಯೋಚನೆ ಮಾಡಿದೆಯಾ ಅಥವಾ ಸರ್ಕಾರದ ಗಮನಕ್ಕೆ ಈ ವಿಷಯಗಳು ಬಂದಿದೆಯಾ ಎನ್ನುವಂತಹದ್ದನ್ನು ಕೇಳುತ್ತೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟರೆ, ಆಮೇಲೆ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣ ಸ್ವಾಮಿಯವರು ಮೊನ್ನೆ ಕಳೆದ ಕೋವಿಡ್ ಸಂದರ್ಭದಲ್ಲಿ ಸುಮಾರು ಎರಡು ತಿಂಗಳುಗಳ ಕಾಲ ಸಂಪೂರ್ಣವಾಗಿ ಲಾಕ್‌ಡೌನ್ ಆಯಿತು. ಆ ಸಂದರ್ಭದಲ್ಲಿ ಬಹುತೇಕವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಲ್ಲಾ ಬಡವರಿಗೆ ಆಹಾರಧಾನ್ಯವನ್ನು ವಿತರಣೆ ಮಾಡುವಂತಹದ್ದನ್ನು ತಾವು ನೋಡಿದ್ದೀರಿ. ಅದು ಸಾಮಾನ್ಯವಾಗಿ ಎಲ್ಲಾ ಮಧ್ಯಮ ವರ್ಗದವರಿಗೆ ಮತ್ತು ಬಡವರಿಗೆ ಬಹಳಷ್ಟು ಜನರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಕೂಡ ಸಾಕಷ್ಟು ಪ್ರಮಾಣದಲ್ಲಿ ದವಸ-ದಾನ್ಯಗಳನ್ನು ವಿತರಣೆ ಮಾಡಿರುವಂತಹದ್ದು. ಅದರ ಜೊತೆಗೆ ಸಂಘ ಸಂಸ್ಥೆಗಳು, ಧನವಂತರು ಕೂಡ ಬಹಳಷ್ಟು ಬಡ ಜನರಿಗೆ ಸಹಕಾರ ಮತ್ತು ಸಹಾಯ ಮಾಡಿರುವಂತಹದ್ದನ್ನು ನಾವು ನೋಡಿದ್ದೇವೆ.

(ಮುಂದು)

(20)29.01.2021, 1.20, ಟಿಸಿಹೆಚ್-ಆರ್‌ಎನ್

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಲಕ್ಮಣ ಸಂಗಪ್ಪ ಸವದಿ (ಮುಂದು):-**

ಆದರೆ, ಬೆಂಗಳೂರು ಮತ್ತು ರಾಜ್ಯದಲ್ಲಿರತಕ್ಕಂಥ ಆಟೋ ಡ್ರೈವರ್‌ಗಳಿಗೆ ತೊಂದರೆಯಾಗಬಾರದು ಎನ್ನತಕ್ಕಂಥ ವಿಚಾರವನ್ನಿಟ್ಟುಕೊಂಡು, ರೈತ ವರ್ಗಕ್ಕೆ ಬೇರೆ ಬೇರೆ ಸಂದರ್ಭದಲ್ಲಿ ಸಾಕಷ್ಟು ಪರಿಹಾರಗಳನ್ನು ಕೊಟ್ಟಿರತಕ್ಕಂಥದ್ದು ಆಗಿದೆ. ಇವತ್ತು ಕ್ಷೌರಿಕ ಸಮಾಜ ಇರಬಹುದು, ಬೇರೆ ಬೇರೆ ಸಮಾಜದವರಿಗೂ ಕೂಡ ಘೋಷಣೆಯಾಗಿರತಕ್ಕಂಥ ಸಂದರ್ಭದಲ್ಲೂ ಸಾರಿಗೆ ಇಲಾಖೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಾಗ, ಇಂತಹ ಬಡ ವರ್ಗದ ಟ್ಯಾಕ್ಸಿ ಚಾಲಕರು ಮತ್ತು ಆಟೋ ಚಾಲಕರುಗಳಿಗೆ ಸ್ವಲ್ಪ ಸಹಾಯವಾಗಲಿ ಎಂದು ಸುಮಾರು ರೂ.5000/-ಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡತಕ್ಕಂಥದ್ದಕ್ಕೆ ನಾವು ಕ್ರಮ ವಹಿಸಿದ್ದೇವೆ. ರಾಜ್ಯದಲ್ಲಿ ಒಟ್ಟು ನಮಗೆ 2,45,852 ಅರ್ಜಿಗಳು ಬಂದಿವೆ. ಸೇವಾ ಸಿಂಧು ಪೋರ್ಟಲ್ ಮುಖಾಂತರ ನಾವು ದಾಖಲಾತಿಗಳು ಯಾವ ಪ್ರಮಾಣದಲ್ಲಿ ಇರಬೇಕೆಂದು ಹೇಳಿದ್ದೇವೆ. ಈ 2,45,852 ಅರ್ಜಿಗಳಲ್ಲಿ ನಾವು ಈಗಾಗಲೇ ಸುಮಾರು 2,15,612 ಫಲಾನುಭವಿಗಳಿಗೆ ಅವರವರ ಬ್ಯಾಂಕ್ ಖಾತೆಗಳಿಗೆ ಐದೈದು ಸಾವಿರ ರೂಪಾಯಿಗಳನ್ನು ಕಳುಹಿಸಿರತಕ್ಕಂಥದ್ದು ತಮಗೂ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ. ಸುಮಾರು 30,000 ಜನರದ್ದು ದಾಖಲಾತಿಗಳು ಮಿಸ್‌ಮ್ಯಾಚ್ ಆಗಿದೆ. ಅದರಲ್ಲಿ ಸುಮಾರು 2,507 ಜನರಿಗೆ ರಿಜೆಕ್ಟ್ ಆಗಿದೆ. ಅಂದರೆ ಅವರು ನಾವು ಕೇಳಿರತಕ್ಕಂಥ ದಾಖಲಾತಿಗಳಿಗೆ ಅನ್ವಯವಾಗದೇ ಇರತಕ್ಕಂಥದ್ದು ಸುಮಾರು 2507 ಜನರದ್ದು ಸಂಪೂರ್ಣವಾಗಿ ರಿಜೆಕ್ಟ್ ಆಗಿದೆ. ಸುಮಾರು 27,733 ಜನರ ಬಳಿ ಆಧಾರ್ ಕಾರ್ಡ್ ಇಲ್ಲದೇ ಇರುವುದು, ಲೈಸೆನ್ಸ್ ಇಲ್ಲದೇ ಇರತಕ್ಕಂಥದ್ದು ಮತ್ತು ಲೈಸೆನ್ಸ್ ರಿನೀವಲ್ ಆಗದೇ ಇರತಕ್ಕಂಥದ್ದು ಮಿಸ್‌ಮ್ಯಾಚ್ ಆಗಿರುವುದರಿಂದ ಅಂತಹವರಿಗೆ ನಾವು ಕೊಟ್ಟಿಲ್ಲ. ಒಟ್ಟು 175.51 ಕೋಟಿ ರೂಪಾಯಿಗಳಷ್ಟು ಹಣವನ್ನು ಈ ಒಂದು ವರ್ಗಕ್ಕೆ ಸರ್ಕಾರದಿಂದ ಹಣವನ್ನು ಒದಗಿಸಲಾಗಿದೆ ಎಂದು ತಮ್ಮ ಮುಖಾಂತರ ನಾನು ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರಿಗೆ ಹೇಳಬಯಸುತ್ತೇನೆ. ಈಗಾಗಲೇ ಲಾಕ್‌ಡೌನ್ ಓಪನ್ ಆಗಿದೆ. ಮುಂದಿನ ದಿನಮಾನಗಳಲ್ಲಿ ಕೋವಿಡ್-19 ಎಲ್ಲಾ ಸರಿಹೋಗುತ್ತಿದೆ. ಈಗಾಗಲೇ ರಾಜ್ಯ ಯಥಾಸ್ಥಿತಿಗೆ ಬಂದಿರುವುದರಿಂದ, ಪುನಃ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಇತಿಶ್ರೀ ಹಾಡಿರುವುದು ಇದೆಯೆಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿದ್ದು ಏನೆಂದರೆ, ಯಾವ್ಯಾವ ಡ್ರೈವರ್ಸ್‌ಗಳಿಗೆ ಕೊಡಬೇಕೆಂದು ಸರ್ಕಾರ ಕಾಳಜಿ ಇಟ್ಟುಕೊಂಡಿದೆ ಅದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ 2,15,612 ಫಲಾನುಭವಿಗಳಲ್ಲಿ ಸಾಕಷ್ಟು ಆಟೋ ಮತ್ತು ಟ್ಯಾಕ್ಸಿ ಮಾಲೀಕರುಗಳಿಗೆ ಐದೈದು ಸಾವಿರ ರೂಪಾಯಿಗಳು ಹೋಗಿದೆ? ಆದರೆ ಡ್ರೈವರ್‌ಗಳಿಗೆ ಹಣ ಬರಲಿಲ್ಲ. ಯಾರು ಲೈಸೆನ್ಸ್ ರಿನೀವಲ್ ಮಾಡಿಸಿರಲಿಲ್ಲ ಅಂತಹವರಿಗೆ ಕೊಡುವುದಕ್ಕೆ ಆಗಲಿಲ್ಲವೆಂದು ಮಾನ್ಯ ಸಚಿವರು ಒಂದು ಉದಾಹರಣೆಯನ್ನು ಕೊಟ್ಟರು. ಅಂದರೆ ಆ ಡ್ರೈವರ್ ತೀರಾ ಬಡವನಾಗಿರುತ್ತಾನೆ. ಅವನು ಲೈಸೆನ್ಸ್ ರಿನೀವಲ್ ಆಗಿಲ್ಲ ಎನ್ನತಕ್ಕಂಥ ಒಂದೇ ಒಂದು ಸಣ್ಣ ಕಾರಣಕ್ಕೋಸ್ಕರವಾಗಿ, ಅವನಿಗೆ ತಡೆಹಿಡಿಯತಕ್ಕಂಥದ್ದು ಸರಿಯಲ್ಲ ಎನ್ನತಕ್ಕಂಥದ್ದು ನನ್ನ ಭಾವನೆ. ಆದರೆ ಡ್ರೈವರ್‌ಗಳಿಗೆ ಹಣ ತಲುಪಬೇಕಾಗಿತ್ತು, ಏಕೆಂದರೆ, ಸರ್ಕಾರದ ಉದ್ದೇಶವನ್ನು ನಾನು ಶ್ಲಾಘನೀಯ ಮಾಡುತ್ತೇನೆ. ಸರ್ಕಾರ ಅಂತಹ ಒಂದು ಆಪತ್ಕಾಲದಲ್ಲಿ ಬಡವರ ಪರವಾಗಿ ನಿಲ್ಲಲು ಪ್ರಯತ್ನಪಟ್ಟಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಫಲಾನುಭವಿಗಳಿಗೆ ತಲುಪಬೇಕಾಗಿತ್ತೋ, ಅವರಿಗೆ ತಲುಪಿಲ್ಲ. ಅದು ಮಾಲೀಕರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿ ತಲುಪಿದೆ. ಅದಕ್ಕೆ ಏನು ಮಾಡಬೇಕು ಎನ್ನತಕ್ಕಂಥದ್ದು ನನ್ನ ಕಳಕಳಿ. ಇದರ ಜೊತೆಗೆ ಮಾನ್ಯ ಸಚಿವರು ಸುಮಾರು 27,000 ಜನ ಡ್ರೈವರ್‌ಗಳಿಗೆ ನಾವು ಕೊಡುವುದಕ್ಕೆ ಆಗಲಿಲ್ಲವೆಂದು ಹೇಳಿದರು. ಅದರಲ್ಲಿ ಅವನ ಅಕೌಂಟ್ ಪಾಸ್ ಬುಕ್ ಸರಿಯಿಲ್ಲ. ಮತ್ತೆ ಆಧಾರ್ ಕಾರ್ಡ್ ಜೋಡಣೆಯಾಗಲಿಲ್ಲ; ಅದಕ್ಕೋಸ್ಕರವಾಗಿ ನಾವು ಕೊಡುವುದಕ್ಕೆ ಆಗಲಿಲ್ಲ ಎಂದು ಅಧಿಕಾರಿಗಳು ಕಾರಣ ಹೇಳುತ್ತಿದ್ದಾರೆ. ತಾವು ಸಚಿವರಿದ್ದೀರಿ, ತಾವು ದಯಮಾಡಿ ಅಧಿಕಾರಿಗಳ ಹತ್ತಿರ ಇವತ್ತೇ ಮಾತನಾಡಿ, ಅಂತಹ ಬಡ ಆಟೋ ಮತ್ತು ಟ್ಯಾಕ್ಸಿ ಡ್ರೈವರ್‌ಗಳ ಅಕೌಂಟ್‌ಗೆ ಹಣ ಹೋಗಿ ತಲುಪಿಸುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಏಕೆಂದರೆ, ಅಧಿಕಾರಿಗಳ ಹತ್ತಿರ ಅವರ ಮೊಬೈಲ್ ನಂಬರ್ ಇರುತ್ತದೆ. ಫಲಾನುಭವಿಗಳು ಅರ್ಜಿ ಸಲ್ಲಿಸುವಾಗ ಅರ್ಜಿಯಲ್ಲಿ ಅವರಿಗೆ ಸಂಬಂಧಪಟ್ಟಂತಹ ಎಲ್ಲಾ ವಿವರಗಳನ್ನು ಬರೆದಿರುತ್ತಾರೆ. ಹಾಗಾಗಿ, ಫೋನ್ ಮುಖಾಂತರ ಅವರನ್ನು ಬರಮಾಡಿಕೊಂಡು ಅವರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆ ವಿನಃ ಕೇವಲ ನೆಪ ಹೇಳುವುದು ಸರಿಯಲ್ಲ ಎಂದು ಹೇಳುತ್ತೇನೆ. ನೀವು ನಿಮ್ಮ ಆಧಾರ್ ಕಾರ್ಡ್‌ನ್ನು ಬ್ಯಾಂಕ್ ಅಕೌಂಟ್‌ಗೆ ಜೋಡಣೆ ಮಾಡಿ. ಅದನ್ನು ಬಿಟ್ಟು ನಿಮ್ಮ ಬ್ಯಾಂಕ್ ಅಕೌಂಟ್ ಪಾಸ್ ಬುಕ್ ಸರಿಯಿಲ್ಲ; Voter Identification Card ಇನ್ನಿತರೆ ದಾಖಲೆಗಳು ಇರಬಹುದು ಇವೆಲ್ಲವನ್ನೂ ಕೇಳುವುದು ಬರೀ ಸಬೂಬು ಹೇಳುವುದಕ್ಕಾಗುತ್ತದೆ ಅಷ್ಟೇ. ಅದಕ್ಕೋಸ್ಕರವಾಗಿ ನಿಜವಾಗಲೂ ಅವರ ಖಾತೆಗಳಿಗೆ ಹಣವನ್ನು ತಲುಪಿಸತಕ್ಕಂಥ ಕೆಲಸವನ್ನು ಮಾಡಿ. ಇವತ್ತಿನ ದಿವಸ ಯಾರು ಬ್ಯಾಂಕ್ ಅಕೌಂಟ್ ಓಪನ್ ಮಾಡಿದ್ದಾರೆ, ಅವರು ಆಧಾರ್ ಕಾರ್ಡ್ ಜೋಡಣೆ ಮಾಡಬೇಕೆಂದು ಕೆಲವು ಕಾನೂನನ್ನು ಮಾಡಿದ್ದೀರಿ. ಕೇವಲ ಆಧಾರ್ ಕಾರ್ಡ್ ಜೋಡಣೆ ಮಾಡಿಲ್ಲ ಎನ್ನತಕ್ಕಂಥ ಒಂದೇ ಒಂದು ಕಾರಣಕ್ಕೋಸ್ಕರವಾಗಿ ಆ ಫಲಾನುಭವಿಗೆ ತಲುಪಬೇಕಾದಂಥ ಹಣ ತಲುಪದಿದ್ದರೆ, ಎಲ್ಲೋ ಒಂದು ಕಡೆ ಬಹಳ ಕಷ್ಟ ಆಗುತ್ತದೆ. ಜೊತೆಗೆ ಡ್ರೈವರ್‌ಗಳಿಗೆ ತಲುಪಬೇಕಾದಂಥ ಹಣ ಮಾಲೀಕರ ಅಕೌಂಟ್‌ಗೆ ಹೋಗಿದೆ. ಆದುದರಿಂದ ದಯಮಾಡಿ ಇದರ ಬಗ್ಗೆ ಒಂದು ತನಿಖೆ ಮಾಡಿಸಬೇಕು. ಮತ್ತೆ ಇದರಲ್ಲಿ ಕೆಲವೊಬ್ಬರು ಏಜೆಂಟ್‌ಗಳು ಕೂಡ ಉತ್ಪತ್ತಿಯಾಗಿದ್ದಾರೆ. ಯಾರ್‍ಯಾರು nomination ಮಾಡಬೇಕು. ಅರ್ಜಿದಾರರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ, ನೀವು ನನ್ನ ಜೊತೆ ಬನ್ನಿ, ಅರ್ಜಿ ಹಾಕಿ ನಾನು ಮಾಡಿಸಿಕೊಡುತ್ತೇನೆ ಎಂದು ಏಜೆಂಟ್ ಆದಂತವರು ಈ ರೀತಿ ಮಾಡುತ್ತಿದ್ದಾರೆ. ಸರ್ಕಾರದ ವತಿಯಿಂದ ಅದನ್ನು ಫಲಾನುಭವಿಗಳಿಗೆ ತಲಪಿಸತಕ್ಕಂಥ ಕೆಲಸವನ್ನು ಮಾಡಿಸುವಂಥ ಸ್ಥಾನದಲ್ಲಿ ಕಮೀಷನ್ ತೆಗೆದುಕೊಂಡಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ದಯಮಾಡಿ ಇದಕ್ಕೆ ಏನಾದರೂ ಒಂದು ಕ್ರಮ ಕೈಗೊಳ್ಳತಕ್ಕಂಥ ಕೆಲಸ ತಮ್ಮಿಂದ ಆಗಬೇಕು ಎಂದು ನಾನು ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ನಾವು ಆ ಡ್ರೈವರ್‌ಗಳ ಹಿತ ಕಾಯಬೇಕು ಎನ್ನತಕ್ಕಂಥ ಉದ್ದೇಶದಿಂದ ಇದನ್ನು ಪ್ರಾರಂಭ ಮಾಡಿದ್ದೇವೆ. ನಾವು ಸುಮಾರು 2,15,612 ಜನರಿಗೆ ಕೊಟ್ಟಿದ್ದೇವೆ. ಕೆಲವೊಬ್ಬರು ಆಟೋ ಮಾಲಿಕರು-ಕಂ-ಡ್ರೈವರ್ ಆಗಿ ಕೆಲಸ ಮಾಡುತ್ತಿರುತ್ತಾರೆ. ಕೆಲವೊಬ್ಬರು ಆಟೋ ಇಟ್ಟುಕೊಂಡು ಬೇರೆ ಒಬ್ಬರು ಡ್ರೈವರ್‌ಗೆ ಕೊಡುತ್ತಿದ್ದಾರೆ. ಅಂಥವರು ಕೂಡ ಇದರಲ್ಲಿ ಸಾಕಷ್ಟು ಜನ ಪಡೆದುಕೊಂಡಿರುವುದು ಕೂಡ ಇದೆ. ಅನೇಕ ಸಂದರ್ಭಗಳಲ್ಲಿ ನಾವು ಕ್ರಾಸ್‌ಚೆಕ್ ಮಾಡಿದಾಗಲೂ ಕೂಡ ಡ್ರೈವರ್‌ಗಳು ಮತ್ತು ಅವರಿಗೆ ಕೊಟ್ಟಿರುವುದು ಇದೆ. ಮೊದಲು ಕೆಲವೊಂದು ಅಧಿಕಾರಿಗಳು, ವಾಹನಗಳ ಫಿಟ್‌ನೆಸ್ ಸರ್ಟಿಫಿಕೇಟ್ ಇರಬೇಕು ಮತ್ತು ಆಟೋ ಡ್ರೈವರ್ ಕೆಲಸ ಮಾಡುತ್ತಿರಬೇಕೆಂದು ಬೇರೆ ಬೇರೆ ಷರತ್ತುಗಳನ್ನು ಹಾಕಿದ್ದರು. ನಾನು ಅದನ್ನು ಪರಿಶೀಲನೆ ಮಾಡಿಕೊಂಡು, ಅಂತಹ ಫಿಟ್‌ನೆಸ್ ಸರ್ಟಿಫಿಕೇಟ್ ಅವಶ್ಯಕತೆ ಇಲ್ಲ. ಸರ್ಕಾರ ಕೊಡತಕ್ಕಂಥ ಹಣ ಆಟೋ ಡ್ರೈವರ್‌ಗಳಿಗೆ ಮತ್ತು ಟ್ಯಾಕ್ಸಿ ಡ್ರೈವರ್‌ಗಳಿಗೆ ಸಲ್ಲಬೇಕು. ನಮಗೆ ವಾಹನದ ಫಿಟ್‌ನೆಸ್ ಸರ್ಟಿಫಿಕೇಟ್ ಅವಶ್ಯಕತೆ ಇಲ್ಲ ಎಂದು ಅನೇಕ ಬಾರಿ ಸಡಿಲಿಕೆಗಳನ್ನು ಮಾಡಿದ್ದೇವೆ. ಆ ಸಡಿಲಿಕೆ ಮಾಡಿರುವುದರಿಂದ ಸುಮಾರು 2,15,000 ಕ್ಕಿಂತಲೂ ಹೆಚ್ಚು ಡ್ರೈವರ್‌ಗಳಿಗೆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರು ಹೇಳತಕ್ಕಂಥದ್ದು ಏನೆಂದರೆ, ಇದರಲ್ಲಿ ಯಾರೋ ಮಧ್ಯವರ್ತಿಗಳು ಕಮೀಷನ್‌ಗಳನ್ನು ಪಡೆದುಕೊಂಡು ಏನೋ ಮಾಡಿದ್ದಾರೆ ಎನ್ನತಕ್ಕಂಥದ್ದು ಇದೆ. ನಾವು ಕೊಡತಕ್ಕಂಥದ್ದು ರೂ.5000/-ಗಳು. ಆ ರೀತಿ ಏನಾದರು ಆಗಿರತಕ್ಕಂಥಕ್ಕೆ ನಿರ್ದಿಷ್ಟವಾಗಿರತಕ್ಕಂಥ ದಾಖಲೆಗಳನ್ನು ಕೊಟ್ಟರೆ, ಅದನ್ನು ಪರಿಶೀಲನೆ ಮಾಡತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇಲ್ಲಿ ಮೂಲಭೂತವಾಗಿ ಮಾನ್ಯ ಎಂ.ನಾರಾಯಣಸ್ವಾಮಿಯವರು ಕೇಳಿದಂಥ ಪ್ರಶ್ನೆ ಏನೆಂದರೆ, ಬೆಂಗಳೂರಿನಲ್ಲಿ ಮತ್ತು ರಾಜ್ಯದಲ್ಲಿ ಆಟೋ ಮಾಲೀಕರು ಮತ್ತು ಟ್ಯಾಕ್ಸಿ ಮಾಲೀಕರು ಇರುತ್ತಾರೆ. ಕೆಲವೊಂದು ಆಟೋ ಮಾಲೀಕರು ಪ್ರತಿ ದಿವಸ ಇಂತಿಷ್ಟು ಹಣದ ಮೇರೆಗೆ ಡ್ರೈವರ್‌ನ್ನು ನೇಮಕ ಮಾಡಿಕೊಂಡು, ಅವರಿಗೆ ವಾಹನಗಳನ್ನು ಕೊಟ್ಟಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಒಮ್ಮೆ ಸರ್ವಪಕ್ಷಗಳ ಸಭೆಯನ್ನು ಕರೆದು, ಪಾರಂಪರಿಕವಾದಂತಹ ವೃತ್ತಿಯಲ್ಲಿ ಇರುವಂಥವರಿಗೆ ಈ ರೀತಿ ಟ್ಯಾಕ್ಸಿ ಡ್ರೈವರ್‌ಗಳು ಇರಬಹುದು, ಆಟೋ ಚಾಲಕರು ಇರಬಹುದು, ಮಡಿವಾಳರು ಇನ್ನು ಅನೇಕ ಪಾರಂಪರಿಕ ವೃತ್ತಿಯಲ್ಲಿರುವವರಿಗೆ ಐದೈದು ಸಾವಿರ ರೂಪಾಯಿಗಳನ್ನು ಘೋಷಣೆ ಮಾಡಿದಾಗ, 12ನೇ ಶತಮಾನದ ಬಸವಾದಿ ಶರಣರ ಇದ್ದಾಗ, ಏನು ಪಾರಂಪರಿಕವಾಗಿ ವೃತ್ತಿಯಲ್ಲಿ ಇದ್ದರವರಿಗೆ ಗೌರವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗುತ್ತಿತ್ತು, ಅದು ಪುನರಾವರ್ತನೆಯಾಗಿದೆ ಎಂದು ನಾನು ಅವರಿಗೆ ಬಹಳ ಹೃದಯಪೂರ್ವಕವಾಗಿ ಅಭಿನಂದಿಸಿದ್ದೇನೆ. ಆದರೆ, ಈಗ ಏನಾಗಿದೆಯೆಂದರೆ, ಮಾಲೀಕರಿಗೆ ಬಡ ಆಟೋರಿಕ್ಷಾ ಚಾಲಕ ಮತ್ತು ಬಡ ಟ್ಯಾಕ್ಸಿ ಡ್ರೈವರ್‌ಗಳಿಗೆ ರೂ.5,000/-ಗಳು ಸಿಗಬೇಕು. ಅವರು ಸುಮಾರು ಎರಡು ಲಕ್ಷ ಆಟೋ ಡ್ರೈವರ್‌ಗಳಿಗೆ ಕೊಡಲಾಗಿದೆಯೆಂದು ಹೇಳುತ್ತಿದ್ದಾರೆ, ಅದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ನಿಜವಾದ ಬಡ ಆಟೋರಿಕ್ಷಾ ಚಾಲಕ ಮತ್ತು ಬಡ ಟ್ಯಾಕ್ಸಿ ಡ್ರೈವರ್‌ಗಳಿಗೆ ಅದು ತಲಪಬೇಕಾಗಿತ್ತು. ಆದರೆ ಅವರಿಗೆ ತಲಪಿಲ್ಲ. ಅದು ಮಾಲೀಕರಿಗೆ ತಲಪಿದೆ. What about the fate of poor drivers? ಅದರ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಹೇಳತಕ್ಕಂಥದ್ದು ನಾವು ಸಂಪೂರ್ಣವಾಗಿ ತಿರಸ್ಕಾರ ಮಾಡಿಲ್ಲ. ಬೆಂಗಳೂರು ಇರಬಹುದು, ಬೇರೆ ಕಡೆಗಳಲ್ಲಿ ಇರಬಹುದು, 100ಕ್ಕೆ ಶೇ.90ರಷ್ಟು ಆಟೋ ಡ್ರೈವರ್ ಮತ್ತು ಮಾಲೀಕರು ಒಬ್ಬನೇ ಇರುತ್ತಾರೆ. ಬಹಳಷ್ಟು ಕಡೆ ಬೆರಳೆಣಿಕೆಯಷ್ಟು ಇದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, 100ಕ್ಕೆ ಶೇ.90 ರಷ್ಟು ಆಟೋ ಡ್ರೈವರ್ ಮತ್ತು ಮಾಲೀಕರು ಒಬ್ಬರೆ ಎಂದು ಹೇಳುತ್ತಿದ್ದೀರಲ್ಲ. ಬೆಂಗಳೂರು ಮಹಾನಗರದಲ್ಲಿ ನಿಜವಾಗಲೂ ಕೂಡ 100ಕ್ಕೆ ಶೇ.50ರಷ್ಟು ಜನ ಆಟೋ ಮಾಲೀಕರು-ಕಂ-ಡ್ರೈವರ್‌ಗಳು ಮತ್ತು ಟ್ಯಾಕ್ಸಿ ಮಾಲೀಕರು-ಕಂ-ಡ್ರೈವರ್‌ಗಳು ಸಿಗುವುದಿಲ್ಲ. ಸಾಕಷ್ಟು ಜನ ಬಾಡಿಗೆಗೆ ಪಡೆದುಕೊಂಡು ಓಡಿಸುತ್ತಿದ್ದಾರೆ. ಪಾಪ, ಅವರಿಗೆ ಅದೇ ಜೀವನ ಆಗಿದೆ. ಇವತ್ತಿನ ದಿವಸ ಡಿಗ್ರಿ ಮತ್ತು ಮಾಸ್ಟರ್ ಡಿಗ್ರಿ ಮಾಡಿದಂಥವರು ಕೂಡ ಡ್ರೈವರ್ ಕೆಲಸ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಮಾನ್ಯ ಸಚಿವರಿಗೆ ಉತ್ತರ ಕೊಡಲು ಬಿಡಿ. ನಾವು ಇನ್ನೂ ಎರಡು ಪ್ರಶ್ನೆಗಳಲ್ಲೇ ಇದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 100ಕ್ಕೆ ಶೇ.90 ರಷ್ಟು ಆಟೋ ಡ್ರೈವರ್ ಮತ್ತು ಮಾಲೀಕರು ಒಬ್ಬರೆ ಇರುತ್ತಾರೆಂದು ಹೇಳಿದರು, ಅದಕ್ಕೆ ಹೇಳುತ್ತಿದ್ದೇನೆ. ಸರ್ಕಾರ ಘೋಷಣೆ ಮಾಡಿರತಕ್ಕಂಥದ್ದನ್ನು ಸಮಾಜದ ಕಟ್ಟಕಡೆಯ ವ್ಯಕ್ತಿ ಯಾರಿದ್ದಾರೆ ಅವರಿಗೆ ತಲಪಬೇಕಿತ್ತು, ಅದು ತಲಪುತ್ತಿಲ್ಲ ಎನ್ನತಕ್ಕಂಥದ್ದು ನಮ್ಮ ಕಾಳಜಿ ಅಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ಬಾರಿ ಯೋಜನೆ ತರತಕ್ಕಂಥ ಸಂದರ್ಭದಲ್ಲಿ ಕೆಲವು ಮಾನದಂಡಗಳನ್ನು ಹಾಕಿ ಮಾಡಬೇಕಾಗುತ್ತದೆ. ಆ ಮಾನದಂಡಗಳನ್ನು ಹಾಕಿಕೊಂಡು ಮಾಡತಕ್ಕಂಥ ಸಂದರ್ಭದಲ್ಲಿ ಇವತ್ತಿನ ದಿವಸ ಅನೇಕ ಅರ್ಜಿಗಳು ಬಂದಂಥ ಸಂದರ್ಭದಲ್ಲಿ ವಿಲೇವಾರಿ ಮಾಡಿ ಅವರಿಗೆ ಹಣ ಕಳುಹಿಸಿರತಕ್ಕಂಥದ್ದನ್ನು ಮಾಡಬೇಕಾಗುತ್ತದೆ. ಕೋವಿಡ್–19 ಸಂದರ್ಭ ಬಂದು, ಮುಗಿದುಹೋಗಿದ್ದು ಈಗಾಗಲೇ ನಾರ್ಮಲ್ ಹಂತಕ್ಕೆ ಬಂದಿದೆ. ಪುನಃ ಅದನ್ನು ಪ್ರಾರಂಭ ಮಾಡತಕ್ಕಂಥದ್ದು ಬಹಳ ಕಷ್ಟ ಸಾಧ್ಯ ಇದೆ. ಏಕೆಂದರೆ, ಈಗಾಗಲೇ ಸರ್ಕಾರದ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿದಾಗ, ಸರ್ಕಾರಕ್ಕೆ ಬರತಕ್ಕಂಥ ರಾಜಸ್ವ ಸಾಕಷ್ಟು ಕೊರತೆಯಾಗಿದೆ. ಅಂತಹ ಕೊರತೆ ಇದ್ದಂಥ ಸಂದರ್ಭದಲ್ಲೂ ಕೂಡ ಇಂತಹ ಸಾಕಷ್ಟು ಫಲಾನುಭವಿಗಳಿಗೆ ಹಣ ಕೊಡಿಸುವಂಥದ್ದನ್ನು ಮಾಡಿದ್ದೇವೆ. ಆದರೆ ಪುನಃ ಅದನ್ನು ಪರಿಶೀಲನೆ ಮಾಡಿದರೆ, 'ಜೇನುಗೂಡಿಗೆ ಕಲ್ಲು ಹೊಡೆದಂತೆ' ಆಗುತ್ತದೆ. ಅದು ಆಗುವುದಕ್ಕೆ ಆಗುವುದಿಲ್ಲ. ಈಗಾಗಲೇ ಅದು ಮುಗಿದು ಹೋಗಿರತಕ್ಕಂಥದ್ದು. ಅದು ಸುಮಾರು ನಾಲ್ಕು ತಿಂಗಳ ಹಿಂದೆಯೇ ಆಗಿಹೋಗಿರತಕ್ಕಂಥದ್ದು. ಬಹುತೇಕ ನಮ್ಮ ಅಧಿಕಾರಿಗಳು ನನಗೆ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ, ಟ್ಯಾಕ್ಸಿ ಡ್ರೈವರ್–ಕಂ–ಮಾಲೀಕರು ಇರತಕ್ಕಂಥದ್ದು ಬಹಳಷ್ಟು ಜನ ಇದ್ದಾರೆ. ಅದರ ಫಲಾನುಭವಿಗಳು ಹಣವನ್ನು ತೆಗೆದುಕೊಂಡಿದ್ದಾರೆ. ಒಂದೊಂದು ಕಡೆ ಡಬಲ್ ಡ್ರೈವರ್‌ಗಳನ್ನು ಇಟ್ಟುಕೊಂಡಿರತಕ್ಕಂಥದ್ದು ಕೂಡ ಇದೆ. ಆದರೆ ನಾವು ಮಾಡಿರತಕ್ಕಂಥ ಮಾನದಂಡದ ಪ್ರಕಾರವೇ ಬಂದಿರತಕ್ಕಂಥ ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆ.

(ಮುಂದು...)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(21)29.01.2021/1.30/ಎಂ.ಎಂ-ಆರ್.ಎನ್

(ಉಪಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ 59**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ ಉತ್ತರವೇನೋ ಒದಗಿಸಿದ್ದಾರೆ. ಆದರೆ ನಾನು ಕೇಳುವಂತಹ ಪ್ರಶ್ನೆ ಇಲಾಖೆಯಲ್ಲಿರುವವರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ. ನಾನು ಬೀದರ್, ಗುಲ್ಬರ್ಗ, ರಾಯಚೂರು ಈ ಕಡೆಗಳಲ್ಲಿ ಅಲ್ಪಸಂಖ್ಯಾತರು ಜಾಸ್ತಿ ಜನಸಂಖ್ಯೆಯಲ್ಲಿರುವುದರಿಂದ ಇಲ್ಲಿ ಅಭಿವೃದ್ಧಿಕಾರ್ಯಗಳಾಗುತ್ತಿಲ್ಲ. ಆ ಬಗ್ಗೆ ಏನು ಬಜೆಟ್ ಇದೆಯೆಂದು ಕೇಳಿದ್ದೇನೆ. ಇಲ್ಲಿ ಮಾಹಿತಿ ನೀಡುವಲ್ಲಿ 2018-19ರಲ್ಲಿ 1,475 ಲಕ್ಷ ಅನುದಾನ ಕೊಟ್ಟಿದ್ದಾರೆ. 2019-20ರಲ್ಲಿ 125 ಲಕ್ಷ ಅನುದಾನಕ್ಕೆ ಬಂದಿದ್ದಾರೆ. ಅಂದರೆ ಅನುದಾನ ಏತಕ್ಕೆ ಕಡಿಮೆಯಾಯಿತು? ಇದರಿಂದ ಅಭಿವೃದ್ಧಿಕಾರ್ಯಗಳಾಗುತ್ತಿಲ್ಲ ಎನ್ನುವ ಆತಂಕ ನನಗಿದೆ. ಏಕೆಂದರೆ, ಅನುದಾನವನ್ನು scheme-wise ಕೊಟ್ಟಿದ್ದೀರಿ. scheme-wise ನಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ 'ಅರಿವು' ಸಾಲ ಕೊಡುತ್ತೀರಿ. ಅಲ್ಲಿ ಮುಸ್ಲಿಂರು, ಸಿಖ್ಖರು ಮತ್ತು ಬೌದ್ಧರು ಇದ್ದಾರೆ ಇದನ್ನು ಎಲ್ಲರಿಗೂ ಕೊಡಬೇಕು. ಆದರೆ ಕಳೆದ ವರ್ಷದಲ್ಲಿ ಕೇವಲ 907 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಹಿಂದಿನ ಸಲ ಸುಮಾರು 2,759 ಲಕ್ಷ ರೂಪಾಯಿಗಳಿತ್ತು. ಇದು ಏತಕ್ಕೆ ಕಡಿಮೆಯಾಯಿತು? ಮಕ್ಕಳಿಗಾಗಲೀ ಅಥವಾ ಸಮುದಾಯಕ್ಕಾಗಲೀ ಅಭಿವೃದ್ಧಿ ಮಾಡುವುದಕ್ಕೆ ಏತಕ್ಕೆ ಈ ಫಂಡ್ ಅನ್ನು ಕಡಿವಾಣ ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ.

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು Colony Development Programme ಆಗಿದೆ. ಅದು ಮೂರು ವರ್ಷದ ಸಲುವಾಗಿತ್ತು. ಕಳೆದ ವರ್ಷದ ಬಜೆಟ್‌ನಲ್ಲಿ ರದ್ದು ಮಾಡಿದ್ದಾರೆ. ಆದ್ದರಿಂದ ಆ ಕೆಲಸದ ಸಲುವಾಗಿ ಯಾವ ಫಂಡ್ ನಮ್ಮ ಕಡೆ ಇಲ್ಲ, ನಮಗೆ ಮಾಡುವುದಕ್ಕೆ ಬರುವುದಿಲ್ಲ. ಮೂರು ವರ್ಷ ಎಷ್ಟು ಫಂಡ್ ಇತ್ತು ಅಷ್ಟನ್ನೂ ಕೊಟ್ಟುಬಿಟ್ಟಿದ್ದೇವೆ. ಆದರೆ ಕೆಲವು ಯೋಜನೆಗಳಿಗೆ ಹೆಚ್ಚು ಅನುದಾನವನ್ನು ಮಂಜೂರು ಮಾಡಿದ್ದಾರೆ ಅಂದರೆ 102 ಕೋಟಿ ರೂಪಾಯಿಗಳು. ಆ ಕೆಲಸಗಳೆಲ್ಲಾ ಅರ್ಧ ಆಗಿವೆ. ಅದರ ಸಲುವಾಗಿ follow up ಮಾಡಿ, ಆರ್ಥಿಕ ಇಲಾಖೆಯಿಂದ ಮಂಜೂರಾತಿ ಪಡೆದುಕೊಂಡು ಅರ್ಧವಾಗಿರುವ ಕೆಲಸಗಳನ್ನು ಪೂರ್ಣ ಮಾಡುತ್ತೇವೆ. ಮಕ್ಕಳಿಗೆ ಏನು ಬೇರೆ ಬೇರೆ ಸ್ಕೀಂಗಳಿವೆ ಆ ಸ್ಕೀಂನಲ್ಲಿ ಈ ವರ್ಷ ಏತಕ್ಕೆ ಅನುದಾನ ಕಡಿಮೆಯಾಗಿದೆ ಎಂದರೆ, ಕೋವಿಡ್ ಸಲುವಾಗಿ ನಮ್ಮ ಇಲಾಖೆಗೆ ಸುಮಾರು ಶೇ.38ರಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುದಾನವನ್ನು ಕಟ್ ಮಾಡಿದ್ದರಿಂದಾಗಿ ಈ ಎಲ್ಲಾ ಸ್ಕೀಂಗಳಿಗೆ ಫಂಡ್ ಕಡಿಮೆಯಾಗಿದೆ. ಈ ವರ್ಷದ ಬಜೆಟ್‌ನಲ್ಲಿ ಬಹಳಷ್ಟು ತೊಂದರೆಯಾಗಿದೆ. ಮುಂದಿನ ಬಜೆಟ್‌ನಲ್ಲಿ ನಮಗೆ ಇಂತಿಷ್ಟು ಫಂಡ್ ಬೇಕೇ ಬೇಕೆಂದು ಅವರಿಗೆ ತಿಳಿಸಿದ್ದೇವೆ. ಈ ವರ್ಷ ಕೋವಿಡ್ ಕಾರಣದಿಂದ ಎಲ್ಲಾ ಫಂಡ್‌ಗಳು ಕಡಿಮೆಯಾಗಿವೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಕೋವಿಡ್ ಬಂದಿದ್ದು 2020ರಲ್ಲಿ. 2018-19, 2019-20ರಲ್ಲಿ ಅನುದಾನ ಕಡಿಮೆಯಾಗಿದೆ ಏತಕ್ಕೆ ಎಂದು ಕೇಳುತ್ತಿದ್ದೇನೆ. ತಾವು ಕೋವಿಡ್ ನೆಪ ಹೇಳುವುದು ಬೇಡ. ಏಕೆಂದರೆ, ಕೋವಿಡ್ ಈ ವರ್ಷ ಬಂದಿದೆ ಅದಕ್ಕೆ ಕಡಿಮೆ ಮಾಡಿದ್ದೇವೆ ಎಂದರೆ ಹೌದು ಈ ತೊಂದರೆಯಿಂದಾಗಿ ಕಡಿಮೆ ಮಾಡಿದ್ದಾರೆ ಎಂದು ಒಪ್ಪಿಕೊಳ್ಳಬಹುದು. ಆದರೆ 2019-20ರ ಆರ್ಥಿಕ ವರ್ಷದಲ್ಲಿ ಬಹಳ ಕಡಿಮೆಯಾಗಿದೆ. ಕೊಟ್ಟೂ ಕೊಡಲಾರದ ಹಾಗೆ ಮಾಡಿದ್ದಾರೆ ಅದು ಏಕೆಂದು ಕೇಳುತ್ತಿದ್ದೇನೆ.

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ಸ್ಕೀಂ ಅನ್ನು ರದ್ದು ಮಾಡಿದ್ದಾರೆ. 800 ಕೋಟಿ ಅನುದಾನವನ್ನು ಒಟ್ಟು ಮೂರು ವರ್ಷದ ಸಲುವಾಗಿ ಕೊಟ್ಟಿದ್ದರು. ಆ ಸ್ಕೀಂ ಸಲುವಾಗಿ ಕೊಟ್ಟಿದ್ದ 800 ಕೋಟಿ ಅನುದಾನವೆಲ್ಲಾ ಮುಗಿದಿದೆ. ಆದರೂ ಹೆಚ್ಚುವರಿಯಾಗಿ 100 ಕೋಟಿ ಅನುದಾನ ಮಂಜೂರು ಬೇಕೆಂದು ಸರ್ಕಾರಕ್ಕೆ ಮನವಿ ಮಾಡಲಾಗಿತ್ತು, ಅದರಲ್ಲಿ ನಮ್ಮ ಕಡೆ ಇನ್ನೂ ಅರ್ಧ ಉಳಿದಿದೆ ಅದರ ಸಲುವಾಗಿ ನಾವು follow up ಮಾಡುತ್ತಿದ್ದೇವೆ. ಸ್ಕೀಂ ಸಲುವಾಗಿ ಕೊಟ್ಟಿದ್ದ 800 ಕೋಟಿ ರೂಪಾಯಿಗಳನ್ನೆಲ್ಲಾ ಮುಗಿಸಿ ಬಿಟ್ಟಿದ್ದೇವೆ. ಅದರಲ್ಲಿ ಏನೂ ಉಳಿದಿಲ್ಲ.

**ಶ್ರೀ ಅರವಿಂದ ಕುಮಾರ್ ಅರಳಿ:-** 800 ಕೋಟಿ ರೂಪಾಯಿಗಳನ್ನು ಯಾವ ಸ್ಕೀಂಗೆ ಕೊಡಲಾಗಿತ್ತು?

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:-** Colony Development Programme, ಅದರಲ್ಲಿ ಕೊಟ್ಟಿದ್ದ ಅನುದಾನವೆಲ್ಲಾ ಮುಗಿದಿದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಗಂಗಾ ಕಲ್ಯಾಣ ಎಲ್ಲಾ ಇತ್ತು.

**ಉಪಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ್ ಅರಳಿಯವರೇ ಅದಕ್ಕೆ ಉತ್ತರ ಬಂದಿದೆಯಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಅರವಿಂದ ಕುಮಾರ್ ಅರಳಿ:–** ಸರಿಯಾದ ಉತ್ತರ ಬಂದಿಲ್ಲವೆಂದು ಕೇಳುತ್ತಿದ್ದೇನೆ.

**ಉಪಸಭಾಪತಿಯವರು:–** ಮಾನ್ಯ ಸಚಿವರೇ, ಯಾವ ಉತ್ತರ ಸರಿಯಾಗಿ ಬಂದಿಲ್ಲವೆಂದು ತಿಳಿಸಿ.

**ಶ್ರೀ ಅರವಿಂದ ಕುಮಾರ್ ಅರಳಿ:–** ತಾವು ಹೇಳಿದ ಉತ್ತರವನ್ನೇ ತೆಗೆದುಕೊಂಡು ಕುಳಿತುಬಿಡಬೇಕೆಂದರೆ ನಾನು ಕುಳಿತು ಬಿಡುತ್ತೇನೆ. ಅಭ್ಯಂತರವೇನೂ ಇಲ್ಲ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಚಿವರು ಸ್ಕೀಂ ಬಗ್ಗೆ ಹೇಳಿದ್ದಾರೆ ಸಾಕಲ್ಲವೇ?

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಚಿವರು ಉತ್ತರ ಕೊಟ್ಟಿರುವುದನ್ನು ನೋಡಿ. ಕಳೆದ ವರ್ಷ ನೀವು ಬಜೆಟ್‌ನಲ್ಲಿ ಏನು ಹಂಚಿಕೆ ಮಾಡಿದ್ದೀರಿ ಅದು ಖರ್ಚಾಗಲಿಲ್ಲ. 2019–20ಕ್ಕೆ ಬಹಳ ಕಡಿಮೆ ಹಂಚಿಕೆ ಮಾಡಿದ್ದಾರೆ ಏತಕ್ಕೆ ಎಂದು ಕೇಳುತ್ತಿದ್ದೇನೆ.

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:–** ಬಂದಂತಹ ಫಂಡ್ ಎಲ್ಲಾ ಖರ್ಚಾಗಿದೆ ಏನೂ ಹೆಚ್ಚಿಗೆ ಉಳಿದಿಲ್ಲ ಹಾಗೂ ಯಾವ ಫಂಡ್ ಕೂಡ ಲ್ಯಾಪ್ಸ್ ಆಗಿಲ್ಲ. ನಾವು ಎಲ್ಲವನ್ನೂ ಉಪಯೋಗಿಸಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 47**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಮಂತ್ರಿಗಳು ಸರ್ಕಾರಿ ಉತ್ತರವನ್ನು ಕೊಟ್ಟಿದ್ದಾರೆ. 'ಮಕ್ಕಳ ಗ್ರಾಮಸಭೆ' ಇದು ವಿಶ್ವಸಂಸ್ಥೆಯ ಒಂದು ಕಾರ್ಯಕ್ರಮವಾಗಿದೆ. ನವೆಂಬರ್ 13ನೇ ತಾರೀಖಿನಿಂದ ನವೆಂಬರ್ 30ರೊಳಗಡೆ ಇಡೀ ಪ್ರಪಂಚದಲ್ಲಿ ಮಕ್ಕಳ ಗ್ರಾಮಸಭೆ ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. 1993ರಿಂದಲೂ ಸಹ ಈ ಕಾರ್ಯಕ್ರಮಕ್ಕನುಗುಣವಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮುಖ್ಯವಾಗಿ ಗ್ರಾಮಸಭೆಯಲ್ಲಿ ಚರ್ಚೆಯಾಗಬೇಕಾದುದು ಬಹಳಷ್ಟು ಅಂಶಗಳಿವೆ. ಅದರಲ್ಲಿ ಬಾಲ್ಯವಿವಾಹ, ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಮಕ್ಕಳ ಮಾರಾಟ ಮತ್ತು ಸಾಗಾಟ, ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಮಕ್ಕಳಿಗೆ ಚುಚ್ಚುಮದ್ದು, ಪೌಷ್ಟಿಕಾಂಶಗಳ ಲಭ್ಯತೆ. ಸುಮಾರು ಶೇ.40 ಭಾಗದಷ್ಟು ಮಕ್ಕಳು ಇರುವುದು ಗ್ರಾಮೀಣ ಪ್ರದೇಶದಲ್ಲಿ. ಅಲ್ಲಿರುವಂತಹ ಸಮಸ್ಯೆಗಳನ್ನು ನೋಡಿದರೆ; ಬೆಂಗಳೂರು ನಗರದಲ್ಲಿ ನೋಡಿದಾಗ ಯಾವುದೇ ಹೋಟೆಲ್‌ಗೆ ಹೋದರೂ ಸಹ ಅಲ್ಲಿರುವಂತಹ ಕ್ಲೀನರ್‌ಗಳೆಲ್ಲರೂ ಮಕ್ಕಳೇ ಆಗಿದ್ದಾರೆ. ತಾವು ಕೆಲವು ಅಂಕಿ-ಅಂಶಗಳನ್ನು ಕೊಟ್ಟಿದ್ದೀರಿ. 6011 ಗ್ರಾಮ ಪಂಚಾಯಿತಿಗಳ ಪೈಕಿ 3826 ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸಲಾಗಿದೆಯೆಂದು ಹೇಳಿದ್ದೀರಿ. ತಾವು ಹಿರಿಯ ಮಂತ್ರಿಗಳಾಗಿದ್ದೀರಿ. ಪೌಷ್ಟಿಕಾಂಶದ ಕೊರತೆಯಿಂದ ಕರ್ನಾಟಕ ರಾಜ್ಯದಲ್ಲಿ ಎಷ್ಟು ಮಕ್ಕಳು ಜನ್ಮದಲ್ಲಿಯೇ ಸಾವನ್ನಪ್ಪುತ್ತಿದ್ದಾರೆ ಎನ್ನುವುದನ್ನು ತಾವು ತಿಳಿದುಕೊಂಡಿರುತ್ತೀರಿ. ಅದು ಶೇ.35ಕ್ಕಿಂತ ಜಾಸ್ತಿ ಇದೆ. ಗ್ರಾಮಸಭೆಗಳಲ್ಲಿ ಮುಖ್ಯವಾಗಿ ಮಕ್ಕಳ ಪೌಷ್ಟಿಕಾಂಶದ ಬಗ್ಗೆ ಚರ್ಚೆಯಾಗಬೇಕು. ಈಗ ವರ್ಷಕ್ಕೊಂದು ಮಕ್ಕಳ ಗ್ರಾಮಸಭೆಗಳು ನಡೆಯುತ್ತಿದೆ. ಆದರೆ ಮಕ್ಕಳ ಜನಸಂಖ್ಯೆ ಪ್ರಮಾಣವನ್ನು ನೋಡಿದಾಗ ಕನಿಷ್ಠ ಪಕ್ಷ ವರ್ಷಕ್ಕೆ ನಾಲ್ಕಾದರೂ ಮಕ್ಕಳ ಗ್ರಾಮಸಭೆಗಳನ್ನು ಕರೆದು ಪೌಷ್ಟಿಕಾಂಶದ ಬಗ್ಗೆ ಚರ್ಚೆಯಾಗಬೇಕು. ಇವೊತ್ತು ಸಣ್ಣ ಮಕ್ಕಳ ಮಾರಾಟ ನಡೆಯುತ್ತಿದೆ. ಅದರ ಬಗ್ಗೆ ನಿರ್ಬಂಧ ಹಾಕುವುದಕ್ಕೆ ಏನು ಮಾಡಬೇಕೆಂದು ಏನಾದರೂ ತಮ್ಮಲ್ಲಿ ವರದಿಗಳು ಇದ್ದರೆ ದಯವಿಟ್ಟು ಸದನಕ್ಕೆ ಮತ್ತು ರಾಜ್ಯಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಪೌಷ್ಟಿಕಾಂಶದ ಕೊರತೆಯಿಂದ ಸತ್ತಿರುವಂತಹ ಮಕ್ಕಳು ಬಹಳಷ್ಟಿದ್ದಾರೆ. ಆದ್ದರಿಂದ ಅದರ ಬಗ್ಗೆ ಏನಾದರೂ ವರದಿ ಇದೆಯೇ ಅಥವಾ ವರದಿ ಇಲ್ಲದಿದ್ದರೆ ಮುಂದೆ ಏನಾದರೂ ವರದಿಯನ್ನು ತರಿಸಿಕೊಡುತ್ತೀರಾ ಅಥವಾ ಮುಂದೆ ಬರುವಂತಹ ಗ್ರಾಮಸಭೆಗಳಲ್ಲಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ಸಂಪೂರ್ಣವಾದ ವರದಿಯನ್ನು ಕೊಡುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಿಜಕ್ಕೂ ಕೂಡ ಹಿರಿಯರಾದ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಎಲ್ಲಾ ಸದಸ್ಯರಿಗೂ ಉತ್ತರ ಸಿಕ್ಕಿದೆಯೆಂದು ನಾನು ಭಾವಿಸುತ್ತೇನೆ. ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ನಡೆಯುತ್ತಿರುವಂತಹ ವಿಶೇಷವಾದ ಈ ಕಾರ್ಯಕ್ರಮ ಮಕ್ಕಳಿಗೋಸ್ಕರ ಆಗಿರುವಂತಹ ಕಾರ್ಯಕ್ರಮವಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 14ನೇ ನವೆಂಬರ್ 2020 ರಿಂದ ಫೆಬ್ರವರಿ 28, 2021ವರೆಗೆ ಮಕ್ಕಳ ಸ್ನೇಹಿ ಗ್ರಾಮಪಂಚಾಯತ್ ಅಭಿಯಾನವನ್ನು ಕೂಡ ನಾವು ಮಾಡುತ್ತಿದ್ದೇವೆ. ಇದು ಬಹಳ ಜನ ಸದಸ್ಯರುಗಳಿಗೂ ಗೊತ್ತಿರುವುದಿಲ್ಲ, ಮಕ್ಕಳಿಗಂತೂ ಗೊತ್ತಿರುವುದಕ್ಕೆ ಸಾಧ್ಯವೇ ಇಲ್ಲ. ತಾವು ಇದನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಏತಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆಂದರೆ, ಇದನ್ನು ಎಲ್ಲರೂ ತಿಳಿದುಕೊಳ್ಳದಿದ್ದರೆ 100 ಕಾರ್ಯಕ್ರಮಗಳ ಮಧ್ಯೆ ಇದೂ ಒಂದು ಕಾರ್ಯಕ್ರಮವಾಗುತ್ತದೆ. ಇದರ 2-3 ಉದ್ದೇಶಗಳನ್ನು ಮಾತ್ರ ತಾವು ಪ್ರಸ್ತಾಪ ಮಾಡಿದ್ದೀರಿ. ನಾನು ವಿವರಕ್ಕೆ ಹೋಗುವುದಿಲ್ಲ. ಎಲ್ಲರಿಗೂ ಉತ್ತರ ಕೊಟ್ಟಿದೆ. 1 ರಿಂದ 7 ವಿಷಯಗಳಿಗೆ ಸಂಬಂಧಪಟ್ಟಂತೆ ಏನೇನು ಕಾರ್ಯಕ್ರಮಗಳಿವೆ ಎನ್ನುವುದು ಈ ಉತ್ತರದಲ್ಲಿ ಇದೆ. ದಯವಿಟ್ಟು ಇದನ್ನು ಗಮನಿಸಿ. ವಿಶೇಷವಾಗಿ ನಾವು ಈ ವರ್ಷದಲ್ಲಿ ಏತಕ್ಕೆ ಈ ಅಭಿಯಾನವನ್ನು ತೆಗೆದುಕೊಂಡಿದ್ದೇವೆ ಎಂದರೆ, ಇದು ಹೇಗಾದರೂ ಮಾಡಿ ಮಕ್ಕಳ ತನಕ ತಲುಪಬೇಕೆನ್ನುವ ಉದ್ದೇಶದಿಂದ ಈ ಅಭಿಯಾನವನ್ನು ತೆಗೆದುಕೊಂಡಿದ್ದೇವೆ. ಗ್ರಹಚಾರಕ್ಕೆ 'ಕೋವಿಡ್' ಮತ್ತು ಗ್ರಾಮ ಪಂಚಾಯತಿ ಚುನಾವಣೆ ಬಂದ ತಕ್ಷಣ; ನಾನು ಈಗೇನು ಉತ್ತರ ಕೊಟ್ಟಿದ್ದೇನೆ ಅದರಂತೆ 6011 ಗ್ರಾಮ ಪಂಚಾಯಿತಿಗಳ ಪೈಕಿ 3826 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಈ ಸಭೆ ಮಾಡುವುದಕ್ಕೆ ಆಗಿದೆ. ಅದಕ್ಕೋಸ್ಕರವಾಗಿ ಇದನ್ನು ಮತ್ತೆ ಒಂದು ತಿಂಗಳು ವಿಸ್ತರಣೆ ಮಾಡಿದ್ದೇವೆ.

(ಮುಂದು)

(22) 29-01-2021/ 01-40/ ಕೆಹೆಚ್-ವಿಕೆ (ಎಂಡಿ)

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):-**

ಫೆಬ್ರವರಿ 28 ರಂದು ಹೆಣ್ಣು ಮಗುವಿನ ದಿನಾಚರಣೆ. ದೊಡ್ಡ ಹೆಣ್ಣು ಮಕ್ಕಳು ಅಲ್ಲ. ಫೆಬ್ರವರಿ 28 ರಂದು ಚಿಕ್ಕ ಹೆಣ್ಣು ಮಕ್ಕಳ ದಿನಾಚರಣೆ ಇದೆ. ಅಲ್ಲಿಯವರೆಗೂ ಕೂಡ ವಿಸ್ತರಣೆ ಮಾಡಿದ್ದೇವೆ. ನಾನು ಅದಕ್ಕೋಸ್ಕರ ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಸದಸ್ಯರು ಇನ್ನು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರೋ ಪಿ.ಡಿ.ಓ.,ಗಳು ಸುಳ್ಳು ವರದಿಯನ್ನು ಕೊಟ್ಟಿರಬಹುದು. ಮಾನ್ಯ ಸದಸ್ಯರು ಹೇಳಿರುವಂತಹ ವಿಷಯಗಳು ಯಾವುದು ಇಲ್ಲ ಎಂದು ನಾನು ಹೇಳುವುದಿಲ್ಲ. ಮಂತ್ರಿಯಾಗಿದ್ದರೂ ಕೂಡ ಸರ್ಕಾರಿ ಉತ್ತರವನ್ನೇ ನಾನು ಕೊಡಬೇಕು. 3826 ಗ್ರಾಮ ಪಂಚಾಯಿತಿಗೆ ನಾನು ಹೋಗಿ ಬರುವುದಕ್ಕೆ ಆಗುವುದಿಲ್ಲ. ಆದರೆ ನಾನು ಮಾನ್ಯ ಸದಸ್ಯರ ಉದ್ದೇಶಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಬಗ್ಗೆ ಬಹಳ ಜನರಿಗೆ ಗೊತ್ತಿಲ್ಲ. ಸ್ವಯಂ ಸೇವಾ ಸಂಸ್ಥೆಗಳಿಗೆ ಗೊತ್ತಿಲ್ಲ. ಸಮಾಜ ಸೇವೆ ಮಾಡಬೇಕೆಂಬ ಅಪೇಕ್ಷೆ ಇರುವಂತಹ ಸಂಸ್ಥೆಯವರಿಗೂ ಸಹ ಗೊತ್ತಿಲ್ಲ. ಮಕ್ಕಳಿಗೋಸ್ಕರ ಆಸಕ್ತಿ ತೆಗೆದುಕೊಂಡು ಈ ಒಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಇದನ್ನು ಪತ್ರಕರ್ತರು ಎಷ್ಟು highlight ಮಾಡುತ್ತಾರೋ ನನಗೆ ಗೊತ್ತಿಲ್ಲ. ನಾನು ಅದಕ್ಕೋಸ್ಕರ ಹೇಳುವುದೇನೆಂದರೆ, ಮಾನ್ಯ ಸದಸ್ಯರ ಕಳಕಳಿ ಏನಿದೆ, ಅವರ ಜೊತೆಗೆ ನಮ್ಮ ಸರ್ಕಾರ ಇದೆ. ಖಂಡಿತವಾಗಿ ಈ ಒಂದು ಕಾರ್ಯಕ್ರಮವನ್ನು ಯಶಸ್ವಿ ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಮಾನ್ಯ ಸಚಿವರೇ ತಾವು ಸರ್ಕಾರಿ ಉತ್ತರವನ್ನು ಕೊಟ್ಟಿದ್ದೇವೆ ಎಂದು ಹೇಳಿರುವುದಕ್ಕೆ ಕಾರಣ ಇಷ್ಟೆ. ಅದೇನೆಂದರೆ, ನಾನು ತಮ್ಮ ಹಿರಿತನವನ್ನು ನೋಡಿ ಆ ಪ್ರಶ್ನೆಯನ್ನು ಕೇಳಿದ್ದೇನೆ. ಏಕೆಂದರೆ, ತಮ್ಮ ಅನುಭವಕ್ಕೆ ಸರ್ಕಾರವನ್ನು ಬಿಟ್ಟು ಕೂಡ ತಮ್ಮಲ್ಲಿ ಮಾಹಿತಿ ಇರುತ್ತದೆ. ನಾವು ಸರ್ಕಾರದಲ್ಲಿ ಇಲ್ಲದೇ ಇದ್ದರೂ ಸಹ ಎಲ್ಲರೂ ನಮಗೆ ವಿಚಾರಗಳನ್ನು ತಿಳಿಸುತ್ತಾರೆ. ಅದನ್ನು ಹೇಳುವಂತಹದ್ದೇ ರಾಜಕಾರಣದಲ್ಲಿ ಬಹಳ ಮುಖ್ಯವಾದ ವಿಚಾರ. ಏಕೆಂದರೆ, ಮಕ್ಕಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಈ ಗ್ರಾಮ ಸಭೆಗಳನ್ನು ಕರೆಯುತ್ತೇವೆ. ಪಿ.ಡಿ.ಓ.,ಗಳು ಒಂದು ವರದಿಯನ್ನು ಕಳುಹಿಸುತ್ತಾರೆ. ಒಂದು ಜಿಲ್ಲೆ, ಎಲ್ಲಾ ಬರುತ್ತಿರುತ್ತದೆ ಎಂದು ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. ಆದರೆ ಕೆಲವು ಸಂದರ್ಭದಲ್ಲಿ ಮಕ್ಕಳ ಸಾಧನೆಯನ್ನು ಗುರುತಿಸುವಂತಹದ್ದು ಇದೆಯಲ್ಲವೇ, ಅದರಲ್ಲಿ ಕೇವಲ ಭಜನೆ ಮಾಡುವುದು, ಹಾಡು ಆಡುವುದು, ನೃತ್ಯ ಮಾಡುವುದು ಅಲ್ಲ. ಆ ಮಕ್ಕಳು ವೈಚಾರಿಕವಾಗಿ ಯಾವ ರೀತಿ ಬೆಳೆಯುತ್ತಾರೆ ಎನ್ನುವುದು ಸಹ ಬಹಳ ಮುಖ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವಂತಹ ಮಕ್ಕಳಿಗೆ ಚೆನ್ನಾಗಿ ಓದುವುದಕ್ಕೆ ಬಹಳ ಆಸಕ್ತಿ ಇರುತ್ತದೆ. ಆ ಮಕ್ಕಳಿಗೆ ಉತ್ತೇಜನ ನೀಡುವಂತಹದ್ದು ಬಹಳ ಮುಖ್ಯ. ಏಕೆಂದರೆ, ನಾವು ಗ್ರಾಮೀಣ ಪ್ರದೇಶಕ್ಕೆ ಹೋದಾಗ ಆ ಮಕ್ಕಳಿಗೆ ಉತ್ತೇಜನ ಕೊಡಲಿಲ್ಲವೆಂದರೆ ಆ ಮಕ್ಕಳು ಬೆಳೆಯುವುದಿಲ್ಲ. ಅವರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಾ ಇರುತ್ತಾರೆ. ಆದ್ದರಿಂದ, ಸರ್ಕಾರಿ ಉತ್ತರವನ್ನು ಕೊಟ್ಟಿದ್ದಾರೆ ಎಂದರೆ, ಅವರು ಹೇಳುವುದನ್ನು ಕೊಡುತ್ತಾರೆ. ಈಗ ಶಿವಮೊಗ್ಗವನ್ನು ತೆಗೆದುಕೊಂಡರೆ ಗಣಿಗಾರಿಕೆಯಲ್ಲಿ ಎಷ್ಟು ಜನ ಮಕ್ಕಳು ಕೆಲಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ ಎಂಬ ಬಗ್ಗೆ ಯಾರಿಗಾದರೂ ಲೆಕ್ಕ ಇದೆಯೇ? ಆದ್ದರಿಂದ, ಎಲ್ಲಾ ಕಡೆಯಲ್ಲಿಯೂ child labour ಎಂಬುವುದು ಇದೆ. ಅದಕ್ಕೋಸ್ಕರ ಪಾಶ್ಚಿಮಾತ್ಯ ದೇಶದಲ್ಲಿ "Children are property of the State" ಎಂದು ಹೇಳುತ್ತಾರೆ. ಆದ್ದರಿಂದ, ಮಕ್ಕಳ ಜವಾಬ್ದಾರಿ ಸರ್ಕಾರದ್ದು. ಮಕ್ಕಳ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು. ಮಾನ್ಯ ಸಚಿವರು ಆ ನಿಟ್ಟಿನಲ್ಲಿ ಏನಾದರೂ ಕೆಲಸ ಮಾಡುತ್ತಾರೆಯೇ ಎಂಬುದನ್ನು ಸದನದಲ್ಲಿ ಹೇಳಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನನಗೂ ಅರ್ಥವಾಗುತ್ತದೆ. ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿರುವುದಕ್ಕೋಸ್ಕರ ನಾನು ವಿವರಕ್ಕೆ ಹೋಗುತ್ತಿದ್ದೇನೆ. ಅವರು ಕೂಡ ಇನ್ನು ಬುಡಕ್ಕೆ ಬರುತ್ತಿದ್ದಾರೆ. ಅದಕ್ಕೆ ಸಂತೋಷ. ಇವತ್ತಿನ ದಿವಸ ಸರ್ಕಾರದ ಕಡೆಯಿಂದ ರಾಜ್ಯದ ಬಗ್ಗೆ ಏನು ಯೋಚನೆ ಮಾಡುತ್ತಿದ್ದೇವೆಯೆಂದರೆ, ನಾವು ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವ ಬಗ್ಗೆ 15 ದಿನಗಳಿಗೊಮ್ಮೆ ಸಮಸ್ಯೆಗಳ ಬಗ್ಗೆ ಮತ್ತು ಬೇಡಿಕೆಗಳ ಬಗ್ಗೆ ಪ್ರಶ್ನಿಸಿರುವುದರ ಬಗ್ಗೆ ಕ್ರಮ ಕೈಗೊಂಡಿರುವುದನ್ನು ಪಂಚತಂತ್ರದ ಮುಖಾಂತರ ತಂತ್ರಾಂಶವನ್ನು ಕೊಡುವಂತಹ ಪ್ರಯತ್ನವನ್ನು ನಡೆಸುತ್ತಿದ್ದೇವೆ. ನಾನು ಏಕೆ ಈ ಎಲ್ಲಾ ಅಂಶಗಳನ್ನು ಹೇಳುತ್ತಿದ್ದೇನೆ ಎಂದರೆ, ಈ ವಿಷಯಕ್ಕಾಗಿ ನಾನು ಒಂದು ದಿವಸ ವಿಶೇಷ ಸಭೆಯನ್ನು ಕರೆಯುತ್ತೇನೆ. ವಿಧಾನ ಪರಿಷತ್ತಿನಲ್ಲಿ ಇರಬಹುದು, ವಿಧಾನಸಭೆಯಲ್ಲಿ ಇರಬಹುದು ಮತ್ತು ಸಮಾಜ ಸೇವೆಯನ್ನು ಮಾಡುತ್ತಿರುವಂತಹ ಸಂಘ-ಸಂಸ್ಥೆಗಳು ಇರಬಹುದು. ಯಾರ್ಯಾರಿಗೆ ಆಸಕ್ತಿ ಇದೆಯೋ ಅವರು ಬರಬಹುದು. ನಾವು ಇನ್ನೇನನ್ನು ಮಕ್ಕಳಿಗೆ ಮಾಡಬಹುದೋ, ಅದನ್ನು ಮಕ್ಕಳಿಗೆ ಯಾವ ರೂಪದಲ್ಲಿಯೂ ವಿಶೇಷವಾದ ಜ್ಞಾನ ಸಿಗುವುದು ಕಷ್ಟ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಇನ್ನು ತಮ್ಮ ಕಳಕಳಿಗೆ ಸರ್ಕಾರ ಸ್ಪಂದಿಸುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 15**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರೇ ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶವನ್ನು ಕೊಡಿ. ಕಳೆದ ನವೆಂಬರ್ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿಯೂ ಕೂಡ ಈ ಪ್ರಶ್ನೆ ಚುಕ್ಕೆ ಗುರುತಿನ ಪ್ರಶ್ನೆಯಾಗಿತ್ತು. ಆದರೆ ಮಾನ್ಯ ಸಚಿವರು ಯಾವುದೇ ಉತ್ತರ ಕೊಟ್ಟಿರುವುದಿಲ್ಲ. ಇದರಲ್ಲಿ ಕೋಟ್ಯಂತರ ರೂಪಾಯಿಗಳ ಅವ್ಯವಹಾರವಾಗಿದೆ. ಮಾನ್ಯ ವಸತಿ ಸಚಿವರು 20 ಮನೆಗಳು ಎಂದರೆ, ಒಂದೊಂದು ಪಂಚಾಯಿತಿಯಲ್ಲಿ 50 ರಿಂದ 60 ಮನೆಗಳಿದ್ದು, ಅವು Roster System ನಲ್ಲಿ ಇದೆ. ಮಾನ್ಯ ಸಚಿವರು ಸದನದಲ್ಲಿ ಇದ್ದಾರೆ. ಕಳೆದ ನವೆಂಬರ್ ತಿಂಗಳಿನಲ್ಲಿಯೂ ಕೂಡ ಈ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಈಗಲೂ ಸಹ ಸಮಯ ಕೇಳಿದ್ದಾರೆ ಎಂದರೆ, ಅದಕ್ಕೆ ಅರ್ಥ ಇಲ್ಲ. ಈ ಪ್ರಶ್ನೆಗೆ ಸೋಮವಾರ ಅಥವಾ ಮಂಗಳವಾರ ಅರ್ಧ ಗಂಟೆ ಕಾಲವಧಿ ಚರ್ಚೆಗೆ ಸಮಯಾವಕಾಶವನ್ನು ಕೊಟ್ಟರೆ ಚರ್ಚೆ ಮಾಡಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸದಸ್ಯರೇ ಒಂದು ನಿಮಿಷ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ಸಂಬಂಧಪಟ್ಟ ಪ್ರಶ್ನೆ ನಮ್ಮ ಇಲಾಖೆಗೆ ಬರುವುದಿಲ್ಲ. ಇದು ವಸತಿ ಸಚಿವರ ವ್ಯಾಪ್ತಿಗೆ ಬರುತ್ತದೆ ಎಂದು ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದಕ್ಕೋಸ್ಕರ ಈ ಪ್ರಶ್ನೆ ವರ್ಗಾವಣೆಯಾಗಿದೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ವಸತಿ ಸಚಿವರು ಮನೆಯನ್ನು ಕೊಟ್ಟಿರುವಂತಹದ್ದು. ಇದನ್ನು ಪಿ.ಡಿ.ಓ., ಮತ್ತು ಇ.ಓ., ಅಧಿಕಾರಿಗಳು ಫಲಾನುಭವಿಗಳ ಆಯ್ಕೆ ಮಾಡುವಂತಹದ್ದು. ಇದನ್ನು ಅಲ್ಲಿನ ಗ್ರಾಮ ಸಭೆಗಳು ಮಾಡುತ್ತಿಲ್ಲ. ಅಲ್ಲಿ ಏನೂ ಮಾಡುತ್ತಿಲ್ಲ. ಎಲ್ಲವನ್ನೂ ಇ.ಓ.,ಗಳು ಮತ್ತು ಎಲ್ಲರೂ ಕೂಡ ಸೇರಿಕೊಂಡು ಮಾಡುತ್ತಿದ್ದಾರೆ. ಅದಕ್ಕೆ ಮಾನ್ಯ ಸಚಿವರೇ ಉತ್ತರವನ್ನು ಕೊಡಬೇಕಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ ಇದರ ಬಗ್ಗೆ ತಾವು ಸ್ವಲ್ಪ ನೋಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸದಸ್ಯರೇ ಒಂದು ನಿಮಿಷ. ಮನೆ ಹಂಚಿಕೆಯಲ್ಲಿ ಏನು ಲೋಪಗಳು ನಡೆದಿದೆ ಎನ್ನುವ ಬಗ್ಗೆ ಆಯ್ಕೆಯಿಂದ ಹಿಡಿದು ಮನೆ ಕಟ್ಟುವ ತನಕ ಪೂರ್ಣ ಜವಾಬ್ದಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸತಿ ಇಲಾಖೆಗೆ ಬರುತ್ತದೆ. ಇದು ನಮ್ಮ ಇಲಾಖೆಗೆ ಬರುವುದಿಲ್ಲ. ಅದಕ್ಕೋಸ್ಕರ ವಸತಿ ಇಲಾಖೆಯ ಮುಖಾಂತರ ಸರಿಯಾದ ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಡಿಸುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಈ ಪ್ರಶ್ನೆ ವಸತಿ ಇಲಾಖೆಗೆ ವರ್ಗಾವಣೆಯಾಗಿದೆ. ಮಾನ್ಯ ಸದಸ್ಯರೇ ಬುಧವಾರ ವಸತಿ ಇಲಾಖೆಯಿಂದ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ಮಾಡೋಣ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಚಿವರೇ, ದಯವಿಟ್ಟು ಈ ಪ್ರಶ್ನೆ ತಮ್ಮ ಇಲಾಖೆಗೆ ಬರುತ್ತದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರೇ ಒಂದು ನಿಮಿಷ. ಮನೆಗಳ ಹಂಚಿಕೆಗೆ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿ ಮಾಡುವಂತಹದ್ದು. ಇದು ತಮ್ಮ ಇಲಾಖೆಗೆ ಬರುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ ಸದನಕ್ಕೆ ವಸತಿ ಸಚಿವರು ಬಂದಾಗ ಇದರ ಬಗ್ಗೆ ಚರ್ಚೆ ಮಾಡಿ, ಇದಕ್ಕೆ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ಮಾಡೋಣ. ಈಗ ಈ ಪ್ರಶ್ನೆ ವರ್ಗಾವಣೆಯಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಸತಿ ಸಚಿವರು ಮನೆಗಳನ್ನು ಕೊಡುವುದಕ್ಕೆ ಮಾತ್ರ. ಫಲಾನುಭವಿಗಳಿಗೆ ನಿವೇಶನ ಮಾಡುವಂತಹದ್ದು ತಮ್ಮ ಇಲಾಖೆಗೆ ಬರುತ್ತದೆ.

**(ಗೊಂದಲ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಮಾನ್ಯ ವಸತಿ ಸಚಿವರಿಗೆ ಬರುವುದಿಲ್ಲ. ಮಾನ್ಯ ಸಚಿವರೇ, ಇದಕ್ಕೆ ತಾವೇ ಉತ್ತರವನ್ನು ಕೊಡಬೇಕು. ಪಿ.ಡಿ.ಓ., ಮತ್ತು ಇ.ಓ.,ಗಳು . . .

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೇ, ಒಂದು ನಿಮಿಷ. ತಾವು ಪತ್ರಿಕೆಗಳಲ್ಲಿ ಓದಿರಬಹುದು. ಮಾನ್ಯ ವಸತಿ ಸಚಿವರಾದ ಸೋಮಣ್ಣನವರು ಕೆಲವು ಕಡೆ ಹೋದಂತಹ ಸಂದರ್ಭದಲ್ಲಿ ಈ ರೀತಿಯ ವ್ಯತ್ಯಾಸಗಳಾಗಿವೆ ಎಂಬುದನ್ನು ಗಮನಿಸಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಿ.ಡಿ.ಓ.,ಗಳನ್ನು ಕರೆದು ಏನೇನು ಹೇಳಬೇಕೋ ಅದನ್ನು ಹೇಳಿದ್ದಾರೆ. ಆಯ್ಕೆಯಿಂದ ಹಿಡಿದು ಕೊನೆಯವರೆಗೂ ಕೂಡ ಪಿ.ಡಿ.ಓ.,ಗಳನ್ನು ಗಮನಿಸುವುದು ಸಹ ಮಾನ್ಯ ವಸತಿ ಸಚಿವರದೇ ಆಗಿರುತ್ತದೆ. ಅದಕ್ಕೋಸ್ಕರ ನಾನು ಉತ್ತರವನ್ನು ವಸತಿ ಸಚಿವರ ಮುಖಾಂತರ ಕೊಡಿಸುತ್ತೇನೆ. ಖಂಡಿತವಾಗಿ ಅಲ್ಲಿ ತಮ್ಮ ಉಪ ಪ್ರಶ್ನೆಗಳನ್ನು ಕೇಳಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರೇ, ಇದರ ಬಗ್ಗೆ ಒಂದು ಸ್ಪಷ್ಟೀಕರಣವನ್ನು ತೆಗೆದುಕೊಳ್ಳಿ. ಇದರಲ್ಲಿ ಏನಾಗಿದೆಯೆಂದರೆ, ಆರ್.ಡಿ.ಪಿ.ಆರ್. ಇಲಾಖೆಯಿಂದಲೂ ಅಷ್ಟೇ. ವಸತಿ ಇಲಾಖೆಯಿಂದ ಹೇಳಿ, ಅಲ್ಲಿಂದ ಪ್ರಧಾನ ಕಾರ್ಯದರ್ಶಿಯವರು ಉತ್ತರವನ್ನು ಕಳುಹಿಸಿದ್ದಾರೆ. ಮಾನ್ಯ ಸದಸ್ಯರೇ, ಬುಧವಾರ ಇದರ ಬಗ್ಗೆ ಸ್ಪಷ್ಟೀಕರಣವನ್ನು ತೆಗೆದುಕೊಂಡು, ತಮಗೆ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ಮಾಡೋಣ. ಈಗ ತಾವು ದಯಮಾಡಿ ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 28**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತಿನ ದಿವಸ ಬೆಂಗಳೂರು ನಗರ ಬಹಳ ಆಗಾಧವಾಗಿ ಮತ್ತು ಜನಸಂಖ್ಯೆ ಆಧಾರದಲ್ಲಿ ಬೆಳೆಯುತ್ತಿದೆ. ಆದ್ದರಿಂದ, ಸಾರ್ವಜನಿಕ ಸಾರಿಗೆ ಕೂಡ ಬಹಳ ಮುಖ್ಯವಾಗಿದೆ. ಇವತ್ತಿನ ದಿವಸ ಸಾಕಷ್ಟು ಮಧ್ಯಮ ವರ್ಗದವರು, ಬಡವರು ಈ ಒಂದು ಸಾರಿಗೆ ವ್ಯವಸ್ಥೆಯ ಮೇಲೆ ಅವಲಂಬಿಸಿರುವಂತಹದ್ದು ಪ್ರತಿಯೊಬ್ಬರಿಗೂ ಗೊತ್ತಿದೆ. ಇವತ್ತಿನ ದಿವಸ ಇಂತಹ ಒಂದು ಸಂದರ್ಭದಲ್ಲಿ ನಮ್ಮಲ್ಲಿರುವಂತಹ ರಸ್ತೆಗಳೆಲ್ಲಾ ಹಾಗೆಯೇ ಇದೆ. ಆ ರಸ್ತೆಗಳೇನೂ ಅಗಲವಾಗಿಲ್ಲ. ಇವತ್ತು ವಾಹನಗಳ ಸಂಖ್ಯೆ ಒಟ್ಟು 6537 ಇದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಎಲ್ಲಾ ರೀತಿಯ ವಾಹನಗಳು ತಮ್ಮಲ್ಲಿ ಇದೆ. ಅದೇ ರೀತಿ ಇವತ್ತಿನ ನಗರದಲ್ಲಿ 80 ಲಕ್ಷ ವಾಹನಗಳು ಪ್ರತಿ ದಿನ ಓಡಾಡುತ್ತಿವೆ. ಇವತ್ತಿನ ದಿವಸ ಬೆಂಗಳೂರು ನಗರ 700 ರಿಂದ 800 ಚದರ ಕಿ.ಮೀವರೆಗೆ ಹರಡಿಕೊಂಡಿದೆ. ಇಂತಹ ಒಂದು ಸಂದರ್ಭದಲ್ಲಿ ಒಟ್ಟು 10200 ಕಿ.ಮೀವರೆಗೆ ವಾಹನಗಳು ಓಡಾಡುತ್ತಿವೆ. ತಾವು ಕೊಟ್ಟಿರುವಂತಹ ಉತ್ತರದಲ್ಲಿ 1913 ರೂಟ್‌ಗಳು ಮತ್ತು ತಮ್ಮ ವ್ಯಾಪ್ತಿಯಲ್ಲಿ ಒಟ್ಟು 890 ಬಸ್ ತಂಗುದಾಣಗಳಿವೆ ಎಂದು ಕೊಟ್ಟಿದ್ದಾರೆ. ನಗರದ 14 ಕಡೆಗಳಲ್ಲಿ Bus Bay ಗಳನ್ನು ನಿರ್ಮಾಣ ಮಾಡಿದ್ದೇವೆ ಎಂದು ಹೇಳಿದ್ದಾರೆ. ತಮ್ಮ ಸಾರಿಗೆ ಸಂಸ್ಥೆಯ ಕಡೆಯಿಂದ ಬಸ್ಸುಗಳನ್ನು ಓಡಿಸಲಾಗುತ್ತದೆ. ಆದರೆ ವಾಹನಗಳು ಸಂಚಾರ ಮಾಡುವಾಗ ಬೇರೆ ವಾಹನಗಳಿಗೆ ತೊಂದರೆಯಾಗದೇ ಇರುವ ಹಾಗೆ ತಮ್ಮ ಸಿಬ್ಬಂದಿಗಳಿಗೆ ಯಾವ ರೀತಿ ಮಾನದಂಡ ಮತ್ತು ತರಬೇತಿಯನ್ನು ಕೊಡಲಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವುದಿಲ್ಲ. ದಯವಿಟ್ಟು ತಾವು ಕೊಟ್ಟಿರುವ ಉತ್ತರದ ಬಗ್ಗೆ ನನಗೆ ಅರ್ಥವಾಗಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ವಿವರವಾಗಿ ಹೇಳಬೇಕು. ನನಗೆ ಆ ರೀತಿ ಉತ್ತರವನ್ನು ಕೊಟ್ಟಿಲ್ಲ. ತಾವು ಏನು ಉತ್ತರವನ್ನು ಕೊಟ್ಟಿದ್ದೀರಿ ಎಂದರೆ, ಪ್ರಯಾಣಿಕರನ್ನು ಬಸ್ಸಿನಲ್ಲಿ ಕೂರಿಸಿಕೊಂಡು ಅವರನ್ನು ಎಲ್ಲಿ ಬೇಕೋ ಅಲ್ಲಿ ಇಳಿಸುತ್ತಾರೆ. ಅಷ್ಟಕ್ಕೆ ಮಾತ್ರ ತಾವು ಉತ್ತರವನ್ನು ಕೊಟ್ಟಿದ್ದೀರಿ. ಇನ್ನು ಎರಡು ಪ್ರಶ್ನೆಗಳು ಇವೆ. ಈ ಒಂದು ಪ್ರಶ್ನೆ ಮಾತ್ರ ಅಲ್ಲ. ಬಿ.ಎಂ.ಟಿ.ಸಿ., ಸಾರಿಗೆ ಸಂಸ್ಥೆಯಲ್ಲಿ ವರಮಾನವೂ ಕೂಡ ಇದೆ. ಇದು ಬಿ.ಎಂ.ಟಿ.ಸಿ., ಬಗ್ಗೆ ಬಹಳ ಮುಖ್ಯವಾದಂತಹ ಅಂಶ. ಇಲ್ಲಿ ಸಾರ್ವಜನಿಕರಿಗೆ ಎಷ್ಟು ತೊಂದರೆಯಾಗುತ್ತದೆ. ವಾಹನ ಸಂಚಾರಕ್ಕೆ ಮತ್ತು ಬೇರೆ ವಾಹನ ಸಂಚಾರಕ್ಕೆ ಎಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೊಂದರೆಯಾಗುತ್ತದೆ ಎಂದರೆ, ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. Traffic Signal Lights ಮುಗಿಯುತ್ತದೆಯಲ್ಲವೇ ಅಲ್ಲಿಂದ 100 ಅಡಿ ದೂರದಲ್ಲಿಯೇ ಒಂದು ಬಸ್ಸು ನಿಲ್ದಾಣವನ್ನು ಮಾಡಿದ್ದಾರೆ. ಬಸ್ಸು ನಿಲ್ದಾಣಕ್ಕೆ ಹೋಗುವಂತಹ ವಾಹನಗಳು Traffic Signal Lights ಮುಗಿದ ತಕ್ಷಣ ಅಲ್ಲಿ obstruct ಆಗುತ್ತದೆ. ಅದು bottle neck ಆಗಿ ಇರುತ್ತದೆ. ಬೆಂಗಳೂರಿನಲ್ಲಿ 25 ರಿಂದ 30 ಅಡಿಯಷ್ಟು ಮಾತ್ರ ರಸ್ತೆಗಳು ಇರುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಕಾಳಜಿಯನ್ನು ಕೊಡಬೇಕು.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾಗಿರುವಂತಹ ಪಿ.ಆರ್.ರಮೇಶ್‌ರವರು ಕೆಲವೊಂದು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದಾರೆ. ವಿಶೇಷವಾಗಿ ನಾನು ಸಾರಿಗೆ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಬಹಳಷ್ಟು ಕಡೆಗಳಲ್ಲಿ ನಾವು Bus Bay ಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ನಾವು Bus Bay ಗಳನ್ನು ಮಾಡುವುದಕ್ಕೆ ಅವಕಾಶ ಇದೆ. ಮೊದಲು ಬೆಂಗಳೂರಿನಲ್ಲಿ ಒಂದು Bus Bay ಗಳು ಇರಲಿಲ್ಲ. ಈಗ 14 ಕಡೆಗಳಲ್ಲಿ Bus Bay ಗಳನ್ನು ನಿರ್ಮಾಣ ಮಾಡಿದ್ದೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಚಿವರೇ, ತಾವು ಒಂದು Bus Bay ಗಳನ್ನು ಮಾಡಿಲ್ಲ. ಬಹಳ ಹಿಂದೆಯೇ 14 Bus Bay ಗಳನ್ನು ಮಾಡಿದ್ದಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸದಸ್ಯರೇ, ಸಮಾಧಾನದಿಂದ ನಾನು ಹೇಳುವುದನ್ನು ಕೇಳಿ. ನಂತರ ತಾವು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿ.

(ಮುಂದು)

**(23) 29/01/2021/1:50/ಎಸ್‌ಪಿಆರ್/ವಿಕೆ(ಎಂಡಿ)**

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು):–**

ನಾನು ಸಾರಿಗೆ ಸಚಿವನಾಗಿ ಅಧಿಕಾರ ವಹಿಸಿಕೊಂಡ ನಂತರ ನಗರದಲ್ಲಿ ಸುಮಾರು 14 ಕಡೆಗಳಲ್ಲಿ Bus Bay ಗಳನ್ನು ಮಾಡಲಾಗಿದೆ. ಅಲ್ಲಿ ಕೇವಲ ಬಿ.ಎಂ.ಟಿ.ಸಿ. ಬಸ್ಸುಗಳು ಮಾತ್ರವೇ ನೇರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಚರಿಸುತ್ತವೆ. ಇಂತಹ ವ್ಯವಸ್ಥೆಯನ್ನು ದೇಶದ ಗುಜರಾತ್ ಹಾಗೂ ಮತ್ತಿತರೆ ರಾಜ್ಯಗಳಲ್ಲಿ ಮಾಡಲಾಗಿದೆ. ಅಲ್ಲಿರುವ ವ್ಯವಸ್ಥೆಯಲ್ಲಿನ ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಬೆಂಗಳೂರು ನಗರದಲ್ಲಿ ನಿರ್ಮಿಸಿರುವ Bus Bay ಗಳು ತ್ವರಿತವಾಗಿ ಸಂಚರಿಸುವ ಹಾಗೂ ಹೆಚ್ಚು ಸಾರ್ವಜನಿಕರನ್ನು ಆಕರ್ಷಿಸುವ ಯೋಜನೆಯಾಗಿ ಪ್ರಾರಂಭಗೊಂಡಿದ್ದು, ಪ್ರಸ್ತುತ ಬಹಳ ಚೆನ್ನಾಗಿ ನಡೆಯುತ್ತಿದೆ. ಇನ್ನು ಮುಂದಿನ ದಿನಗಳಲ್ಲಿ ಎಲ್ಲೆಲ್ಲಿ ರಸ್ತೆಗಳ ಲಭ್ಯತೆ ಇದೆ ಅಲ್ಲೆಲ್ಲಾ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು. ರಸ್ತೆ ಅಗಲೀಕರಣದ ನಂತರ Bus Bayಗಳನ್ನು ನಿರ್ಮಿಸಿದಾಗ ಸಾರ್ವಜನಿಕರಿಗೆ ತೊಂದರೆಯಾಗಬಾರದು. ಏಕೆಂದರೆ ಒಂದು Bus Bay ನ್ನು ಮಾಡಿದಾಗ, ಅಲ್ಲಿ ಸಾರ್ವಜನಿಕರ ಸಂಚಾರಕ್ಕಾಗಿ ಇನ್ನೂ ಎರಡು ಲೇನ್ ರಸ್ತೆಗಳಿರಬೇಕು. ಎಲ್ಲೆಲ್ಲಿ ಮೂರು ಲೇನ್ ರಸ್ತೆಗಳ ವ್ಯವಸ್ಥೆ ಲಭ್ಯತೆ ಇತ್ತೋ ಅಲ್ಲೆಲ್ಲಾ Bus Bay ಗಳನ್ನು ಮಾಡಿ, ಬಸ್‌ಗಳ ಸಂಚಾರವನ್ನು ಪ್ರಾರಂಭಿಸಿದ್ದೇವೆ. ಇದರ ಜೊತೆಗೆ ಇನ್ನೂ ಸಾಕಷ್ಟು Bus Bay ಮಾರ್ಗಗಳು ಪ್ರಾರಂಭವಾಗಬೇಕಾಗಿದೆ. ಅನೇಕ ಕಡೆಗಳಲ್ಲಿ ಸಂಚಾರಕ್ಕಾಗಿ ರಸ್ತೆಗಳು ಇಲ್ಲದಿರುವ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಸದಸ್ಯರು ಪ್ರಸ್ತಾಪಿಸಿದ್ದಾರೆ. ಆದರೆ ಇವತ್ತಿನ ದಿವಸ ಅನೇಕ ಕಡೆಗಳಲ್ಲಿ ಅಂದರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲಿಕ್ಕೆ ಸಾಧ್ಯವಾಗಿಲ್ಲ. ಕಳೆದ ಬಾರಿಯ ಆಯವ್ಯಯದಲ್ಲಿ ಈ ಅಂಶದ ಬಗ್ಗೆ ಸದಸ್ಯರು ಗಮನಿಸಿದ್ದಾರೆಂದು ನಾನು ಭಾವಿಸುತ್ತೇನೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಂಸ್ಥೆಗೆ ಹೆಚ್ಚುವರಿಯಾಗಿ 4,000 ಬಸ್ಸುಗಳನ್ನು ಖರೀದಿಸಬೇಕೆಂದು ಹಾಗೂ ಇನ್ನುಳಿದ ಮಾರ್ಗಗಳಲ್ಲಿ ಸಾಕಷ್ಟು ಸಂಚಾರಗಳನ್ನು ಬೆಳೆಸಬೇಕೆನ್ನುವ ವಿಚಾರವನ್ನು ನಾವಿಟ್ಟುಕೊಂಡಿದ್ದೇವೆ. ಈ ಬಗ್ಗೆ ಪ್ರಸ್ತಾವವನ್ನೂ ಸಹ ಸಲ್ಲಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಪ್ಪಿಕೊಂಡು, ಆರ್ಥಿಕ ಇಲಾಖೆಯಿಂದ ಅನುದಾನ ಕೊಡಿಸುವುದಾಗಿ ಹಾಗೂ ಸಾರಿಗೆ ಇಲಾಖೆಯ ನಾಲ್ಕೂ ನಿಗಮಗಳಿಗೆ 4,000 ಬಸ್ಸುಗಳನ್ನು ಖರೀದಿಸಬೇಕೆಂದು ತಿಳಿಸಿದ್ದಾರೆ. ಆದರೆ ಕರೋನಾ ರೋಗವು ವ್ಯಾಪಕವಾಗಿ ಹಬ್ಬಿದ್ದರಿಂದಾಗಿ ಸಾಕಷ್ಟು ಹಣಕಾಸಿನ ತೊಂದರೆಯಾಗಿರುವುದರಿಂದ ಪ್ರಸ್ತುತ ಯೋಜನೆಯು ಸ್ಥಗಿತಗೊಂಡಿರುತ್ತದೆ. ಹೀಗಾಗಿ ಪ್ರಸಕ್ತ ಹಣಕಾಸಿನ ವರ್ಷದಲ್ಲಿ ಪುನಃ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಅದಕ್ಕೆ ಒಪ್ಪಿಗೆ ದೊರೆತಲ್ಲಿ ಹೆಚ್ಚಿನ ಬಸ್ಸುಗಳನ್ನು ಖರೀದಿಸಲಾಗುವುದು.

ಮುಂದುವರೆದು, ನಗರದ ಅನೇಕ ರಸ್ತೆಗಳಲ್ಲಿ ಸಂಸ್ಥೆಯ ದೊಡ್ಡ ಗಾತ್ರದ ಬಸ್ಸುಗಳು ಸಂಚರಿಸುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಚಿಕ್ಕ ಗಾತ್ರದ ಬಸ್ಸುಗಳನ್ನು ಖರೀದಿಸಬೇಕೆಂಬ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಭಿಪ್ರಾಯವನ್ನು ಸದಸ್ಯರು ಇಟ್ಟುಕೊಂಡು ಪ್ರಸ್ತಾಪಿಸಿದ್ದಾರೆಂದು ನಾನು ಭಾವಿಸುತ್ತೇನೆ. ಮುಂದಿನ ದಿನಗಳಲ್ಲಿ ಸಣ್ಣ ಗಾತ್ರದ ಬಸ್ಸುಗಳನ್ನು ಖರೀದಿಸಿ, ಎಲ್ಲೆಲ್ಲಿ ರಸ್ತೆಗಳ ಅಗಲ ಕಡಿಮೆ ಇದೆಯೋ ಅಲ್ಲೆಲ್ಲಾ ಈ ರೀತಿಯ ಸಣ್ಣ ಬಸ್ಸುಗಳನ್ನು ಓಡಿಸುವ ಚಿಂತನೆಯನ್ನು ನಾವು ಮಾಡುತ್ತೇವೆ.

ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಮಾಲಿನ್ಯ ನಿಯಂತ್ರಣ ಮಾಡುವ ಉದ್ದೇಶದಿಂದ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರವೂ ಸಹ ಹಲವಾರು ಯೋಜನೆಗಳನ್ನು ರೂಪಿಸಿದೆ. ಇದಕ್ಕೆ ರಾಜ್ಯ ಸರ್ಕಾರದಿಂದ ಸಹಮತವನ್ನು ನೀಡುವುದರ ಮುಖಾಂತರ ಹೊಸ ಮಾದರಿಯ Electrical Busಗಳನ್ನು ಖರೀದಿಸಲಾಗುತ್ತಿದೆ. ಇನ್ನುಳಿದ ಮಾರ್ಗಗಳಲ್ಲಿಯೂ ಸಹ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು. ಹೊಸ Electrical Busಗಳನ್ನು ಖರೀದಿಸಿದ ನಂತರ ಹಾಲಿ ಇರುವ ಬಸ್ಸುಗಳನ್ನು ಬೇರೆ ಕಡೆಗೆ ಬಳಸಲಾಗುವುದು. ಇದರಿಂದ ಮುಂದಿನ ದಿನಗಳಲ್ಲಿ ಎಲ್ಲಾ ಕಡೆಗಳಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವಾಗುವ ತೀರ್ಮಾನಗಳನ್ನು ನಾವು ಮಾಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ Bus Priority Lines and Intelligence Transport System ಎಂಬ ವ್ಯವಸ್ಥೆಗಳನ್ನು ಮಾಡಲಾಗಿತ್ತು; ಹಾಗೂ ಅದಕ್ಕೆ ಅವಶ್ಯಕವಾದ ಜಿ.ಪಿ.ಎಸ್. ತಂತ್ರಾಂಶವನ್ನು ಅಳವಡಿಸುವಂತಹ ಯೋಜನೆಗಳ ಕಲ್ಪನೆಯನ್ನು ಮಾಡಲಾಗಿತ್ತು. ಮುಂದುವರೆದು, ಇದಕ್ಕೆ ಹಾಲಿ ಇರುವ surveillance ಅಂದರೆ, ಈಗಾಗಲೇ ಇರುವ ಸುಮಾರು 800-900 ಬಸ್ ನಿಲ್ದಾಣಗಳಿಗೆ ಮತ್ತು Bus Bayಗಳಿಗೆ ಸಿ.ಸಿ.ಟಿ.ವಿ.ಗಳನ್ನು ಅಳವಡಿಸುವುದಕ್ಕಾಗಿ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರ ಸ್ವೀಕೃತಗೊಂಡಿಲ್ಲ. ಸಂಚರಿಸುವ ವಾಹನಗಳ ಚಾಲಕರುಗಳಿಗೆ ಸರಿಯಾದ ತರಬೇತಿಯನ್ನು ನೀಡಬೇಕು. ಚಾಲಕರು ನಿಲ್ದಾಣಗಳಲ್ಲಿ ಬಸ್ಸುಗಳನ್ನು ನಿಲ್ಲಿಸುವುದಿಲ್ಲ, ಅದರ ಬದಲಾಗಿ ರಸ್ತೆ ಮಧ್ಯದಲ್ಲಿ ನಿಲ್ಲಿಸುತ್ತಾರೆ. ಇದರಿಂದ ಬೇರೆ ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಗುತ್ತದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಚಾಲಕರಿಗೆ ಕಾರ್ಯಾಗಾರಗಳನ್ನು ಮಾಡುವುದು ಬಹಳ ಮುಖ್ಯವಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಉತ್ತರಿಸಬೇಕು.

ಮುಂದುವರೆದು, ಸಂಸ್ಥೆಯ ವರಮಾನವನ್ನು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಬಿ.ಎಂ.ಟಿ.ಸಿ. ಸಂಸ್ಥೆಗೆ ಹಲವಾರು ರೀತಿಯಿಂದ ಒಳ್ಳೆಯ ವರಮಾನವಿದೆ. ನನ್ನ ಅಭಿಪ್ರಾಯದಲ್ಲಿ ಬಿ.ಎಂ.ಟಿ.ಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಯೊಂದರಿಂದ ಮಾತ್ರವೇ ಸಾವಿರ ಕೋಟಿ ರೂಪಾಯಿಗಳಷ್ಟು ವರಮಾನವನ್ನು ಹೆಚ್ಚಿಸಬಹುದು. ಆದರೆ ಇದರ ಬಗ್ಗೆ ಸರ್ಕಾರವು ಹೆಚ್ಚು ಬೆಳಕನ್ನು ಚೆಲ್ಲುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರವು ಹೆಚ್ಚು ಯೋಜನೆಗಳನ್ನು ರೂಪಿಸಬೇಕು. ಸಂಸ್ಥೆಯ ಬಸ್ಸುಗಳು 10,200 ಕಿಲೋಮೀಟರ್‌ಗಳಷ್ಟು ಸಂಚರಿಸುತ್ತವೆ. ಇದಕ್ಕಾಗಿ ಸರಿಯಾದ ನಕ್ಷೆಯನ್ನು ತಯಾರಿಸಬೇಕು. ಸಂಸ್ಥೆಗೆ ಬಿ.ಬಿ.ಎಂ.ಪಿ. ಮತ್ತು ಬಿ.ಡಿ.ಎ. ವತಿಯಿಂದ ಸರಿಯಾದ ಸಮನ್ವಯ ದೊರೆಯುತ್ತಿಲ್ಲ. ಯಾವ ರೀತಿಯಾಗಿ ಸಾರ್ವಜನಿಕ ಸಂಚಾರ ವ್ಯವಸ್ಥೆಯನ್ನು ಹೆಚ್ಚಿಸಬೇಕು ಎನ್ನುವ ಯೋಜನೆಗಳನ್ನು ಸರ್ಕಾರವು ಇನ್ನೂ ಸಹ ರೂಪಿಸಿಲ್ಲ. ಇದಕ್ಕೆ ಕಾರಣವೇನೆಂದರೆ, ಇವತ್ತಿನ ದಿವಸ 35.08 ಲಕ್ಷ ಜನರು ಪ್ರತಿದಿವಸ ಸಾರ್ವಜನಿಕ ಬಸ್ಸುಗಳಲ್ಲಿ ಸಂಚರಿಸುತ್ತಿದ್ದಾರೆ. ಆದರೆ ಐದು ವರ್ಷಗಳ ಹಿಂದೆ ಈ ಅಂಕಿ ಅಂಶವು 50 ಲಕ್ಷದಷ್ಟಿತ್ತು. It is reduced. ಪ್ರತಿವರ್ಷವೂ ಸರ್ಕಾರಿ ಬಸ್ಸುಗಳಲ್ಲಿ ಸಂಚರಿಸುವವರ ಸಂಖ್ಯೆಯು ಕ್ಷೀಣಿಸುತ್ತಿದೆ. ಇದರ ಬಗ್ಗೆ ಸರ್ಕಾರವು ಯೋಚಿಸುತ್ತಿಲ್ಲ. ಸರ್ಕಾರವು ಇಂತಹ ವಿಷಯಗಳ ಬಗ್ಗೆ ಸಂಪೂರ್ಣವಾಗಿ ಪರಾಮರ್ಶಿಸಿ, ಸಾರಿಗೆ ವ್ಯವಸ್ಥೆಯನ್ನು ಬಲಗೊಳಿಸುವುದರ ಮೂಲಕ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಸರಿಯಾದ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು. ಈ ವಿಚಾರದಲ್ಲಿ ಸರ್ಕಾರವು ಗಂಭೀರ ಹಾಗೂ ಸಮಗ್ರವಾದ ಯೋಜನೆಗಳನ್ನು ರೂಪಿಸಿ, ಸಾರಿಗೆ ವ್ಯವಸ್ಥೆಯನ್ನು ಯಶಸ್ವಿಗೊಳಿಸಬೇಕು. ಇದರಿಂದ ಸಂಸ್ಥೆಯ ವರಮಾನವೂ ವೃದ್ಧಿಯಾಗುತ್ತದೆ. ಸರ್ಕಾರವು ಈ ನಿಟ್ಟಿನಲ್ಲಿ ಯೋಚನೆಯನ್ನು ಮಾಡಬೇಕು.

**ಉಪ ಸಭಾಪತಿಯವರು:–** ಸಚಿವರು ನಿಮ್ಮ ಸಲಹೆಯನ್ನು ಪರಿಗಣಿಸುತ್ತಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸದಸ್ಯರು ನಮ್ಮ ಸಾರಿಗೆ ಇಲಾಖೆಯ ಬಗ್ಗೆ ಬಹಳ ಕಾಳಜಿ ಇಟ್ಟುಕೊಂಡು ಕಳಕಳಿಯಿಂದ ನೀಡಿರುವ ಅನೇಕ ಸಲಹೆಗಳನ್ನು ನಾನು ಸ್ವೀಕರಿಸುತ್ತೇನೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಈ ಹಿಂದೆ ಬೆಂಗಳೂರು ನಗರದಲ್ಲಿ ದಿನಂಪ್ರತಿ 50 ಲಕ್ಷಕ್ಕಿಂತಲೂ ಹೆಚ್ಚು ಪ್ರಯಾಣಿಕರು ಸಾರ್ವಜನಿಕ ಸಂಚಾರಿ ವ್ಯವಸ್ಥೆಯಾದ ಬಿ.ಎಂ.ಟಿ.ಸಿ. ಬಸ್ಸುಗಳಲ್ಲಿ ಸಂಚರಿಸುತ್ತಿದ್ದರು. ಆದರೆ ಈಗ ಅದು 35.08 ಲಕ್ಷಕ್ಕೆ ಇಳಿಕೆಯಾಗಿದೆ. ಅಂದರೆ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಸುಮಾರು 15 ಲಕ್ಷ ಸಂಚರಿಸುವವರ ಕೊರತೆಯಾಗಿದೆ ಎನ್ನುವ ಭಾವನೆಯನ್ನು ಸದಸ್ಯರು ವ್ಯಕ್ತಪಡಿಸಿದ್ದಾರೆ. ಈ ಅಂಶವು ನನ್ನ ಗಮನದಲ್ಲಿಯೂ ಸಹ ಇದೆ. ಈ ಹಿಂದಿನ ಸಾರಿಗೆ ವ್ಯವಸ್ಥೆಯನ್ನು ನೋಡಿದಾಗ ಈಗ ಮೆಟ್ರೋ ರೈಲುಗಳ ವ್ಯವಸ್ಥೆ ಇದೆ. ಇದರಲ್ಲಿ ದಿನಂಪ್ರತಿ ಸುಮಾರು 5 ರಿಂದ 5.5 ಲಕ್ಷ ಜನರು ಸಂಚರಿಸುತ್ತಾರೆ. ಇದರ ಜೊತೆಗೆ Ola, Uber, Bike Taxi ಗಳಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನಿತರೆ ಸಾಕಷ್ಟು ಖಾಸಗಿ ಸಂಚಾರಿ ವ್ಯವಸ್ಥೆಗಳು ಸೃಷ್ಟಿಯಾಗಿವೆ. ಇದರಲ್ಲಿಯೂ ಸಹ ಜನರು ಸಂಚರಿಸುತ್ತಾರೆ. ಇವುಗಳಿಂದಾಗಿ ಬಿ.ಎಂ.ಟಿ.ಸಿ.ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆಯು ಕಡಿಮೆಯಾಗಿದೆ. ಹಾಲಿ ಇರುವ ಸಂಸ್ಥೆಯ ವರಮಾನವನ್ನು ವೃದ್ಧಿ ಮಾಡುವ ವಿಚಾರದಲ್ಲಿ ಮಾನ್ಯ ಸದಸ್ಯರು ತಮ್ಮ ಆಲೋಚನೆ ಹಾಗೂ ಸಲಹೆಗಳನ್ನು ನೀಡಿದ್ದಲ್ಲಿ ಇಲಾಖೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಅವುಗಳನ್ನು ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳಲಾಗುವುದು. ನಾನೇನೂ ಬೃಹಸ್ಪತಿ ಅಲ್ಲ. ನಾನೂ ಸಹ ಮಾನ್ಯ ಸದಸ್ಯರು ಹಾಗೂ ಬೇರೆಯವರಿಂದ ತಿಳಿದುಕೊಂಡು, ಕಲಿತುಕೊಂಡು ಇಲಾಖೆಗೆ ಒಳ್ಳೆಯದು ಮಾಡಬೇಕೆಂದುಕೊಂಡಿದ್ದೇನೆ. ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಸ್ವೀಕರಿಸಿ, ಇಲಾಖೆಯನ್ನು ಬಲಪಡಿಸುವ ಕೆಲಸಗಳನ್ನು ನಾನು ಮಾಡುತ್ತೇನೆಂದು ಈ ಮೂಲಕ ತಿಳಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ ನೀವು ಕೇಳಿರುವ ಪ್ರಶ್ನೆಗೆ ಉತ್ತರಿಸಲು ಸರ್ಕಾರವು ಕಾಲಾವಕಾಶವನ್ನು ಕೋರಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಸರ್ಕಾರವು ನಂತರದಲ್ಲಿ ಉತ್ತರವನ್ನು ನೀಡಲಿ; ಆದರೆ, ಉತ್ತರವನ್ನು ನೀಡಲು ಕಾಲಾವಕಾಶವನ್ನು ಕೇಳುವಷ್ಟು ದೊಡ್ಡ ಪ್ರಶ್ನೆ ನನ್ನದಲ್ಲ. ನಾನು ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಪ್ರತಿ ಗ್ರಾಮ ಪಂಚಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿರುವ ವಾರ್ಷಿಕ ಅನುದಾನದ ಬಗ್ಗೆ ಮಾತ್ರವೇ ಪ್ರಶ್ನೆಯನ್ನು ಕೇಳಿದ್ದೇನೆ.

**ಉಪ ಸಭಾಪತಿಯವರು:-** ಸರ್ಕಾರವು ಕಾಲಾವಕಾಶವನ್ನು ಕೇಳಿದೆ ಎಂದರೆ ಮುಂದಿನ ದಿನಗಳಲ್ಲಿ ಉತ್ತರವನ್ನು ನೀಡುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಸರ್ಕಾರವು 15 ದಿನಗಳ ಕಾಲಾವಕಾಶವನ್ನು ಕೇಳಿದೆ. ಆದರೆ, ಪ್ರಸ್ತುತ ಅಧಿವೇಶನವು ಪೂರ್ಣಗೊಳ್ಳುವುದರೊಳಗೆ ಸರ್ಕಾರವು ಉತ್ತರವನ್ನು ನೀಡಿದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯನ್ನು ತಾವು ಗಮನಿಸಬೇಕು. ಮಾನ್ಯ ಸದಸ್ಯರು ಕಳೆದ ಮೂರು ವರ್ಷಗಳ ಅನುದಾನದ ಸಮಗ್ರ ಮಾಹಿತಿಯನ್ನು ಕೇಳಿದ್ದಾರೆ. ಸಾಧ್ಯವಾದರೆ, ಪ್ರಸ್ತುತ ಅಧಿವೇಶನ ಸಮಾಪನೆಗೊಳ್ಳುವುದರೊಳಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ನೀಡಲಾಗುವುದು. ಇದರಲ್ಲಿ ಯಾವುದೇ ರೀತಿಯ ಮುಚ್ಚುಮರೆಯ ಪ್ರಶ್ನೆ ಇಲ್ಲ. ಏಕೆಂದರೆ ನಾವು ಎಷ್ಟೆಲ್ಲಾ ಕೆಲಸಗಳನ್ನು ಮಾಡಿದ್ದೇವೆ. ಅವುಗಳ ಬಗ್ಗೆ ಉತ್ತರವನ್ನು ನೀಡುವುದಕ್ಕೂ ಸಹ ಯಾವುದೇ ರೀತಿಯಾದ ತೊಂದರೆ ಇಲ್ಲ. ಇದರ ಬಗ್ಗೆ ನಾವು ಇಡೀ ರಾಜ್ಯದ ಹಾಗೂ 6,011 ಗ್ರಾಮ ಪಂಚಾಯಿತಿಗಳ ಅಂಕಿ-ಅಂಶಗಳನ್ನು ಸಂಗ್ರಹಿಸಬೇಕು. ಈ ವಿಚಾರದಲ್ಲಿ ನಾವು ಪ್ರಯತ್ನ ಮಾಡುತ್ತೇವೆ; ಇಲ್ಲವೆಂದಾದರೆ ಉತ್ತರವನ್ನು ಸದಸ್ಯರಿಗೆ ಕಳುಹಿಸಿಕೊಡಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:51**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಸರ್ಕಾರವು ವಿವರವಾದ ಉತ್ತರವನ್ನು ನೀಡಿದೆ. ವಿಶೇಷ ಶಾಲೆಗಳಲ್ಲಿರುವ ಶಿಕ್ಷಕರ ಅಭಾವದ ಕುರಿತಾಗಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೂ ಸಹ ಸರ್ಕಾರವು ಉತ್ತರಿಸಿದೆ. ಬೆಳಗಾವಿ ಜಿಲ್ಲೆ ಮತ್ತು ಬೆಳಗಾವಿ ನಗರ ಪ್ರದೇಶದಲ್ಲಿರುವ ಮಾಹೇಶ್ವರಿ ಅಂಧ ಮಕ್ಕಳ ಶಾಲೆಯನ್ನು ಸರ್ಕಾರೇತರ ಸಂಸ್ಥೆಯು ನಡೆಸುತ್ತಿದೆ. ಅಲ್ಲಿನ ಶಿಕ್ಷಕರಿಗೆ ಪ್ರತಿ ತಿಂಗಳು ಸಂಬಳ ಪಾವತಿಯಾಗುವುದಿಲ್ಲ. ಕಳೆದ ನಾಲ್ಕು ತಿಂಗಳಿಂದ ಅಲ್ಲಿನ ಶಿಕ್ಷಕರಿಗೆ ವೇತನ ಪಾವತಿಸಿಲ್ಲ. ಇವರುಗಳಿಗೆ 6ನೇ ವೇತನ ಆಯೋಗದ ಬಾಕಿ 37,23,920/- ರೂಪಾಯಿಗಳು ಇನ್ನೂ ಸಹ ಪಾವತಿಯಾಗಿರುವುದಿಲ್ಲ. ಇದರ ಜೊತೆಗೆ ಪ್ರಸ್ತುತ ಅಲ್ಲಿ ಮುಖ್ಯೋಪಾಧ್ಯಾಯರು, ಪ್ರೌಢ ಶಾಲೆಯ ಎರಡು ಶಿಕ್ಷಕರ, ಪ್ರಾಥಮಿಕ ಶಾಲೆಯ ಶಿಕ್ಷಕರ, ದೈಹಿಕ ಶಿಕ್ಷಣ ಶಿಕ್ಷಕರ ಇಂತಹ ಒಟ್ಟಾರೆ ಏಳು ಹುದ್ದೆಗಳು ಖಾಲಿ ಇವೆ.

**(ಮುಂದು)**

(24)/29-1-2021/2.00/ಎಲ್‌ಎಂ/ಬಿಎಸ್‌ವಿ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**(ಮುಂದು):-

ಬಹಳ ವರ್ಷಗಳಿಂದ ಬೆಳಗಾವಿಯಲ್ಲಿ ಇರುವಂತಹ ಮಹೇಶ್ವರಿ ಎನ್ನುವ ಎನ್‌ಜಿಓ ನಡೆಸುತ್ತಿರುವಂತಹ ಅಂಧಮಕ್ಕಳ ಶಾಲೆ ಇದು. ಇಲ್ಲಿ ಶಿಕ್ಷಕರ ಕೊರತೆ ಇದೆ. ಇದು ರಾಜ್ಯಕ್ಕೆ ಮಾದರಿಯಾದ ಶಾಲೆ. ಮಾನ್ಯ ಮಂತ್ರಿಗಳು ಆ ಜಿಲ್ಲೆಯಿಂದಲೆ ಬಂದವರು ಆ ಶಾಲೆ ಬಗ್ಗೆ ಅವರಿಗೆ ತಿಳಿದಿದೆ, ಅಲ್ಲಿಯ ಸಮಸ್ಯೆಗಳ ಬಗ್ಗೆ ಅವರಿಗೂ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಮಂತ್ರಿಗಳು ಆ ಶಾಲೆಗೆ ಭೇಟಿ ನೀಡಿದ್ದಾರೆ. ಆ ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗದವರು ಮಾನ್ಯ ಮಂತ್ರಿಗಳನ್ನು ಭೇಟಿಯಾಗಿದ್ದಾರೆ. ಅಲ್ಲಿ ಶಿಕ್ಷಕರ ಕೊರತೆ ಇದೆ, ಇದು ಅಲ್ಲದೆ ಇರುವಂತಹ ಶಿಕ್ಷಕರಿಗೆ 6 ತಿಂಗಳಿಗೊಮ್ಮೆ ಸಂಬಳವಾಗುತ್ತದೆ. ಇಂತಹ ಅಂಧ ಮಕ್ಕಳ ಶಾಲೆಯಲ್ಲಿ ಶಿಕ್ಷಕರ ಕೊರತೆಯಾದರೆ ಯಾವ ರೀತಿ ಆ ಶಾಲೆಯನ್ನು ನಡೆಸಲು ಸಾಧ್ಯ? ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ಇರುವ ಶಿಕ್ಷಕರ ಕೊರತೆಯನ್ನು ಮತ್ತು ಶಿಕ್ಷಕರ ಸಂಬಳದ ಸಮಸ್ಯೆಯನ್ನು ಬಗೆಹರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದರ ಬಗ್ಗೆ ವಿವರಣೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ:**- ಮಾನ್ಯ ಸಭಾಪತಿಗಳೆ, ಮಾನ್ಯ ಮಹಾಂತೇಶ್ ಅಣ್ಣನವರು ಹೇಳಿರುವಂತಹ ವಿಷಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಬೆಳಗಾವಿ ಜಿಲ್ಲೆಯಿಂದ ಬಂದಿದ್ದೇನೆ. ನನ್ನ ಮಗನು ಸ್ಪೆಶಲ್ ಚೈಲ್ಡ್ ಆಗಿರುವುದರಿಂದ ನಾವು ಇಂತಹ ಖಾಸಗಿ ಶಾಲೆ ಅನ್ನು ನಡೆಸುತ್ತಿದ್ದೇವೆ. ಮಹೇಶ್ವರಿ ಅಂಧ ಮಕ್ಕಳ ಶಾಲೆ ಕರ್ನಾಟಕ ರಾಜ್ಯಕ್ಕೆ ಪ್ರಸಿದ್ಧಿಪಡೆದಿರುವ ಶಾಲೆ ಎನ್ನುವುದು ಬಹಳ ವರ್ಷಗಳಿಂದ ನನಗೆ ಗೊತ್ತಿರುವಂತಹ ವಿಚಾರ. ಅಲ್ಲಿ ಶಿಕ್ಷಕರ ಕೊರತೆ ಇರುವುದು ನಿಜ. ಕೆ.ಪಿ.ಎಸ್.ಸಿ. ಮುಖಾಂತರ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲು ಹಣಕಾಸು ಇಲಾಖೆಯವರಿಗೆ ಪ್ರಸ್ತಾವನೆ ಅನ್ನು ಕಳುಹಿಸಿದ್ದೇವೆ. ಅಲ್ಲಿಂದ 15 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಆದೇಶ ಬಂದಿದೆ. ಇನ್ನು ಉಳಿದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮಂಜೂರಾತಿ ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ನಾರ್ಮಲ್ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರಿಗೂ ಮತ್ತು ವಿಶೇಷ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರಿಗೂ ಬಹಳ ವ್ಯತ್ಯಾಸವಿದೆ. ವಿಶೇಷ ಮಕ್ಕಳಿಗೆ ಪಾಠ ಮಾಡುವಂತಹ ಶಿಕ್ಷಕರು ಆ ಮಕ್ಕಳನ್ನು ಬೆಳೆಸಲು ತುಂಬಾ ಕಷ್ಟಪಡುತ್ತಾರೆ. ಇಂತಹ ಶಿಕ್ಷಕರಿಗೆ ನ್ಯಾಯ ಒದಗಿಸಿ ಕೊಡುವುದು ಸರ್ಕಾರದ ಧ್ಯೇಯವಾಗಿದೆ. ಶಿಕ್ಷಕರ ಸಂಬಳದ ಸಮಸ್ಯೆ ಬಗ್ಗೆ ಹೇಳಿದ್ದಾರೆ. ಈಗಾಗಲೇ ಆ ಸಮಸ್ಯೆಯನ್ನು ಬಗೆಹರಿಸಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಅದು ಹಂತ-ಹಂತವಾಗಿ ಬಿಡುಗಡೆಯಾಗುತ್ತದೆ. ಇದು ಎನ್.ಜಿ.ಓ. ನಡೆಸುವ ಸಂಸ್ಥೆಯಾಗಿರುವುದರಿಂದ ಅಲ್ಲಿ ಗೌರವಧನದ ಆಧಾರದ ಮೇಲೆ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲು ಆದೇಶವಾಗಿದೆ. ಆ ರೀತಿ ಅವರು ನೇಮಕ ಮಾಡಿಕೊಳ್ಳಬಹುದು, ಅವರಿಗೆ ಏನು ಸಂಬಳ ಕೊಡಬೇಕು ಅದನ್ನು ನಾವು ಕೊಡುತ್ತೇವೆ. ನನ್ನ ಮನೆಯಲ್ಲಿಯೇ ಆ ರೀತಿ ಮಗುವಿರುವುದರಿಂದ ನನಗೆ ಅನುಭವವಿದೆ. ಅದಕ್ಕಾಗಿ ಇಂತಹ ಶಾಲೆಗಳಿಗೆ ಬಹಳಷ್ಟು ಮಹತ್ವವನ್ನು ಕೊಟ್ಟು ಯಾವುದೇ ರೀತಿಯ ಕೊರತೆಯಾಗಬಾರದು ಎಂದು ಪ್ರಯತ್ನ ಮಾಡುತ್ತಿದ್ದೇವೆ. ಕೋವಿಡ್ ಇದ್ದಿದ್ದರಿಂದ ಸಂಬಳ ತಡವಾಗಿದೆ. ಇನ್ನು ಮುಂದೆ ಯಾವುದೇ ಸಮಸ್ಯೆ ಬರದ ಹಾಗೆ ನಿಭಾಯಿಸುವಂತಹ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಅರುಣ ಶಹಾಪೂರ:**- ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು, ಸರ್ಕಾರಿ ಶಾಲಾ ಶಿಕ್ಷಕರಿಗೆ ಒಂದು ಅನುದಾನ ಸಂಹಿತೆ. ಇವರಿಗೆ ಒಂದು ರೀತಿ. ಅಂಧ ಮಕ್ಕಳಿಗೆ ಶಿಕ್ಷಣ ಕೊಡುವಂತಹ ಶಿಕ್ಷಕರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಗೌರವಧನ ಎಂದು ಕೊಡುತ್ತಿದ್ದಾರೆ. ಸರ್ಕಾರಿ ಸಂಸ್ಥೆಗಳಲ್ಲಿ ಕೊಡುವಂತೆ ಅನುದಾನಸಂಹಿತೆಯನ್ನು ಇವರಿಗೆ ತರಲು ಏನು ಸಮಸ್ಯೆ. ಇಂತವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಬೇಕು ಎನ್ನುವ ವಿಚಾರದಲ್ಲಿ ಇವರ ಶೋಷಣೆಯಾಗುತ್ತಿದೆ ಎನ್ನುವ

ಭಾವನೆ ನಿರ್ಮಾಣವಾಗಿದೆ. ಅದರ ಬದಲಿಗೆ ಸರ್ಕಾರಿ ಅನುದಾನಿತ ವ್ಯವಸ್ಥೆಯಡಿ ಇವರನ್ನು ತರುವುದಕ್ಕೆ ಏನಾದರೂ ಕ್ರಮ ವಹಿಸಲಾಗುವುದೇ?

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ. ಜೊಲ್ಲೆ:-** ಮಾನ್ಯ ಸಭಾಪತಿಗಳೆ, ಅನುದಾನದ ಅಡಿಯಲ್ಲಿ ಇಂತಹ 34 ಶಾಲೆಗಳು ಇವೆ. ಸರ್ಕಾರದ ವತಿಯಿಂದ 8 ಶಾಲೆಗಳನ್ನು ನಡೆಸಲಾಗುತ್ತಿದೆ. 2019-20ನೇ ಸಾಲಿನಲ್ಲಿ ಅಂಗವಿಕಲ ಮಕ್ಕಳ ಕೇಂದ್ರಿಕೃತ ವಿಶೇಷ ಶೈಕ್ಷಣಿಕ ಯೋಜನೆ ಅಡಿಯಲ್ಲಿ ದಾಖಲಾದ ಮಕ್ಕಳ ಶಾಲೆಗಳು 138. ಈ ರೀತಿ ಮೊದಲಿನಿಂದಲೂ ನಡೆದುಕೊಂಡು ಬರುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಈಗಾಗಲೇ ಎರಡು ಸಭೆಗಳನ್ನು ಮಾಡಲಾಗಿದೆ. ಸ್ವಲ್ಪ ಸಮಯ ಕೊಟ್ಟರೆ ಈ ಶಾಲೆಯನ್ನು ಅನುದಾನದ ಅಡಿಯಲ್ಲಿ ತರುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಬೇರೆ ಶಾಲೆಗಳಿಗೆ ಅನುದಾನವನ್ನು ಕೊಡಲಾಗುತ್ತದೆ. ಪೂರ್ಣ ವೇತನವನ್ನು ಕೊಡಲಾಗುತ್ತದೆ. ವಿಕಲಚೇತನ ಶಾಲೆಗಳ ಶಿಕ್ಷಕರಿಗೆ ಪೂರ್ಣ ವೇತನ ಕೊಡಲು ಏನು ಕಷ್ಟ? ಗೌರವಧನದ ಆಧಾರದ ಮೇಲೆ ಕೆಲಸ ಮಾಡಿಸಿಕೊಳ್ಳುವುದು ಸರಿಯೇ? ಕೂಡಲೇ ಸರ್ಕಾರದಿಂದ ಅಲ್ಲಿಗೆ ಶಿಕ್ಷಕರನ್ನು ನೇಮಕಾತಿ ಮಾಡಬೇಕು. ಇಂತಹ ಶಾಲೆಗಳ ಶಿಕ್ಷಕರಿಗೆ ವೇತನ ಕೊಡಲು ಯಾವ ಆರ್ಥಿಕ ಮಿತವ್ಯಯದ ಸಮಸ್ಯೆಯು ಅಡ್ಡಬರಬಾರದು. ವಿಕಲಚೇತನ ಮಕ್ಕಳನ್ನು ನೋಡಿಕೊಳ್ಳುವುದು ಎಷ್ಟು ಕಷ್ಟ ಎನ್ನುವುದು ತಮಗೂ ಗೊತ್ತಿದೆ. ಎಲ್ಲಾ ಶಾಲೆಗಳ ಶಿಕ್ಷಕರಿಗೆ ವೇತನ ಕೊಟ್ಟು ಈ ಶಾಲೆಗಳ ಶಿಕ್ಷಕರಿಗೆ ವೇತನ ಕೊಡುವುದಿಲ್ಲ ಎನ್ನುವುದು ಸರಿಯಲ್ಲ. ನಿರ್ದಿಷ್ಟ ಕಾಲಾವಧಿಯಲ್ಲಿ ಕೆಲಸ ಮಾಡಿಕೊಡಬೇಕು.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ. ಜೊಲ್ಲೆ:-:-** ಮಾನ್ಯ ಸಭಾಪತಿಗಳೆ, ಸ್ವಲ್ಪ ಸಮಯದಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಕೋವಿಡ್ ಸಮಯದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ನಮಗೆ ಸಾಧ್ಯವಾಗಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ, ಸದ್ಯದಲ್ಲಿಯೇ ಇವರಿಗೆ ನ್ಯಾಯ ಒದಗಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಗಳೆ, ಕೋವಿಡ್ ಸಮಯದಲ್ಲಿಯೇ ಇಂತಹ ಮಕ್ಕಳಿಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಇಂತಹ ವಿಕಲಚೇತನ ಮಕ್ಕಳ ರಕ್ಷಣೆಗೆ ಸರ್ಕಾರ ಸ್ಪಂದಿಸದೆ ಹೋದರೆ, ಬೇರೆ ಯಾರಿಗೆ ಸ್ಪಂದಿಸುತ್ತೀರಿ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀಮತಿ ಶಶಿಕಲಾ. ಅಣ್ಣಾಸಾಹೇಬ. ಜೊಲ್ಲೆ:**-ಮಾನ್ಯ ಸಭಾಪತಿಗಳೆ, ಗೌರವಧನದ ಬದಲಾಗಿ ಅವರನ್ನು regularise ಮಾಡಲು ಪ್ರಯತ್ನ ಮಾಡುತ್ತೇವೆ. ಮಾಡುವ ಪ್ರಯತ್ನ ನಡೆಯುತ್ತಿದೆ, ಆ ಕೆಲಸವನ್ನು ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:**- ಮಾನ್ಯ ಸಭಾಪತಿಗಳೆ, ಕಾಳಜಿಪೂರ್ವಕವಾಗಿ ಈ ಕೆಲಸವಾಗಬೇಕು. 6 ತಿಂಗಳಿಂದ ವೇತನವಾಗಿಲ್ಲ, ವೇತನ ಬಿಡುಗಡೆ ಮಾಡಬೇಕು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡಬೇಕು.

**ಉಪಸಭಾಪತಿಗಳು:**- ದಯಮಾಡಿ ಎಲ್ಲಾ ನನ್ನ ಸ್ನೇಹಿತರಲ್ಲಿ ವಿನಂತಿ. 1-10 ನಿಮಿಷಕ್ಕೆ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡಲಾಗಿದೆ. ಈಗ ಕೇವಲ 8 ಪ್ರಶ್ನೆಗಳನ್ನು ತೆಗೆದುಕೊಳ್ಳಲಾಗಿದೆ. ಇನ್ನು 15 ಪ್ರಶ್ನೆಗಳು ಬಾಕಿ ಇವೆ. ಇನ್ನು ಉಳಿದ ಸದಸ್ಯರು ಐದೈದು ನಿಮಿಷದಲ್ಲಿ ತಮ್ಮ ಪ್ರಶ್ನೆಗಳನ್ನು ಕೇಳಿ ಮುಗಿಸಿದರೆ. ಆದಷ್ಟು ಬೇಗ ಪ್ರಶ್ನೋತ್ತರ ಅವಧಿಯನ್ನು ಮುಕ್ತಾಯಗೊಳಿಸಬಹುದು.

**ಶ್ರೀಮತಿ ಶಶಿಕಲಾ. ಅಣ್ಣಾಸಾಹೇಬ. ಜೊಲ್ಲೆ:**- ಮಾನ್ಯ ಸಭಾಪತಿಗಳೆ, ಈಗಾಗಲೇ ವೇತನ ಬಿಡುಗಡೆಯಾಗಿದೆ. ಇನ್ನುಳಿದ ವಿಷಯಗಳ ಬಗ್ಗೆ ಆರ್ಥಿಕ ಇಲಾಖೆಯವರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿ ಬಗೆಹರಿಸುವಂತಹ ಕೆಲಸವನ್ನು ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 22**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಪ್ಪಾಜಿಗೌಡ:-** ಮಾನ್ಯ ಸಭಾಪತಿಗಳೆ, 2020-21ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಬಡವರಿಗೆ ಕೂಲಿ ನೀಡುವ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪಂಚಾಯಿತಿವಾರು ಕ್ರಿಯಾಯೋಜನೆ ರೂಪಿಸಲಾಗಿದೆಯೇ ಎಂದು ಪ್ರಶ್ನೆಯನ್ನು ಕೇಳಿರುವುದಕ್ಕೆ ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಎರಡನೆಯದಾಗಿ, ಕೋವಿಡ್-19ರ ಹಿನ್ನೆಲೆಯಲ್ಲಿ ಬಡವರಿಗೆ ಕೂಲಿ ನೀಡುವ ಮಹತ್ವಾಕಾಂಕ್ಷೆ ಯೋಜನೆ ಇದಾಗಿದ್ದು ನಾಗಮಂಗಲ ತಾಲ್ಲೂಕಿನಲ್ಲಿ ಈವರೆವಿಗೂ ಕ್ರಿಯಾ ಯೋಜನೆ ಅನುಷ್ಠಾನ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಕ್ಕೆ, ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನೊಂದು ಪ್ರಮುಖವಾದ ಪ್ರಶ್ನೆ ಎಂದರೆ, 2020-21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ನಾಗಮಂಗಲ ತಾಲ್ಲೂಕಿನಲ್ಲಿ ಈವರೆವಿಗೂ ಯಾವ ಯಾವ ಕಾರ್ಯಕ್ರಮಗಳು ಚಾಲ್ತಿಯಲ್ಲಿದೆ ಎನ್ನುವುದಕ್ಕೆ ತುಂಬಾ ವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮುಂದಿನ ಪ್ರಶ್ನೆ, ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿ ಲಕ್ಕೇಗೌಡನಕೊಪ್ಪಲುನಿಂದ ದೊಂದೆಮಾದಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಯಾವ ಯೋಜನೆಯಲ್ಲಿ ಮಂಜೂರಾಗಿದೆ, ಸದರಿ ಕಾಮಗಾರಿಯನ್ನು ಯಾರು ನಿರ್ವಹಿಸುತ್ತಿದ್ದಾರೆ ಮತ್ತು ಯಾವ ಹಂತದಲ್ಲಿದೆ ಎನ್ನುವುದು ನನ್ನ ಪ್ರಶ್ನೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಬಹಳ ಮುಖ್ಯವಾದ ಪ್ರಶ್ನೆ ಎಂದರೆ, ಇದೇ ಯೋಜನೆಯನ್ನು ಪಂಚಾಯತ್ ರಾಜ್ ಇಲಾಖೆಯವರು ನಿರ್ವಹಿಸುತ್ತಿದ್ದಾರೆ. ಜೊತೆಗೆ, ಕಾಡಾ ಯೋಜನೆಯಲ್ಲಿಯೂ ಈ ಕೆಲಸವನ್ನು ಮಾಡಲಾಗುತ್ತಿದೆ. ಅಧಿಕಾರಿಗಳು ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಹೋಗಿ ರಸ್ತೆ ಕೆಲಸವನ್ನು ನೋಡಿದ್ದಾರೋ, ಇಲ್ಲವೊ ನನಗೆ ಗೊತ್ತಿಲ್ಲ. ಈ ಪ್ರದೇಶ ನಮ್ಮ ಊರ ಹತ್ತಿರವೇ ಬರುತ್ತದೆ. ಆ ರಸ್ತೆಯಲ್ಲಿ ನಾವು ಓಡಾಡುತ್ತೇವೆ. ಆ ರಸ್ತೆಗಳ ಗುಣಮಟ್ಟವು ಸರಿ ಇಲ್ಲ. ಈ ಕಾಮಗಾರಿಗೆ ಅನುಮೋದನೆ ಸಿಕ್ಕಿರುವುದು 2019ರಲ್ಲಿ. ಇಲ್ಲಿಯವರೆಗೂ ಆ ಕಾಮಗಾರಿ ಮುಗಿದಿರುವುದಿಲ್ಲ. ಮಾನ್ಯ ಮಂತ್ರಿಗಳು ಬಹಳ ಹಿರಿಯರು, ಅವರಲ್ಲಿ ನನ್ನ ಒಂದು ಕಳಕಳಿಯ ಮನವಿ ಎಂದರೆ, 2ಕೋಟಿ ರೂ.ಗಳ ರಸ್ತೆ ಕಾಮಗಾರಿಗೆ ಈಗಾಗಲೇ 1 ಕೋಟಿ 49 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಕೆಲಸವೇ ಆಗಿಲ್ಲ. ಯಾವ ಆಧಾರದ ಮೇಲೆ ಹಣ ಬಿಡುಗಡೆ ಮಾಡಲಾಗಿದೆ? ಕಾಡಾ ಯೋಜನೆಯಲ್ಲಿಯೂ ಈ ಕಾಮಗಾರಿ ನಡೆದಿದೆ. ಅವರು ಟೆಂಡರ್ ಕರೆದಿದ್ದಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(25)29-01-2021(02-10)ಬಿಎಸ್‌ಡಿ-ಬಿಎನ್‌ಎಸ್

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿ ತುಂಬಾ ಸ್ಪಷ್ಟವಾಗಿದೆ. ನಾನು ಒಂದು ಮಾತನ್ನು ಹೇಳುವುದೇನೆಂದರೆ, ಪಂಚಾಯತ್ ರಾಜ್ ಇಲಾಖೆಯಿಂದ ರೂ.2 ಕೋಟಿಗಳನ್ನು 3.8 ಕಿ.ಮೀಗಳಿಗೆ ತೆಗೆದುಕೊಂಡಿದ್ದೇವೆ. ಇದಾದ ನಂತರ ಒಂದೇ ರಸ್ತೆಗೆ ಎರಡು ಕಡೆ ಬಿಲ್ ಮಾಡಿರಬಹುದು ಎಂದು ನಾನು ವಿಚಾರಣೆ ಮಾಡಿದೆ. ನನಗೆ ಬಂದಿರುವ ಉತ್ತರ ನಾನು ಹೇಳುತ್ತಿದ್ದೇನೆ. ನಾನು spot ನೋಡಿಕೊಂಡು ಬಂದಿಲ್ಲ. ಕಾಡಾ ಇಲಾಖೆಯಿಂದ ಉಳಿದಂತಹ chainage ಅನ್ನು ಮಾಡುತ್ತಿದ್ದಾರೆ ಎಂದು ನನಗೆ ಡಿಜುಟಥಿ ಬಂದಿದೆ. ನಾನು ತುಂಬಾ ಸ್ಪಷ್ಟವಾಗಿ ಹೇಳುವುದೇನೆಂದರೆ, ಅಲ್ಲಿಗೆ Chief Engineer ಅನ್ನು ಕಳುಹಿಸಿ, ತಪಾಸಣೆ ನಡೆಸಿ, ವ್ಯತ್ಯಾಸ ಕಂಡು ಬಂದರೆ ಸಂಬಂಧಪಟ್ಟವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಅನುಮಾನ ಬೇಡ. ಇದಕ್ಕಿಂತ ಮುಂಚೆ Chief Engineer ಅವರನ್ನು ಮಾನ್ಯ ಸದಸ್ಯರು ಕರೆದುಕೊಂಡು ಹೋಗಲಿ. ಅವರು ಕೊಡುವ ವರದಿ ಅಲ್ಲ. Chief Engineer ಅವರಿಗೆ ಭೇಟಿ ಮಾಡಲು ಹೇಳುತ್ತೇನೆ. ಮಾನ್ಯ ಸದಸ್ಯರು ಅವರ ಜೊತೆ ಹೋಗಿ ಒಂದೇ ರಸ್ತೆಗೆ ಎರಡೆರಡು ಬಿಲ್ ಆಗಿದ್ದರೆ ಯಾವ ಕಾರಣಕ್ಕೂ ಸಂಬಂಧಪಟ್ಟವರನ್ನು ಬಿಡುವುದಿಲ್ಲ. Chief Engineer ಅವರು ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ spot inspection ಮಾಡಿ ವರದಿ ಕೊಡಬೇಕು. ನಂತರ ಮಾನ್ಯ ಸದಸ್ಯರು ಸಂತೃಪ್ತಿಯಾಗಿದೆಯೋ ಇಲ್ಲವೋ ಎಂಬ ಬಗ್ಗೆ ದಯವಿಟ್ಟು ನನಗೆ ತಿಳಿಸಬೇಕು.

**ಶ್ರೀ ಎನ್. ಅಪ್ಪಾಜಿಗೌಡ**:- ಮಾನ್ಯ ಸಭಾಪತಿಯವರೇ......

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಮಯ ಸಾಕಷ್ಟು ಆಗಿದೆ, ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ. ಸಮಯದ ಬಗ್ಗೆ ಯೋಚನೆ ಮಾಡಿ ಮಾಡಬೇಕಾಗುತ್ತದೆ.

**ಶ್ರೀ ಎನ್. ಅಪ್ಪಾಜಿಗೌಡ**:- ತಾವು ಸಮಯ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 16**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ. ಹರೀಶ್ ಕುಮಾರ್**:- ಮಾನ್ಯ ಸಭಾಪತಿಯವರೇ, ಉಪ ಸಭಾಪತಿಯಾಗಿ ಆಯ್ಕೆಯಾಗಿರುವ ತಮಗೆ ಅಭಿನಂದನೆಗಳು. ಉತ್ತರವನ್ನು ಒದಗಿಸಿದ್ದು, ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆಯನ್ನು 2017-18ನೇ ಇಸವಿಯಿಂದ ಪ್ರಾರಂಭ ಮಾಡಿದ್ದಾರೆ. ಮೂರು ವರ್ಷಗಳಗೊಮ್ಮೆ ಆಯ್ಕೆ ಮಾಡುವ ಅವಕಾಶ ಇದೆ. ಇವತ್ತು 2017-18, 2018-19 ಮತ್ತು 2019-20 ಸೇರಿಸಿಕೊಂಡು ಮೂರು ವರ್ಷಗಳು ಆಗಿವೆ. ಇನ್ನೂ ಕೂಡ ರೂ.264 ಕೋಟಿಗಳ ಬಿಡುಗಡೆ ಬಾಕಿ ಇದೆ. ಈ ವರ್ಷ ಮಾರ್ಚ್‌ಗೆ ನಾಲ್ಕನೆಯ ವರ್ಷ ಮುಗಿಯುತ್ತದೆ. ಆದ್ದರಿಂದ ಮತ್ತೆ 1,000 ಗ್ರಾಮಗಳ ಆಯ್ಕೆಯಾಗಬೇಕಾಗಿತ್ತು. ರಾಜ್ಯದಲ್ಲಿ ಸುಮಾರು ಅಂದಾಜು 20,000 ಕಂದಾಯ ಗ್ರಾಮಗಳಿದ್ದು, ಮೂರು ವರ್ಷಗಳಿಗೆ 1,000 ಸಾವಿರ ಗ್ರಾಮಗಳ ಆಯ್ಕೆಯಾದರೂ ಎಲ್ಲಾ ಗ್ರಾಮಗಳನ್ನು ಮುಟ್ಟಲು ಸುಮಾರು 60 ವರ್ಷಗಳು ಬೇಕು. ಆದ್ದರಿಂದ ಈ ಒಂದು ವರ್ಷ ವಿಳಂಬವಾದರೆ ಮತ್ತೆ ಅನೇಕ ವರ್ಷಗಳ ಕಾಲ ವಿಳಂಬವಾಗುವ ಸಂದರ್ಭವಿರುವುದರಿಂದ ನಮ್ಮ ಗ್ರಾಮೀಣ ಪ್ರದೇಶದ ರಸ್ತೆಗಳು, ಚರಂಡಿಗಳು, ಗ್ರಂಥಾಲಯ, ಸಭಾಭವನ, ಆಟದ ಮೈದಾನ, ಗರಡಿ ಮನೆ, ತಿಪ್ಪೇಗುಂಡಿಗಳು, ಇವುಗಳ ವೈಜ್ಞಾನಿಕ ನಿರ್ವಹಣೆ ಮತ್ತು ಗುಡಿ, ಮಸೀದಿ ಹಾಗೂ ಚರ್ಚ್‌ಗಳ ಅಭಿವೃದ್ಧಿ ಮತ್ತು ಜೀವನ ಮಟ್ಟವನ್ನು ಉತ್ತಮಗೊಳಸುವುದಕ್ಕಾಗಿ ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆ ಇದೆ. ಆದ್ದರಿಂದ ಬಹುಶಃ ಈ ವರ್ಷ ಮಾರ್ಚ್‌ನೊಳಗೆ 1,000 ಗ್ರಾಮಗಳನ್ನು ಆಯ್ಕೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಮೂರು ವರ್ಷಗಳ ಕಾಲಾವಧಿಯಲ್ಲಿ ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆ ಕಾರ್ಯಕ್ರಮ ಜಾರಿಗೆ ಬಂದಿದ್ದು, ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ ನಾಲ್ಕರಿಂದ ಆರು ಗ್ರಾಮಗಳಿಗೆ ರೂ.1 ಕೋಟಿಯ ವ್ಯವಸ್ಥೆಯಾಗಿದೆ. ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರಿಗೂ ಮೂರು ವರ್ಷಗಳಲ್ಲಿ ಒಂದೊಂದು ಗ್ರಾಮವನ್ನು ಆಯ್ಕೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಒಟ್ಟಾರೆ 2017-18ನೇ ಸಾಲಿಗೆ ರೂ.300 ಕೋಟಿಗಳನ್ನು, 2018-19ನೇ ಸಾಲಿಗೆ ರೂ.132 ಕೋಟಿಗಳನ್ನು, 2019-20ನೇ ಸಾಲಿಗೆ ರೂ.200 ಕೋಟಿಗಳನ್ನು ಹಾಗೂ 2020-21ನೇ ಸಾಲಿಗೆ ರೂ.188 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಡಿಸೆಂಬರ್ 2020ರ ಅಂತ್ಯಕ್ಕೆ ರೂ.735 ಕೋಟಿಗಳನ್ನು ಜಿಲ್ಲಾವಾರು ಬಿಡುಗಡೆ ಮಾಡಲಾಗಿದೆ. ಡಿಸೆಂಬರ್ 2020ರ ಅಂತ್ಯಕ್ಕೆ ರೂ.735 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೂ.79.57 ಕೋಟಿಗಳನ್ನು ಈ ವಾರದೊಳಗೆ ಬಿಡುಗಡೆ ಮಾಡುತ್ತೇವೆ. ನಾನು ಇದನ್ನು ಏಕೆ ಸ್ಪಷ್ಟವಾಗಿ ಹೇಳುತ್ತಿದ್ದೇನೆಂದರೆ, ಗ್ರಾಮೀಣ ಪ್ರದೇಶದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನರಿಗೆ ಈ ಯೋಜನೆ ಬಹಳ ಮುಖ್ಯವಾಗಿದೆ. ಇದರಲ್ಲಿ ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ ನಾಲ್ಕರಿಂದ ಆರು ಗ್ರಾಮಗಳನ್ನು ಆಯ್ಕೆ ಮಾಡಲು ಹಾಗು ವಿಧಾನ ಪರಿಷತ್ ಸದಸ್ಯರಿಗೂ ಒಂದೊಂದು ಗ್ರಾಮ ಆಯ್ಕೆ ಮಾಡಲು ಮಾಡಿದ್ದೇವೆ. ಈ ದಿಕ್ಕಿನಲ್ಲಿ ಇಲ್ಲಿಯವರೆಗೂ ಸಾಕಷ್ಟು ಹಣ ಬಿಡುಗಡೆ ಮಾಡಿದ್ದು, ಅಲ್ಪಸ್ವಲ್ಪ ಉಳಿದಿರುವ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡುತ್ತೇವೆ.

**ಶ್ರೀ ಎನ್. ಅಪ್ಪಾಜಿಗೌಡಃ–** ಮಾನ್ಯ ಸಭಾಪತಿಯವರೇ, ಮಾನ್ಯ ಹರೀಶ್ ಕುಮಾರ್ ರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದು, 2017ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಿಗೆ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಲ್ಲಿ ಒಂದು ಕೋಟಿ ಅನುದಾನವನ್ನು ಕೊಟ್ಟು, ಅದರಲ್ಲಿ ರೂ.50ರಿಂದ 60 ಲಕ್ಷ ಬಿಡುಗಡೆಯಾಗಿರುವುದನ್ನು ಬಿಟ್ಟರೆ ...... ಇನ್ನುಳಿದಂತೆ 2019, 2020 ಮತ್ತು 2021ನೇ ಸಾಲುಗಳಲ್ಲಿ ಯಾವ ವಿಧಾನ ಪರಿಷತ್ತಿನ ಸದಸ್ಯರಿಗೂ ಸಿಕ್ಕಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ವಿಧಾನ ಪರಿಷತ್ತಿನ ಸದಸ್ಯರಿಗೆ ಗ್ರಾಮ ವಿಕಾಸ ಯೋಜನೆಯಲ್ಲಿ ರೂ. 1 ಕೋಟಿ ಕೊಟ್ಟಿದ್ದು, ಅದರಲ್ಲಿಯೂ ಪೂರ್ಣ ಹಣ ಬಂದಿಲ್ಲ. ರೂ. 50, 60, 70 ಲಕ್ಷ ಮಾತ್ರ ಬಂದಿದೆ.

**ಶ್ರೀ ಕೆ.ಎಸ್. ಈಶ್ವರಪ್ಪಃ–** ನಾನು ಇಲ್ಲ ಎಂದು ಹೇಳಲಿಲ್ಲ, ಮಾನ್ಯ ಸಿದ್ದರಾಮಯ್ಯನವರ ಅವಧಿಯಲ್ಲಿ ಒಂದು ಕೋಟಿ ಎಂದು ಮಾಡಿದ್ದು, ಆ ಹಣವನ್ನೇ ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿರುವುದನ್ನು ನಾನೂ ಒಪ್ಪುತ್ತೇನೆ. ನಾನು ವಿರೋಧ ಪಕ್ಷದಲ್ಲಿದ್ದ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗಿಂತ ಜೋರಾಗಿ ಮಾತನಾಡಿದ್ದೇನೆ. 'ಮುಖ್ಯಮಂತ್ರಿಗಳಾಗಿ ಕುಳಿತುಕೊಂಡು ಏಕೆ ಬಿಡುಗಡೆ ಮಾಡಿಲ್ಲ' ಎಂದು ಕೇಳಿದ್ದೇನೆ. ಆ ಸಂದರ್ಭದಲ್ಲಿಯೂ ಹಣ ಬಿಡುಗಡೆಯಾಗಿಲ್ಲ. ಅಲ್ಲಿಂದ ಮುಂದೆ ಸಾಕಷ್ಟು ಹಣ ಬಿಡುಗಡೆ ಮಾಡಿದ್ದೇವೆ. ಉಳಿದಿರುವ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡುತ್ತೇವೆ.

**ಶ್ರೀ ಎನ್. ಅಪ್ಪಾಜಿಗೌಡ:–** ಜೊತೆಗೆ ವಿಧಾನ ಪರಿಷತ್ತಿನ ಸದಸ್ಯರ ಕಷ್ಟವನ್ನು ಅವರು ನೋಡಿದ್ದಾರೆ, ಅವರೂ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರಿಗೆ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ರೂ. ಒಂದು ಕೋಟಿ ನೀಡಲು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಆದಷ್ಟು ಬೇಗ ಕೋವಿಡ್ ಅನ್ನು ಓಡಿಸಿ, ನಂತರ ಅವರಿಗೆ ಕೊಡೋಣ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ಅಪ್ಪಾಜಿಗೌಡ**:- ಮಾನ್ಯ ಸಭಾಪತಿಯವರೇ, ಎಲ್ಲಾ ವಿಧಾನಸಭಾಕ್ಷೇತ್ರವಾರು ರೂ.400, 500, 600 ಕೋಟಿ ಬಿಡುಗಡೆ ಮಾಡುತ್ತಿದ್ದು, ವಿಧಾನ ಪರಿಷತ್ತಿನಲ್ಲಿ 75 ಜನ ಸದಸ್ಯರಿದ್ದು, ಪಕ್ಷಾತೀತವಾಗಿ ಎಲ್ಲರಿಗೂ ಕೊಡಬೇಕು. ಕೋವಿಡ್ ನೆಪ ಹೇಳಿಕೊಂಡು ಕಾಲ ಕಳೆಯುವುದು ಬೇಡ. ಅದೇರೀತಿ ನಮಗೂ ಕೊಡಬೇಕು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರ್ರೇ, ಮಾನ್ಯ ಸಚಿವರು ನಮ್ಮೆಲ್ಲರನ್ನು ಒಂದು ಸಭೆಗೆ ಕರೆದಿದ್ದರು, ಆ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ, ಎಲ್ಲಾ ಅಹವಾಲುಗಳನ್ನು ಕೇಳಿ ಪರಿಹಾರ ಕಲ್ಪಿಸುತ್ತೇನೆ ಎಂದು ವಿಶಾಲ ಹೃದಯದಿಂದ ಹೇಳಿದ್ದರು. ಆ ಮಾತನ್ನು ಉಳಿಸಿಕೊಂಡು......

**ಶ್ರೀ ಕೆ.ಎಸ್. ಈಶ್ವರಪ್ಪ**:- ತಾವು ಏನು ಹೇಳಿದಿರಿ ಎಂದು ಇನ್ನೊಂದು ಸಾರಿ ಹೇಳಿ. ವಿಶಾಲ ಹೃದಯ ನಮಗೂ ಇದೆ, ಅವರಿಗೂ ಇದೆ. ಪ್ರಶ್ನೆ ಏನೆಂದು ಅರ್ಥವಾಗಲಿಲ್ಲ. ಅವರು ಒಂದು ಕೋಟಿ ಹಣದ ಬಗ್ಗೆ ಹೇಳಲಿಲ್ಲ, ಬೇರೆ ಏನೋ ಹೇಳಿದರು.

**ಶ್ರೀ ಎಸ್.ಆರ್. ಪಾಟೀಲ್**:- ಅಲ್ಲ, in general, not in particular. In general, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಕೆಳಮನೆಯ ವಿಧಾನ ಸಭಾ ಸದಸ್ಯರುಗಳಿಗೆ ಹಣ ಬಿಡುಗಡೆ ಮಾಡಬೇಕು. ನಾವು ರೂ.500 ಕೋಟಿ 1000 ಕೋಟಿ, 2000 ಕೋಟಿಯಷ್ಟು ಹಣವನ್ನು ಕೇಳುವುದಿಲ್ಲ. ಆದರೂ, there should not be too much disparity. ಅಂತರ ಕಡಿಮೆಯಾಗುವಂತೆ ಮಾಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ**:- ಈಗ ಸ್ಪಷ್ಟವಾಗಿ ಅವರೇ ಹೇಳಬೇಕು, ಜೂಜಿಡಿಯಾಥಿ ಶುರು ಮಾಡಿದ್ದು ನಾವಲ್ಲ!, ಇದು ಅವರ period ನಿಂದಲೇ ಪ್ರಾರಂಭವಾಯಿತು.

**ಶ್ರೀ ಎಂ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ,......

**ಶ್ರೀ ಕೆ.ಎಸ್. ಈಶ್ವರಪ್ಪ**:- ಅವರು ಎಂಎಲ್‌ಎ ಆಗಿದ್ದವರು, ಈಗ ಎಂಎಲ್‌ಸಿ ಸಹ ಆಗಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ**:- ಹಾಗಾದರೆ ನಾವು ಮಾಡಿದರೆ ಅವರೂ ಮಾಡಬೇಕೆ?

**ಶ್ರೀ ಕೆ.ಎಸ್. ಈಶ್ವರಪ್ಪ**:- ಈಗ ನನಗೆ ಮಾತನಾಡಲು ಬಿಡುವುದಿಲ್ಲವೇ? ಎಲ್ಲರೂ ಒಟ್ಟಿಗೆ ನಿಲ್ಲುತ್ತಾರೆಯೇ? ಆಗ ಎಂಎಲ್‌ಎ ಗಳಿಗೆ ನಾಲ್ಕು-ಆರು ಗ್ರಾಮ ಎಂದು ಲೆಕ್ಕ ಮಾಡಿಕೊಂಡು, ನಂತರ ವಿಧಾನ ಪರಿಷತ್ತಿಗೆ ಒಂದೊಂದು ಗ್ರಾಮ ಎಂದು ಮಾಡಿದ್ದಾಗಿದೆ. ವಿಧಾನ ಸಭಾ ಸದಸ್ಯರಿಗೆ ರೂ.500

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ಎಂದು ಹೇಳುತ್ತಾರೆ. ಅವರಿಗೆ ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅವರು ರೂ.500 ಕೋಟಿ ಮಾತ್ರ ಎಂದು ಹೇಳುತ್ತಾರೆ. ವಿಧಾನ ಪರಿಷತ್ತಿನಲ್ಲಿ 74-75 ಜನ ಮಾತ್ರ ಇದ್ದಾರೆ ಎಂದು ಇಲ್ಲಿ ಹೇಳುತ್ತಾರೆ. Disparity ಗೆ ಖಂಡಿತ ಅವಕಾಶ ಇಲ್ಲ. ವಿಧಾನ ಪರಿಷತ್ತಿನ ಸದಸ್ಯರ ಸಮಸ್ಯೆ ಖಂಡಿತ ನನಗೆ ಗೊತ್ತು. ಏನೇ ನ್ಯಾಯ ಕೊಡಬೇಕಾದರೂ ನಾನು ಕೊಡುತ್ತೇನೆ. ಎರಡನೆಯದಾಗಿ ವಿಧಾನ ಪರಿಷತ್ತಿನ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರನ್ನು ಕೇರಳ ರಾಜ್ಯಕ್ಕೆ ಕಳುಹಿಸಬೇಕೆಂದು ಸಲಹೆ ಬಂದಿತ್ತು. ಅದರ ಫೈಲ್ ರೆಡಿ ಮಾಡಿದ್ದು, 25 ಜನ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರನ್ನು ಆದಷ್ಟು ಬೇಗ ಕೇರಳ ರಾಜ್ಯಕ್ಕೆ ಕಳುಹಿಸಿ, ಅಲ್ಲಿ ಯಾವ ರೂಪದಲ್ಲಿ ಗ್ರಾಮ ಅಭಿವೃದ್ಧಿ ಮಾಡಿದ್ದಾರೆ ಎಂದು ನೋಡಿಕೊಂಡು, ಅವರ ವರದಿಯ ಆಧಾರದ ಮೇಲೆ ಕರ್ನಾಟಕದಲ್ಲಿಯೂ ಕೂಡ ಜಾರಿಗೆ ತರುವ ಪ್ರಯತ್ನ ಮಾಡುತ್ತೇವೆ.

**ಶ್ರೀ ಕೆ.ಸಿ. ಕೊಂಡಯ್ಯಃ–** ಮಾನ್ಯ ಸಭಾಪತಿಯವರೇ, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯಗಳಿಗೆ ಕಳುಹಿಸಬೇಕೆಂದು ಇತ್ತು.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಕೋವಿಡ್ ಇರುವುದರಿಂದ ವಯಸ್ಸಾದವರಿಗೆ ಬಹಳ ರಾಜ್ಯಗಳನ್ನು ಸುತ್ತಿಸಬಾರದು ಎಂದು ನನ್ನ ಆಸೆ. ಎರಡು ರಾಜ್ಯವಲ್ಲದೇ ನಾಲ್ಕು ರಾಜ್ಯಗಳಿಗೆ ಹೋಗಲಿ, ನನ್ನ ಗಂಟೇನು ಹೋಗುತ್ತದೆ? ಅವರ ಹಿರಿತನವನ್ನು ಉಪಯೋಗ ಮಾಡಿಕೊಂಡು ಎರಡು ರಾಜ್ಯಗಳಿಗೆ ಖಂಡಿತ ಕಳುಹಿಸುತ್ತೇವೆ. ಅಲ್ಲಿಂದ ಬಂದು ಒಳ್ಳೆಯ ವರದಿ ಕೊಟ್ಟರೆ ನಮ್ಮ ರಾಜ್ಯದಲ್ಲಿಯೂ ಜಾರಿಗೆ ತರೋಣ.

**ಶ್ರೀ ಕೆ.ಸಿ. ಕೊಂಡಯ್ಯಃ–** ನಾವು ಸಭೆಯಲ್ಲಿ request ಮಾಡಿದ ಸಂದರ್ಭದಲ್ಲಿ ಚಿಟಡಿಜಚಿಜಥಿ ಅಧಿಕಾರಿಗಳ ತಂಡ ಆಂಧ್ರಪ್ರದೇಶಕ್ಕೆ ಭೇಟಿ ನೀಡಿ ವರದಿಯನ್ನು ಸಲ್ಲಿಸಿದೆ.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳನ್ನು ಈಗಾಗಲೇ ಕಳುಹಿಸಿ, ಅವರಿಂದ ವರದಿ ಪಡೆದಿದ್ದು, ಅದನ್ನು ಜಾರಿಗೆ ತರಲು ಶುರು ಮಾಡಿದ್ದೇವೆ. ಆ ವರದಿ ತೆಗೆದುಕೊಂಡು ಈಗ 25 ಜನರನ್ನೂ ಕಳುಹಿಸುತ್ತೇವೆ. ಒಂದು ರಾಜ್ಯವಲ್ಲದೇ ಎರಡು ರಾಜ್ಯಗಳಿಗೆ ಕಳುಹಿಸಲು ಕೇಳಿದ್ದು, ಖಂಡಿತ ಎರಡು ರಾಜ್ಯಗಳಿಗೂ ಕಳುಹಿಸುತ್ತೇವೆ. ಆದಷ್ಟು ಬೇಗ ಹೋಗಿ ಬರಲಿ. ಕೋವಿಡ್‌ನ ಭಯ ಬೇರೆ ಇದೆ. ಮಾನ್ಯ ಎಸ್.ಆರ್. ಪಾಟೀಲರು ಹೋಗುತ್ತಾರೋ, ಇಲ್ಲವೋ ಗೊತ್ತಿಲ್ಲ. ಇವರೆಲ್ಲರೂ ರಾಜ್ಯದ ಆಸ್ತಿಯಾಗಿದ್ದಾರೆ. ಮಾನ್ಯ ಹೊರಟ್ಟಿರವರು ದಯಮಾಡಿ ಕೇಳಬೇಕು. ಹೆಚ್ಚು ಕಡಿಮೆ ಆದರೆ ನಾವು ಎಲ್ಲಿ ಓಡ್ಡಾಡೋಣ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:–** ನನಗೇನೂ ಆಗುವುದಿಲ್ಲ, ಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿಮಗೆ ಆಗುತ್ತದೆ ಎಂದು ನಾನೆಲ್ಲಿ ಹೇಳಿದೆ? ಅವರಿಗೆ ಏನೂ ಆಗಬಾರದೆಂದು ನನ್ನ ಆಸೆ.

**ಶ್ರೀ ಎಸ್.ಆರ್. ಪಾಟೀಲ್:–** ಧನ್ಯವಾದಗಳು.

**ಶ್ರೀ ಎಸ್. ರವಿ:–** ಕೋವಿಡ್ ಮುಗಿದ ನಂತರ ಹೋಗಬಹುದಲ್ಲವೇ?

**(26)/29.01.2021/2.20/ಹೆಚ್‌ವಿ:ಜಿಆರ್**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಅಧಿಕಾರಿಗಳಿಂದ ಈಗಾಗಲೇ ವರದಿಯನ್ನು ಸ್ವೀಕಾರ ಮಾಡಲಾಗಿದೆ. ಸಭೆಯಲ್ಲಿ ಏನು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದನ್ನು ಈಗಾಗಲೇ ಜಾರಿಗೊಳಿಸುವುದಕ್ಕೆ ಪ್ರಾರಂಭಿಸಿದ್ದೇವೆ. ವಿಧಾನ ಪರಿಷತ್ತಿನಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಂಡಿರುವ 25 ಜನ ಸದಸ್ಯರನ್ನು ಖಂಡಿತವಾಗಿಯೂ ಎರಡು ರಾಜ್ಯಗಳಿಗೆ ಪ್ರವಾಸ ಕಳುಹಿಸಿಕೊಡುತ್ತೇವೆ. ಅದಷ್ಟು ಬೇಗ ಅಲ್ಲಿಗೆ ಭೇಟಿ ನೀಡಿ ಉತ್ತಮವಾದ ವರದಿ ಕೊಡಬೇಕೆನ್ನುವುದು ನನ್ನ ಆಶಯವಾಗಿದೆ. ನನಗೆ ಕೋವಿಡ್–19 ಸಾಂಕ್ರಾಮಿಕ ರೋಗದ ಭಯವಿದೆ. ಹಿರಿಯ ಸದಸ್ಯರಾಗಿರುವ ಅವರೆಲ್ಲರೂ ಈ ರಾಜ್ಯದ ಆಸ್ತಿ. ಅವರೆಲ್ಲರಿಗೂ ಒಳ್ಳೆಯದಾಗಲಿ ಎನ್ನುವುದೇ ನನ್ನ ಆಶಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಾಳಜಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**ಶ್ರೀ ಹರೀಶ್‌ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, 2020–21ನೇ ಸಾಲಿನಲ್ಲಿ ಪುನಃ ಒಂದು ಸಾವಿರ ಗ್ರಾಮಗಳನ್ನು ಆಯ್ಕೆ ಮಾಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಭರವಸೆ ಕೊಡುವುದು ಬಹಳ ಸುಲಭ ಆದರೆ, ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳುವುದು ಎಷ್ಟು ಕಷ್ಟವೆನ್ನುವುದು ಮಂತ್ರಿಗಳಾಗಿ ಕಾರ್ಯನಿರ್ವಹಿಸಿರುವವರಿಗೆಲ್ಲ ಗೊತ್ತಿರುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

**(ಈ ಹಂತದಲ್ಲಿ ಸಭಾಪತಿಗಳು ಸಭಾಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:05**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇದು ರಾಜ್ಯದಲ್ಲಿರುವ ಏಕೈಕ ಪಶು ವಿಶ್ವವಿದ್ಯಾಲಯವಾಗಿದೆ. 'ಈ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆಯೆಷ್ಟು' ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮಂಜೂರಾಗಿರುವ 116 ಜನ ಪ್ರಾಧ್ಯಾಪಕ ಹುದ್ದೆಗಳ ಪೈಕಿ 30 ಜನ ಪ್ರಾಧ್ಯಾಪಕರುಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಸಹ ಪ್ರಾಧ್ಯಾಪಕರ ವೃಂದದಲ್ಲಿ ಸುಮಾರು 174 ಹುದ್ದೆಗಳು ಮಂಜೂರಾಗಿದ್ದು, ಕೇವಲ 30 ಜನ ಸಹ ಪ್ರಾಧ್ಯಾಪಕರು ಮಾತ್ರ ಕೆಲಸವನ್ನು ಮಾಡುತ್ತಿದ್ದಾರೆ. ಮಂಜೂರಾಗಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ಸಂಖ್ಯೆ 425 ಆಗಿದೆ. ಇದರಲ್ಲಿ 185 ಜನ ಸಹಾಯಕ ಪ್ರಾಧ್ಯಾಪಕರು ಖಾಯಂ ಆಗಿ, 128 ಜನರು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಅಂಕಿಅಂಶಗಳನ್ನು ನೋಡಿದರೆ ಕೇವಲ ಶೇಕಡಾ 30 ರಿಂದ 35 ಹುದ್ದೆಗಳು ಮಾತ್ರ ಆಸ್ತಿತ್ವದಲ್ಲಿವೆ ಎನ್ನುವುದು ತಿಳಿದು ಬರುತ್ತದೆ. ಉಳಿದಿರುವ ಹುದ್ದೆಗಳನ್ನು ಆದಷ್ಟು ಬೇಗನೇ ಭರ್ತಿ ಮಾಡಿ, ಈ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯಕ್ಕೆ ಶಕ್ತಿಯನ್ನು ತುಂಬುವ ಮೂಲಕ, ಅಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಸರ್ಕಾರ ಅನುವು ಮಾಡಿಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ವಿಶೇಷವಾಗಿ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಹಣಕಾಸಿನ ಕೊರತೆಯಿಂದಾಗಿ ಸಾಕಷ್ಟು ಕೆಲಸಕಾರ್ಯಗಳು ನಡೆಯುತ್ತಿಲ್ಲ ಎನ್ನುವ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಈ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುದಾನವನ್ನು ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಗೋಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿರುವುದಕ್ಕಾಗಿ ನಾನು ವೈಯಕ್ತಿಕವಾಗಿ ಮಾನ್ಯ ಪಶುಸಂಗೋಪನಾ ಸಚಿವರಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿದ್ದ ಪಶುಗಳ ಸಂಖ್ಯೆಗೂ ಈಗ ಇರುವಂತಹ ಪಶುಗಳ ಸಂಖ್ಯೆಗೂ ಹೋಲಿಕೆ ಮಾಡಿ ನೋಡಿದರೆ, ಈಗ ಶೇಕಡಾ 30ರಷ್ಟು ಪಶುಗಳ ಸಂಖ್ಯೆ ಕಡಿಮೆಯಾಗಿದೆ. ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಪಶುಗಳ ಸಂಖ್ಯೆ ಹೆಚ್ಚಾಗಬೇಕಾದರೆ, ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಉತ್ತಮ ರೀತಿಯಲ್ಲಿ ಬೆಳೆಯಬೇಕಾಗಿದೆ ಮತ್ತು ಅದು ತನ್ನ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸಬೇಕಾದರೆ, ಅಲ್ಲಿ ಖಾಲಿ ಇರುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವಂತಹ ಕಾರ್ಯವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ದಿನಾಂಕ:11.12.2019ರಲ್ಲಿ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಇಲ್ಲಿಯವರೆವಿಗೆ ನೇಮಕಾತಿಯ ಯಾವ ಪ್ರಕ್ರಿಯೆಗಳು ನಡೆದಿಲ್ಲ. ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಪ್ರಯುಕ್ತ ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಅಂಶವನ್ನು ತಿಳಿಸಿದ್ದಾರೆ. ಖಾಲಿ ಇರುವಂತಹ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಿ, ಈ ಪಶು ವಿಶ್ವವಿದ್ಯಾನಿಲಯವನ್ನು ಮತ್ತಷ್ಟು ಗಟ್ಟಿಯಾಗಿ ಬೆಳೆಸಬೇಕೆನ್ನುವ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ನಾನು ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿವೆ. ನಾನು ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಆದಷ್ಟು ಶೀಘ್ರವಾಗಿ ಖಾಲಿ ಇರುವ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನಿಸಲಾಗುತ್ತದೆ. ನಾನು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರವಾಸ ಮಾಡಿದ್ದೇನೆ. ಬಹಳಷ್ಟು ಕಡೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಆದಷ್ಟು ಬೇಗ ಈ ಹುದ್ದೆಗಳನ್ನು ತುಂಬುವುದಕ್ಕೆ ಪ್ರಯತ್ನಿಸುತ್ತೇನೆ.

**ಶ್ರೀ ಅರವಿಂದ್‌ಕುಮಾರ್ ಅರಳಿ:–** ಸನ್ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯಲ್ಲಿ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವಿದೆ. ಮಾನ್ಯ ಸಚಿವರು ನಮ್ಮ ಜಿಲ್ಲೆಯವರಾಗಿರುವುದು ಬಹಳ ಸಂತೋಷದ ವಿಚಾರವಾಗಿದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು 2019ನೇ ಇಸವಿಯಲ್ಲಿಯೇ ಸರ್ಕಾರದ ಆದೇಶವಾಗಿದ್ದರೂ ಸಹ ಕೋವಿಡ್–19 ಸಾಂಕ್ರಾಮಿಕ ರೋಗದ ನೆಪ ಹೇಳಿಕೊಂಡು ಇಲ್ಲಿಯವರೆಗೆ ಹುದ್ದೆಗಳನ್ನು ಭರ್ತಿ ಮಾಡದೇ ವಿಳಂಬ ಮಾಡಿರುವುದು ಸರಿಯಲ್ಲ. ಕೋವಿಡ್–19 ಸಾಂಕ್ರಾಮಿಕ ರೋಗ ಪ್ರಾರಂಭವಾಗಿದ್ದು 2020ನೇ ಇಸವಿಯಲ್ಲಿ.

**ಶ್ರೀ ಪ್ರಭು ಬಿ.ಚವ್ಹಾಣ್:–** ಸನ್ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟ ಕಡತ ಆರ್ಥಿಕ ಇಲಾಖೆಯ ಮುಂದಿದೆ. ಅದನ್ನು ಫಾಲೋಅಪ್ ಮಾಡುತ್ತಿದ್ದೇವೆ. ಆದಷ್ಟು ಬೇಗ ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುः–** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:12(02) ಅನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ರಮೇಶ್‌ಗೌಡರು ಸದನಕ್ಕೆ ಗೈರು ಹಾಜರಾಗಿದ್ದಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:35**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯಃ–** ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಬಸ್ ಮಾಲೀಕರ ತೆರಿಗೆ ವಿನಾಯಿತಿಯ ಬಗ್ಗೆ ಪ್ರಶ್ನೆ ಕೇಳಿದ್ದೆ, ಅದಕ್ಕೆ ಮಾನ್ಯ ಸಚಿವರು 'ದಿನಾಂಕ:24.03.2020 ರಿಂದ 23.05.2020ರವರೆಗೆ ಒಟ್ಟು 02 ತಿಂಗಳ ಅವಧಿಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಕೊಡಗು ಜಿಲ್ಲೆ ಗುಡ್ಡಗಾಡುಗಳಿಂದ ಕೂಡಿದ ಪ್ರದೇಶವಾಗಿದೆ. ನಮ್ಮ ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕಕ್ಕಾಗಿ ಖಾಸಗಿ ಬಸ್‌ಗಳನ್ನೇ ಅವಲಂಭಿಸಿದ್ದೇವೆ. ಕೋವಿಡ್–19 ಹಿನ್ನೆಲೆ ಸುಮಾರು 9 ತಿಂಗಳುಗಳ ಕಾಲ ಎಲ್ಲ ಖಾಸಗಿ ಬಸ್ ಮಾಲೀಕರು ತಮ್ಮ ಬಸ್‌ಗಳ ಸಂಚಾರವನ್ನು ನಿಲ್ಲಿಸಿದ್ದರು. ಆ ಸಂದರ್ಭ ಅವರಿಗೆ ಅನಾನುಕೂಲಕರವಾಗಿತ್ತು. ಸಂಕಷ್ಟದಲ್ಲಿರುವ ಅವರಿಗೆ 9 ತಿಂಗಳ ಮೋಟಾರು ವಾಹನ ತೆರಿಗೆ ವಿನಾಯಿತಿಯನ್ನು ನೀಡಬೇಕಾಗಿತ್ತು. ಆದರೆ, ಸರ್ಕಾರ ಕೇವಲ 2 ತಿಂಗಳುಗಳ ತೆರಿಗೆ ವಿನಾಯಿತಿಯನ್ನು ಮಾತ್ರ ನೀಡಿದೆ. ಮಾನ್ಯ ಸಚಿವರು ಪೂರ್ಣ 9 ತಿಂಗಳ ಅವಧಿಗೆ ಅನ್ವಯವಾಗುವಂತೆ ಮೋಟಾರು ವಾಹನ ತೆರಿಗೆ ವಿನಾಯಿತಿಯನ್ನು ನೀಡಬೇಕೆನ್ನುವುದು ನನ್ನ ವಿನಂತಿಯಾಗಿದೆ. 'ಕೊಡಗು ಜಿಲ್ಲೆಯಲ್ಲಿ ಈಗಲೂ ಬಸ್ ಸಂಪರ್ಕ ವ್ಯವಸ್ಥೆಯಿಂದ ವಂಚಿತವಾಗಿರುವ ಗ್ರಾಮಗಳ ಸಂಖ್ಯೆ ಎಷ್ಟು' ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು, 'ಕೊಡಗು ಜಿಲ್ಲೆಯಲ್ಲಿ ಒಟ್ಟು 301 ಗ್ರಾಮಗಳ ಪೈಕಿ 210 ಗ್ರಾಮಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. 2018ನೇ ಇಸವಿಯಲ್ಲಿ ಸಂಭವಿಸಿದಂತಹ ಭೀಕರ ಅನಾಹುತದಿಂದಾಗಿ ಕೊಡುಗು ಜಿಲ್ಲೆಯಲ್ಲಿರುವ ಗ್ರಾಮೀಣ ರಸ್ತೆಗಳು ಕೊಚ್ಚಿ ಹೋಗಿವೆ. ಈ ಕಾರಣದಿಂದಾಗಿ ಕೊಡಗಿಗೆ ಒಂದು ಪ್ಯಾಕೆಜ್ ಘೋಷಣೆ ಮಾಡಬೇಕೆಂದು ನಾನು ಗ್ರಾಮೀಣಾಬಿವೃದ್ಧಿ ಸಚಿವರನ್ನು ಕೇಳುತ್ತಲೇ ಬಂದಿದ್ದೇನೆ. ಉತ್ತಮವಾಗಿರುವ ರಸ್ತೆಗಳಲ್ಲಿ ಮಾತ್ರ ಸರ್ಕಾರಿ ಬಸ್‌ಗಳು ಸಂಚರಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಬಸ್ ಮಾಲೀಕರು ತಮ್ಮ ಬಸ್‌ಗಳನ್ನು ಓಡಿಸುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮೊದಲು ಗ್ರಾಮೀಣ ರಸ್ತೆಗಳ ನಿರ್ವಹಣೆಯನ್ನು ಗ್ಯಾಂಗ್‌ಮ್ಯಾನ್‌ಗಳು ಮಾಡುತ್ತಿದ್ದರು. ಈಗ ಮೆಷನ್ ಮೂಲಕ ಕಾಡನ್ನು ತೆಗೆಯುತ್ತಿರುವುದರಿಂದ ಅಲ್ಲಿ ಚರಂಡಿ ವ್ಯವಸ್ಥೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಲ್ಲ. ಅಂತಹ ಕಡೆಗಳಲ್ಲಿ ಚರಂಡಿ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದರ ಜೊತೆಗೆ ಪಂಚಾಯಿತಿಯವರು ಗ್ರಾಮೀಣ ರಸ್ತೆಯ ಚರಂಡಿ ವ್ಯವಸ್ಥೆಯನ್ನು ಮಾಡುತ್ತಿಲ್ಲ. ಆದ್ದರಿಂದ ಸರ್ಕಾರವೇ ನೇರವಾಗಿ ಈ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿಃ–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ತಮ್ಮ ಜಿಲ್ಲೆಯಲ್ಲಿ ಸರ್ಕಾರಿ ಬಸ್‌ಗಳಿಗೆ ಬದಲಾಗಿ ಖಾಸಗಿ ಬಸ್‌ಗಳ ಸಂಚಾರದ ಮೇಲೆಯೇ ಅವಲಂಭಿಸಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಲಾಕ್‌ಡೌನ್ ನಂತರ ಅನೇಕ ಕಡೆಗಳಲ್ಲಿ ಸರ್ಕಾರಿ ಬಸ್‌ಗಳನ್ನು ಹೊರತುಪಡಿಸಿ ಖಾಸಗಿ ಬಸ್‌ಗಳ ಸಂಚಾರವನ್ನು ನಿಲ್ಲಿಸಿರುವ ವಿಚಾರ ನಮ್ಮೆಲ್ಲರಿಗೂ ಗೊತ್ತಿದೆ. ಎಲ್ಲಿ ಖಾಸಗಿ ಬಸ್‌ಗಳ ಸಂಚಾರವನ್ನು ನಿಲ್ಲಿಸಲಾಗಿತ್ತು, ಅಲ್ಲಿ ಸರ್ಕಾರಿ ಬಸ್‌ಗಳ ಸಂಚಾರವನ್ನು ಪ್ರಾರಂಭ ಮಾಡಿದ್ದೆವು. ಪುನಃ ಖಾಸಗಿಯವರು ತಮ್ಮ ಬಸ್‌ಗಳ ಸಂಚಾರವನ್ನು ಪ್ರಾರಂಭಿಸಿದ ಮೇಲೆ ಖಾಸಗಿ ಮತ್ತು ಸರ್ಕಾರಿ ಬಸ್‌ಗಳ ನಡುವೆ ಪೈಪೋಟಿ ಉಂಟಾಗಬಾರದೆನ್ನುವ ಹಿನ್ನೆಲೆಯಲ್ಲಿ ಅವರಿಗೊಂದು ರೂಟ್, ನಮಗೊಂದು ರೂಟ್ ಎಂದು ಮಾಡಿಕೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಲಾಕ್‌ಡೌನ್ ಸಂದರ್ಭದಲ್ಲಿ ಖಾಸಗಿ ಬಸ್ ಮಾಲೀಕರು ಸಂಕಷ್ಟಕ್ಕೀಡಾಗಿದ್ದಾರೆ. ಆದ್ದರಿಂದ ಅವರಿಗೆ ಮೋಟಾರು ವಾಹನ ತೆರಿಗೆ ವಿನಾಯಿತಿ ನೀಡಬೇಕೆನ್ನುವುದು ಮಾನ್ಯ ಸದಸ್ಯರ ಮೂಲ ಪ್ರಶ್ನೆಯಾಗಿದೆ. ಈಗಾಗಲೇ ಎರಡು ತಿಂಗಳ ತೆರಿಗೆಯನ್ನು ನಾವು ಸಂಪೂರ್ಣವಾಗಿ ರದ್ದುಗೊಳಿಸಿದ್ದೇವೆ. ಇದರ ಜೊತೆಗೆ ಕೆಲವು ಖಾಸಗಿ ಬಸ್ ಮಾಲೀಕರು ನಮ್ಮ ಬಸ್‌ಗಳನ್ನು ಓಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಮ್ಮ ಪರ್ಮಿಟ್‌ಗಳನ್ನು ನಮಗೆ ಒಪ್ಪಿಸಿದ್ದಾರೆ, ಅವರಿಂದ ನಾವು ಇವತ್ತಿನವರೆಗೆ ತೆರಿಗೆಯನ್ನು ಕಟ್ಟಿಸಿಕೊಂಡಿಲ್ಲ. ಮತ್ತೆ ಅವರು ಯಾವಾಗ ತಮ್ಮ ಪರ್ಮಿಟ್‌ಗಳನ್ನು ವಾಪಸ್ಸು ಪಡೆದುಕೊಂಡು ಸಂಚಾರ ಪ್ರಾರಂಭ ಮಾಡುತ್ತಾರೆ ಆಗ ಅವರಿಂದ ತೆರಿಗೆಯನ್ನು ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ ರಸ್ತೆಗಳು ಹದಗೆಟ್ಟಿವೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರಲಾಗುತ್ತದೆ. ಕೊಡಗಿನ ಸುಮಾರು 15 ಊರುಗಳಿಗೆ ಸರ್ಕಾರಿ ಬಸ್ ವ್ಯವಸ್ಥೆ ಇಲ್ಲ. ಕಾರಣವೇನೆಂದರೆ, ಕೊಡಗು ಗುಡ್ಡಗಾಡು ಪ್ರದೇಶವಾಗಿರುವುದರಿಂದ ಅಲ್ಲಿ ಸರಿಯಾದ ರಸ್ತೆಗಳ ವ್ಯವಸ್ಥೆಯಿಲ್ಲ. ಈ 15 ಊರುಗಳಿಗೆ ರಸ್ತೆ ವ್ಯವಸ್ಥೆ ಮಾಡಿಕೊಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯವರಿಗೆ ಮನವಿ ಮಾಡಿಕೊಳ್ಳಲಾಗುತ್ತದೆ. ಅಲ್ಲಿ ಸರಿಯಾದ ರಸ್ತೆ ವ್ಯವಸ್ಥೆಯಾದ ನಂತರ ಬಸ್‌ಗಳ ಸಂಚಾರವನ್ನು ಪ್ರಾರಂಭಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(27) 29.1.2021 2.30 ಪಿಕೆ:ಜಿಆರ್

**ಪ್ರಶ್ನೆ ಸಂಖ್ಯೆ: 60**

(ಉತ್ತರ ಪ್ರತಿಯನ್ನು ಲಗತ್ತಿಸಲಾಗಿದೆ)

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಗದಗದಲ್ಲಿ ಶಿವಶರಣಕ್ಕಂಥ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಕುರಿತು ನಾನು ಪ್ರಶ್ನೆ ಮಾಡಿದ್ದೆ. ಮಾನ್ಯ ಸಚಿವರು ವಿವರವಾದ ಉತ್ತರ ಕೊಟ್ಟಿದ್ದಾರೆ. ನನ್ನದು ನಾಲ್ಕು ಉಪಪ್ರಶ್ನೆಗಳಿವೆ. ಮೊದಲನೆಯದಾಗಿ, ಬೋಧಕ ಮತ್ತು ಬೋಧಕೇತರ ಒಟ್ಟು ಮಂಜೂರಾದ ಹುದ್ದೆಗಳು 175. ಈ 175 ಹುದ್ದೆಗಳ ಪೈಕಿ 53 ಹುದ್ದೆಗಳಲ್ಲಿ ನೇಮಕಾತಿ ಆಗಿವೆ ಎಂದು ಉತ್ತರ ಕೊಟ್ಟಿದ್ದಾರೆ. ಇನ್ನೂ 122 ಖಾಲಿ ಹುದ್ದೆಗಳಿವೆ. ಆ ಖಾಲಿ ಹುದ್ದೆಗಳನ್ನು ಯಾವಾಗ ತುಂಬುತ್ತಾರೆ? ಇದಕ್ಕೆ ಏನಾದರೂ ಅವಧಿಯನ್ನು ನಿಗದಿಪಡಿಸಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ತುಂಬಿದ ಈ 53 ಹುದ್ದೆಗಳಲ್ಲಿ ಖಾಯಂ ಎಷ್ಟು ಮತ್ತು Agency ಮೂಲಕ ಗುತ್ತಿಗೆ ಆಧಾರದ ಮೇಲೆ ಎಷ್ಟು ಹುದ್ದೆಗಳನ್ನು ತುಂಬಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಉತ್ತರದಲ್ಲಿ ವಿವರಣೆ ಇಲ್ಲ. ಹಾಗಾಗಿ ಈ 53 ಹುದ್ದೆಗಳ ಪೈಕಿ ಖಾಯಂ ಹುದ್ದೆಗಳು ಎಷ್ಟಿವೆ ಮತ್ತು ಗುತ್ತಿಗೆ ಆಧಾರದ ಮೇಲೆ ಎಷ್ಟು ಹುದ್ದೆಗಳನ್ನು ತುಂಬಲಾಗಿದೆ ಎಂಬುದನ್ನು ತಿಳಿಸಬೇಕು.

ಮಾನ್ಯ ಸಭಾಪತಿಯವರೇ, ಈ 53 ಹುದ್ದೆಗಳ ಪಟ್ಟಿ ಕೊಟಿದ್ದಾರೆ. ಅದನ್ನು ಗಮನಿಸಿ ನೋಡಿದಾಗ ಶೇಕಡ 90 ರಷ್ಟು Guest Faculty ಇದ್ದಾರೆ. ಈ ವಿಶ್ವವಿದ್ಯಾಲಯದ ಆಡಳಿತ ಮತ್ತು ಗುಣಮಟ್ಟದ ಶಿಕ್ಷಣ ವಿದ್ಯಾರ್ಥಿಗಳಿಗೆ ಸಿಗಬೇಕಾದರೆ ಹುದ್ದೆಗಳಿಗೆ ಖಾಯಂ ನೇಮಕಾತಿ ಮಾಡುವುದು ಅವಶ್ಯಕವಾಗಿರುತ್ತದೆ. ಖಾಯಂ ನೇಮಕಾತಿಗಳನ್ನು ಮಾಡಲು ಒಂದು ನಿರ್ದಿಷ್ಟ ಸಮಯವನ್ನು ನಿಗದಿಪಡಿಸುತ್ತಾರೆಯೇ ಎಂಬುದಕ್ಕೆ ಉತ್ತರ ಕೊಟ್ಟ ಮೇಲೆ ನನ್ನ ಮುಂದಿನ ಉಪಪ್ರಶ್ನೆಯನ್ನು ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಆ ಪ್ರಶ್ನೆಯನ್ನೇಕೆ ಸಸ್ಪೆನ್ಸ್ ಆಗಿ ಇಟ್ಟಿರಿ? ಅದನ್ನೂ ಕೇಳಿದ್ದಿದ್ದರೆ ಉತ್ತರ ಕೊಟ್ಟುಬಿಡುತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ನಾನು ಆ ಉಪಪ್ರಶ್ನೆಯನ್ನು ನಂತರ ಕೇಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಗದಗದಲ್ಲಿ ಏನು ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಆರಂಭವಾಗಿದೆಯೋ ಇದರಲ್ಲಿ 10 ವಿವಿಧ ಕೋರ್ಸ್‌ಗಳಿದ್ದು, 3 ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳಿವೆ. ಒಟ್ಟು 377 ವಿದ್ಯಾರ್ಥಿಗಳಿದ್ದಾರೆ, ಎಲ್ಲಾ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿರುವವರೇ ಕೆಲಸ ನಿರ್ವಹಿಸುತ್ತಿದ್ದಾರೆ. ಒಬ್ಬರನ್ನೂ ಸಹ ಖಾಯಂ ನೇಮಕಾತಿ ಮಾಡಿಲ್ಲ.

53 ಬೋಧಕ ಸಿಬ್ಬಂದಿ ಯಾರಿದ್ದಾರೆ ಅವರೂ ಕೂಡ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಆಗಿರುವಂಥವರಾಗಿದ್ದಾರೆ. 100 ಬೋಧಕೇತರ ಸಿಬ್ಬಂದಿಗಳನ್ನು ತೆಗೆದುಕೊಳ್ಳಲಾಗಿದ್ದು, ಇನ್ನು 22 ಹುದ್ದೆಗಳು ಉಳಿದುಕೊಂಡಿದೆ. ಆದರೆ ನಾವು ಈಗಿರುವ 53 + 100 ಹುದ್ದೆಗಳೇನಿವೆ ಅವುಗಳಲ್ಲೇ maintain ಮಾಡುತ್ತಿದ್ದೇವೆ. ಅವಶ್ಯಕತೆ ಬಿದ್ದರೆ ಹೊರಗುತ್ತಿಗೆಯ ಆಧಾರದ ಮೇಲೆ ಆ 22 ಹುದ್ದೆಗಳನ್ನೂ ಭರ್ತಿ ಮಾಡಿಕೊಳ್ಳುತ್ತೇವೆ. ಈ ಎಲ್ಲಾ ಹುದ್ದೆಗಳಿಗೆ ಖಾಯಂ ಆಗಿ ಏಕೆ ನೇಮಕ ಮಾಡಲಾಗುತ್ತಿಲ್ಲ ಎಂದರೆ, ಅದಕ್ಕೆ ಈಗಿರುವ ಹಣಕಾಸಿನ ಪರಿಸ್ಥಿತಿಯೇ ಕಾರಣ ಎನ್ನುವುದು ಬಹುಶಃ ನಿಮಗೆ ಗೊತ್ತಿರುತ್ತದೆ ಎಂದು ಭಾವಿಸುತ್ತೇನೆ. ಕೋವಿಡ್ ನಿರ್ವಹಣೆಗೆ ಎಷ್ಟು ದುಡ್ಡಿದ್ದರೂ ಸಾಕಾಗುತ್ತಿಲ್ಲ. ತಾವು ಸಪ್ಲಿಮೆಂಟರಿ ಬಜೆಟ್ಟನ್ನು ಗಮನಿಸಿರಬಹುದು. ಯಾವುದೇ ಇಲಾಖೆಗೆ ಒಂದೇ ಒಂದು ರೂಪಾಯಿಯನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೊಡುವುದಕ್ಕಾಗುತ್ತಿಲ್ಲ. ದೇಶದಲ್ಲಿ ಕೋವಿಡ್‌ನ್ನು ತುಂಬಾ ಚೆನ್ನಾಗಿ ಕರ್ನಾಟಕ ರಾಜ್ಯ ನಿರ್ವಹಿಸಿದೆ ಎನ್ನುವ ಹೆಗ್ಗಳಿಕೆ ಬರಬೇಕಾದರೆ, ವಿವಿಧ ಇಲಾಖೆಗಳ ಹಣವನ್ನು ತೆಗೆದು ಇಲ್ಲಿ ಹಾಕಿದ್ದೇವೆ ಎನ್ನುವುದನ್ನು ಮನಗಾಣಬೇಕು. ಹಣಕಾಸಿನ ಪರಿಸ್ಥಿತಿ ಸರಿಹೋದ ನಂತರ ಸದರಿ ಹುದ್ದೆಗಳಿಗೆ ಖಾಯಂ ನೇಮಕಾತಿ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಇಲ್ಲಿ 10 ಕೋರ್ಸುಗಳಿವೆ. ಈ 10 ಕೋರ್ಸುಗಳ ಪೈಕಿ ಕನಿಷ್ಠ 1 ಕೋರ್ಸ್‌ಗಾದರೂ ಒಬ್ಬರನ್ನಾದರೂ ಖಾಯಂ ಆಗಿ ನೇಮಕಾತಿ ಮಾಡಬೇಕಾಗಿತ್ತು ಎನ್ನುವುದು ನನ್ನ ಕಳಕಳಿಯಾಗಿದೆ. ಹಾಗೆ ಮಾಡದೇ ಇದ್ದರೆ ವಿಶ್ವವಿದ್ಯಾಲಯ ಸ್ಥಾಪನೆ ಮಾಡಿರುವುದಕ್ಕೆ ಅರ್ಥ ಇರುವುದಿಲ್ಲ. 1 ಕೋರ್ಸ್‌ಗೆ ಒಬ್ಬರನ್ನಾದರೂ ಖಾಯಂ ಆಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೇಮಕಾತಿ ಮಾಡಬೇಕು. ಈ ಕೆಲಸವನ್ನು ಆದಷ್ಟು ಬೇಗ ಮಾನ್ಯ ಸಚಿವರು ಮಾಡಬೇಕೆಂದು ಕೋರುತ್ತೇನೆ.

ಇನ್ನೊಂದು ಮಹತ್ವದ ಪ್ರಶ್ನೆ ಏನೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಏನು ವಿದ್ಯಾರ್ಥಿಗಳು ಓದುತ್ತಿದ್ದಾರೋ ಅವರನ್ನು ಅದೇ ಇಲಾಖೆಯಲ್ಲಿ ನೌಕರಿ ಕೊಡುವ ಸಂಬಂಧ ಮೀಸಲಾತಿ ಇಡಬೇಕು. ಅರಣ್ಯ ಇಲಾಖೆಯವರು ಅರಣ್ಯಕ್ಕೆ ಸಂಬಂಧಪಟ್ಟಂತೆ ಏನು ಕೋರ್ಸ್ ಇಟ್ಟಿದ್ದಾರೋ, ಆ ಕೋರ್ಸನ್ನು ತೆಗೆದುಕೊಂಡು ಮುಗಿಸಿರುವವರಿಗೆ ಅರಣ್ಯ ಇಲಾಖೆಯಲ್ಲೇ ಕೆಲಸ ಕೊಡುತ್ತಾರೆ; ಇಂತಿಷ್ಟು ಹುದ್ದೆಗಳೆಂದು ಮೀಸಲಿಟ್ಟಿರುತ್ತಾರೆ. ಮೀನುಗಾರಿಕೆ ಯಲ್ಲಿ B.F.Sc., (Bachelor of Fisheries Science) ಓದಿದವರಿಗೆ ನೌಕರಿ ಕೊಡುತ್ತಾರೆ. ಅದೇರೀತಿ ಕೃಷಿ ಇಲಾಖೆಯಲ್ಲೂ ವ್ಯವಸ್ಥೆ ಇದೆ. ಹೀಗೆ ಆಯಾ ಇಲಾಖೆಯ ಅಡಿ ಕೋರ್ಸ್ ಮುಗಿಸಿ ವಿದ್ಯಾರ್ಹತೆ ಪಡೆದಂಥವರಿಗೆ ಆ ಇಲಾಖೆಯಲ್ಲೇ ನೌಕರಿ ಕೊಡುವ ವ್ಯವಸ್ಥೆ ಇದೆ, ಅವರಿಗೆ ಮೀಸಲಾತಿ ವ್ಯವಸ್ಥೆ ಇದೆ. ಆದ್ದರಿಂದ ಮಾನ್ಯ ಸಚಿವರಲ್ಲಿ, ಯಾರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಡಿ ಕೋರ್ಸ್ ಮುಗಿಸಿ ಪದವಿ ಪಡೆದುಕೊಳ್ಳುತ್ತಾರೋ ಅಂಥವರಿಗೆ ನೌಕರಿ ಕೊಡುವ ನಿಟ್ಟಿನಲ್ಲಿ ಮೀಸಲಾತಿ ಇಡಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಉತ್ತರದಲ್ಲಿ, "ಪರಿಶೀಲನೆ ಮಾಡುತ್ತೇವೆ" ಎಂದು ಹೇಳಿದ್ದೀರಿ. ಆದರೆ ಇಲ್ಲಿ ಪರಿಶೀಲನೆ ಮಾಡುವ ಪ್ರಶ್ನೆಯಿಲ್ಲ; ನೀವು ಮೀಸಲಾತಿ ಮಾಡಲಿಕ್ಕೆ ಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಓದಿದ ಮಕ್ಕಳಿಗೆ ಪಿ.ಡಿ.ಓ., ಆಗಿ ಮಾಡುವುದಿಲ್ಲ, ಅಥವಾ ಇಲಾಖೆಯಲ್ಲಿ ಮೀಸಲಾತಿ ಇಡದೇ ಹೋದರೆ, ಮುಂಬರುವ ದಿನಮಾನಗಳಲ್ಲಿ ಈ ವಿಶ್ವವಿದ್ಯಾಲಯ ಮುಚ್ಚುವ ಪರಿಸ್ಥಿತಿಗೆ ಬರುತ್ತದೆ. ಈ ವಿಶ್ವವಿದ್ಯಾಲಯ ಪ್ರಾರಂಭವಾಗಿ 4 ವರ್ಷವಾಗಿದ್ದರೂ ಕೇವಲ 377 ವಿದ್ಯಾರ್ಥಿಗಳು ಮಾತ್ರ ಇದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಓದಿದ ವಿದ್ಯಾರ್ಥಿಗಳನ್ನು ಆ ಇಲಾಖೆಯಲ್ಲೇ ನೇಮಕ ಮಾಡಿಕೊಳ್ಳುವುದಿಲ್ಲ ಎನ್ನುವುದಾದರೆ ಮುಂದೆ ಈ ವಿಶ್ವವಿದ್ಯಾಲಯದಲ್ಲಿ ಓದಲು ಯಾರೂ ಬರುವುದಿಲ್ಲ. ಇಲ್ಲಿ ಓದಲು ಬರುವ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಿಂದ ಬರುವಂತಹ ಬಡವರಾಗಿರುತ್ತಾರೆ. ಅವರಿಗೆ ನಿಮ್ಮ ಇಲಾಖೆಯಲ್ಲಿ ನೌಕರಿ ಕೊಡುವ ನಿಟ್ಟಿನಲ್ಲಿ ಮೀಸಲಾತಿ ಇಡುತ್ತೇವೆ ಎಂದು ದಯವಿಟ್ಟು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಈಗಾಗಲೇ ನೀವು ಘೋಷಣೆ ಮಾಡುವ ಮಾದರಿಯಲ್ಲೇ ಮಾತನಾಡುತ್ತಿದ್ದೀರಿ, ಒಳ್ಳೆಯದು. ಈ ವಿಶ್ವವಿದ್ಯಾಲಯ ಆರಂಭವಾಗಿ ಮೂರು ವರ್ಷಗಳಾಗಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿಂದ ಶಿಕ್ಷಣವನ್ನು ಮುಗಿಸಿಕೊಂಡು ಹೊರ ಬರುವ ವಿದ್ಯಾರ್ಥಿಗಳು ಯಾರಿರುತ್ತಾರೋ ಅವರಿಗೆ ನೌಕರಿ ಕೊಡಬೇಕು ಎನ್ನುವ ಉದ್ದೇಶ ನಮಗೂ ಇದೆ. ಇದಕ್ಕೆಂದು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯೊಂದನ್ನು ಮಾಡಿದ್ದೇವೆ. ಅವರಿಂದ ವರದಿಯನ್ನು ಪಡೆದುಕೊಳ್ಳುತ್ತೇವೆ. ಅಲ್ಲದೇ ವಿಶೇಷವಾಗಿ ಇಲ್ಲಿ ಸಿ & ಆರ್ ರೂಲ್ಸ್ ಬದಲಾವಣೆ ಮಾಡಬೇಕಾಗುತ್ತದೆ. ಇದು ಎಲ್ಲಾ ಇಲಾಖೆಗಳಿಗೂ ಅನ್ವಯವಾಗುತ್ತದೆ. ಮಾನ್ಯ ಸಂಕನೂರರವರ ಕಳಕಳಿ ನಮಗೆ ಅರ್ಥವಾಗಿದೆ. ಅವರು ಗದಗನಿಂದ ಬಂದಿದವರಾಗಿದ್ದಾರೆ. ಆದಷ್ಟು ಬೇಗ, ಅಲ್ಲಿನ ವಿದ್ಯಾರ್ಥಿಗಳಿಗೆ ಉದ್ಯೋಗ ಕೊಡಿಸುವ ಸಂಬಂಧ ಯಾವ ರೂಪದ ವ್ಯವಸ್ಥೆಯನ್ನು ತರಬೇಕೋ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗದಗನ ಸ್ಥಳೀಯ ಎಂ.ಎಲ್.ಎ., ಎಂ.ಎಲ್.ಸಿ.,ಗಳು ಯಾರಿದ್ದೇವೆಯೋ ಅವರಿಗೆ ಸದರಿ ವಿಶ್ವವಿದ್ಯಾಲಯದಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುವುದಿಲ್ಲ. ಅಲ್ಲೇನು Governing Council ಇದೆ, ಅದು, ಸ್ಥಳೀಯ ಜನ ಪ್ರತಿನಿಧಿಗಳಿಗೆ 'ಅಹ್ವಾನಿತರು' ಎಂದು ಕರೆಯಬೇಕು. ಆಗ ಅಲ್ಲಿ ಏನು ನಡೆಯುತ್ತದೆ ಎಂದು ನಮಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ಅಲ್ಲೇನು ನಡೆಯುತ್ತಿದೆ, ನಡೆಯುತ್ತಿಲ್ಲ ಎನ್ನುವುದು ತಿಳಿಯುವುದೇ ಇಲ್ಲ; ನಾವು ಕತ್ತಲಲ್ಲೇ ಇರುತ್ತೇವೆ. ಮಾನ್ಯ ಸಚಿವರು ಈ ವಿಚಾರವಾಗಿ ಚಿಂತನೆ ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಒಂದು ವಿಷಯವನ್ನು ತಿಳಿಸಲು ಎಷ್ಟು ಎಳೆಯುತ್ತಿದ್ದೀರಿ? ಪರಿಷತ್ ಕಥೆಯೇ ಇದು. Governing Council ನಲ್ಲಿ ನಮಗೂ ಒಂದು ಅವಕಾಶ ಕೊಡಬೇಕು ಎಂದು ಒಂದು ಮಾತು ಹೇಳಿದ್ದರೆ ಸಾಕಾಗುತ್ತಿತ್ತು. ಅದು ಬಿಟ್ಟು 20 ನಿಮಿಷ ಇದೇ ವಿಷಯವನ್ನು ಎಳೆದುಕೊಂಡು ಹೋಗುತ್ತೀರಿ. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆದಷ್ಟು ಬೇಗ ಆ ದಿಕ್ಕಿನಲ್ಲೂ ಗಮನ ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರ ಪ್ರಶ್ನೆ ಸಂಖ್ಯೆ : 25 ಅನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, 'ನಿರ್ಭಯಾ ಫಂಡ್' ಎಂದು dedicated non-lapsable corpus fund ಅನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ರೂ. 191 ಕೋಟಿಗಳು ಬೇರೆ ಬೇರೆ ಇಲಾಖೆಗಳಿಗೆ ಹೋಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇದು ವರ್ಗಾವಣೆಯಾಗಿದೆ. ನೀವು ಪ್ರಶ್ನೆ ಕೇಳಿದರೆ ಉತ್ತರ ಕೊಡುವವರು ಯಾರು?

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರು nodal authority ಆಗಿದ್ದಾರೆ. ಅವರು ಕಲೆಕ್ಟ್ ಮಾಡಿ ಕೊಡಬೇಕು. ರೂ. 191 ಕೋಟಿಗಳನ್ನು ವಿವಿಧ ಇಲಾಖೆಗಳಿಗೆ ಕೊಟ್ಟಿದ್ದಾರೆ, ರೂ.620 ಕೋಟಿಗಳನ್ನು ಪೊಲೀಸ್ ಇಲಾಖೆಗೆ ಕೊಟ್ಟಿದ್ದಾರೆ. ಅದೆಲ್ಲವನ್ನೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ವಹಣೆ ಮಾಡಬೇಕು.

**ಸಭಾಪತಿಯವರು:–** ಮಾನ್ಯ ಸಚಿವರೇ, ಈ ಪ್ರಶ್ನೆ ವರ್ಗಾವಣೆಯಾಗಿದೆ ಎಂದು ನೀವೇ ಎದ್ದು ಹೇಳಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ):–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ಅಡಿ helpline and One Stop Centre ಬರುತ್ತದೆ. ಉಳಿದಿದ್ದು ಗೃಹ ಇಲಾಖೆಗೆ ಬರುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ತಾವು ಇದನ್ನೆಲ್ಲಾ ಕಲೆಕ್ಟ್ ಮಾಡಿ ಕೊಡಬೇಕಾಗುತ್ತದೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಈ ಪ್ರಶ್ನೆಯನ್ನು ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಿರ್ಭಯಾ ಫಂಡ್‌ಗೆ 3–4 ಇಲಾಖೆಗಳು ಬರುತ್ತವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅವೆಲ್ಲವನ್ನು ಕಲೆಕ್ಟ್ ಮಾಡಿ ವಿವರ ಕೊಡಬೇಕು.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಕಲೆಕ್ಟ್ ಮಾಡಿ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 29ನೇ ಜನವರಿ 2021ರ ಸಮೂಹ 5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 50 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 12. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

### (ಅ) ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಬೆಂಕಿ ಬಿದ್ದ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸುವ ಕುರಿತು.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಇದೇ ಸೋಮವಾರ ದಿನಾಂಕ 25.1.2021 ರಂದು ಬೆಂಕಿ ಬಿದ್ದು ಸುಮಾರು 70 ಹೆಕ್ಟೇರ್ ಅರಣ್ಯ ನಾಶವಾಗಿರುವುದು ಎಂದು ವಿಜಯವಾಣಿ, ಪ್ರಜಾವಾಣಿ, ವಿಜಯ ಕರ್ನಾಟಕ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ವರದಿಯಾಗಿದೆ.

ದಿನಾಂಕ 25.1.2021ರಂದು ಬೆಳಗ್ಗೆ 11.00 ಗಂಟೆಗೆ ಡೋಣಿ ಮತ್ತು ಡೋಣಿ ತಾಂಡಾ ಗ್ರಾಮಗಳ ಮಧ್ಯವಿರುವ ಕಪ್ಪತ್ತಗುಡ್ಡ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಅಪಾರ ಪ್ರಮಾಣದ ಸಸ್ಯ ಸಂಪತ್ತು ವಿಶೇಷವಾಗಿ ಔಷಧಿ ಸಸ್ಯಗಳು ಅಲ್ಲದೇ ಕೆಲವೊಂದು ಸರೀಸೃಪಗಳು ಮತ್ತು ಗುಬ್ಬಿ ಗೂಡುಗಳು ಹಾಗೂ ಇತ್ತೀಚಿಗೆ ನೆಟ್ಟಿದ್ದ ಗಿಡಗಳು ಸುಟ್ಟು ಕರಕಲಾಗಿವೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿವೆ.

ಕಪ್ಪತ್ತಗುಡ್ಡದ ಅರಣ್ಯ ಪ್ರದೇಶದಲ್ಲಿ ಪ್ರತಿವರ್ಷ ಬೇಸಿಗೆ ಅವಧಿಯಲ್ಲಿ ಮೂಢ ನಂಬಿಕೆಯಿಂದ ಬೆಂಕಿ ಹಚ್ಚಿ ಅಪಾರ ಪ್ರಮಾಣದ ಹಾನಿ ಮಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಈ ಪ್ರದೇಶದಲ್ಲಿ ಹಲವು ಗಾಳಿಯಂತ್ರ (ವಿಂಡ್ ಮಿಲ್) ಸ್ಥಾಪನೆಗೊಂಡಿದ್ದು, ಇದಕ್ಕೆ ಸಂಬಂಧಿಸಿದ ನಿರ್ವಹಣೆ ಮಾಡುವ ಸಿಬ್ಬಂದಿಯವರು ಬೀಡಿ, ಸಿಗರೇಟ್ ಸೇದಿ ಬೀಸಾಡಿದ ನಿರ್ಲಕ್ಷ್ಯತನದಿಂದ ಬೆಂಕಿ ಹತ್ತುವ ಪ್ರಸಂಗ ಉಂಟು.

ಸದ್ಯ ಕಪ್ಪತ್ತಗುಡ್ಡಕ್ಕೆ ಬೆಂಕಿ ಕಾಣಿಸಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿಶೇಷ ಗಮನಕ್ಕೆ ತರಬಯಸುವುದೇನೆಂದರೆ, ಡೋಣಿ ಭಾಗದ ಕೆಲವೊಂದು ಸಾರ್ವಜನಿಕರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದನ್ನು ಇಲಾಖೆಯವರು ತೆರವುಗೊಳಿಸಿ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡಿರುವುದು ಇರುತ್ತದೆ. ಅಂತಹ ಅಸಮಾಧಾನಗೊಂಡ ಕೆಲವೊಂದು ಸಾರ್ವಜನಿಕರು ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿರಬಹುದೆಂದು ಸಂಶಯ ವ್ಯಕ್ತವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಸರ್ಕಾರ ಈ ಕುರಿತು ಸಮಗ್ರ ತನಿಖೆ ನಡೆಸಿ ಕಪ್ಪತ್ತಗುಡ್ಡದ ಬೆಂಕಿ ಅನಾಹುತಕ್ಕೆ ಕಾರಣಗಳೇನು ಎಂಬುದನ್ನು ಕಂಡು ಹಿಡಿದು ಸಂಬಂಧಪಟ್ಟವರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಮತ್ತು ಪ್ರತಿವರ್ಷ ಬೆಂಕಿ ಬೀಳದ ಹಾಗೆ ಎಲ್ಲಾ ರೀತಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸುವೆನು.

(ಮುಂದು . . .)

(28) 29.01.2021 2.40 ಡಿಎಸ್:ಎಂಡಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಬೆಂಕಿ ಬಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಅರಣ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಆ) ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಖಾಲಿ ಇರುವ ಎ, ಬಿ, ಸಿ ವೃಂದದ ವಿವಿಧ ಹುದ್ದೆಗಳಿಗೆ ಕೆಪಿಎಸ್‌ಸಿ ಮೂಲಕ ನೇಮಕಾತಿ ಪ್ರಕ್ರಿಯೆ ಮುಗಿದು 3-4 ವರ್ಷಗಳು ಕಳೆದರೂ ಆರ್ಥಿಕ ಮಿತವ್ಯಯ ನೆಪ ಮಾಡಿ ನೇಮಕಾತಿ ಆದೇಶಗಳನ್ನು ತಡೆಹಿಡಿದಿರುವ ಬಗ್ಗೆ.**

-----

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆ.ಪಿ.ಎಸ್.ಸಿ. ಅಧಿಸೂಚನೆ ಸಂಖ್ಯೆ: PSC 01/RT(4)B-1/2016, ದಿನಾಂಕ: 05-10-2016 PSC 01/RT(4)B-2/2017; ದಿನಾಂಕ: 05-11-2017 ಹಾಗೂ PSC 01/RTB-2/2017 ಹಾಗೂ ದಿನಾಂಕ: 23-03-2018 ಮುಖಾಂತರ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಖಾಲಿ ಇರುವ ಎ, ಬಿ ಮತ್ತು ಸಿ ವೃಂದದ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಈ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ/ಹೆಚ್ಚುವರಿ ಆಯ್ಕೆ ಪಟ್ಟಿಯನ್ನು 2020 ಜನವರಿ-ಮೇ ಅವಧಿಯಲ್ಲಿ ಪ್ರಕಟಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಪೂರ್ವ ಪ್ರಕ್ರಿಯೆಗಳಾದ ಸಿಂಧುತ್ವ ಪ್ರಮಾಣ ಪತ್ರ, ಮೂಲ ದಾಖಲಾತಿ ಪರಿಶೀಲನೆ, ವೈದ್ಯಕೀಯ ಪ್ರಮಾಣ ಪತ್ರ ಹಾಗೂ ಪೊಲೀಸ್ ವೆರಿಫಿಕೇಶನ್ ಮುಂತಾದವುಗಳು ಪೂರ್ಣಗೊಂಡಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ನೇಮಕಾತಿ ಅಧಿಸೂಚನೆ ಹೊರಡಿಸಿ, 3-4 ವರ್ಷಗಳು ಗತಿಸಿದ್ದು ಈ ನೇಮಕಾತಿಗೆ ಸತತವಾಗಿ ಬಂದ ಹಲವಾರು ಅಡಚಣೆಗಳನ್ನು ದಾಟಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇತ್ತ ಆಯ್ಕೆಯಾದ ಶೇಕಡಾ 90 ರಷ್ಟು ಅಭ್ಯರ್ಥಿಗಳು ಗ್ರಾಮೀಣ ಹಾಗು ಬಡ ಕುಟುಂಬಗಳಿಂದ ಬಂದಿರುತ್ತಾರೆ. ಅಲ್ಲದೆ ಸಾಕಷ್ಟು ಅಭ್ಯರ್ಥಿಗಳು 40 ವರ್ಷ ಮೇಲ್ಪಟ್ಟವರಾಗಿದ್ದು, ವಯೋಮಿತಿ ಮೀರಿ ಹೋಗುವ ಆತಂಕದಲ್ಲಿರುತ್ತಾರೆ. ಪ್ರಸ್ತುತ ಆಯ್ಕೆಯಾಗಿರುವ ಅಭ್ಯರ್ಥಿಗಳು ಇದೇ ನೇಮಕಾತಿಯನ್ನು ನಂಬಿಕೊಂಡು ಇತ್ತ ಖಾಸಗಿ ಉದ್ಯೋಗವನ್ನು ತೊರೆದಿರುವುದರಿಂದ ಆರ್ಥಿಕ ಸಂಕಷ್ಟ ಉಂಟಾಗಿ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿದೆ.

ಆರ್ಥಿಕ ಇಲಾಖೆಯು ಕೋವಿಡ್-19 ರಿಂದ ಉಂಟಾಗಿರುವ ಆರ್ಥಿಕ ಸಂಕಷ್ಟದ ನೆಪವೊಡ್ಡಿ ನೇಮಕಾತಿ ಆದೇಶಗಳನ್ನು ತಡೆಹಿಡಿಯಲಾಗಿದೆ. ಈಗಿದ್ದು ಆರ್ಥಿಕ ಇಲಾಖೆಯು ಇತರೆ ಹಲವು ವಿವಿಧ ಇಲಾಖೆಗಳ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಅನುಮತಿ ನೀಡಲಾಗಿರುತ್ತದೆ. ಇದರಂತೆ ಕೆ.ಪಿ.ಎಸ್.ಸಿ ಮುಖಾಂತರ ನೇರ ನೇಮಕಾತಿಯಲ್ಲಿ ಆಯ್ಕೆಯಾದ ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿಶಾಲೆ/ಪದವಿಪೂರ್ವ ಕಾಲೇಜು/ನವೋದಯ ಶಾಲೆಗಳ ಪ್ರಾಂಶುಪಾಲರು, ವಿವಿಧ ವಿಷಯಗಳ ಉಪನ್ಯಾಸಕರು ಹಾಗೂ ಶಿಕ್ಷಕರು ಮತ್ತು ಅಲ್ಪಸಂಖ್ಯಾತರ ಜಿಲ್ಲಾ-ಅಧಿಕಾರಿಗಳ ಹುದ್ದೆಗಳ ಅಭ್ಯರ್ಥಿಗಳಿಗೆ ನೇಮಕಾತಿ/ಸ್ಥಳ ನಿಯುಕ್ತಿ ಆದೇಶ ನೀಡಿ ಅನುಕೂಲ ಮಾಡಿಕೊಡಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಜವಳಿ ಮತ್ತು ಅಲ್ಪಸಂಖ್ಯಾತರ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಇ) ರಾಜ್ಯದಲ್ಲಿರುವ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ 532 ಪ್ರಾಂಶುಪಾಲರು ಮತ್ತು ಶಿಕ್ಷಕರ ವೇತನವನ್ನು ಕಳೆದ 7 ತಿಂಗಳುಗಳಿಂದ ಬಿಡುಗಡೆ ಮಾಡದಿರುವ ಬಗ್ಗೆ.**

-----

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಇಂದಿರಾಗಾಂಧಿ ವಸತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲೆ, ಅಂಬೇಡ್ಕರ್ ವಸತಿ ಶಾಲೆ, ಏಕಲವ್ಯ ವಸತಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಈ ಎಲ್ಲಾ ಶಾಲೆಗಳು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಇವರ ವ್ಯಾಪ್ತಿಯಲ್ಲಿ ಗುಣಮಟ್ಟದ ಶಿಕ್ಷಣ ಕಲಿಕೆ ಹಾಗೂ ಉತ್ತಮ ಫಲಿತಾಂಶದೊಂದಿಗೆ ಕಾರ್ಯನಿರ್ವಹಿಸುತ್ತಿವೆ. ಆದರೆ ಸುಮಾರು 532 ಮಂದಿ ಪ್ರಾಂಶುಪಾಲರು ಹಾಗೂ ಶಿಕ್ಷಕರು ಮಾನ್ಯ ಘನ ನ್ಯಾಯಾಲಯದ ಆದೇಶದ ಮೇರೆಗೆ ಗುತ್ತಿಗೆ ಆಧಾರದ ಮೇಲೆ ಕಳೆದ 15 ವರ್ಷಗಳಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಪರೀಕ್ಷೆ ಮೌಲ್ಯಮಾಪನ ಹಾಗೂ ಆನ್‌ಲೈನ್ ತರಗತಿಗಳನ್ನು ನಡೆಸಿರುತ್ತಾರೆ. ಇವರುಗಳು ಪ್ರಾರಂಭದಲ್ಲಿ ತಿಂಗಳಿಗೆ ಕನಿಷ್ಟ ಗೌರವ ಧನ 4600 ಗಳನ್ನು ಪಡೆಯುತ್ತಿದ್ದು, ಇತ್ತೀಚಿನ ದಿನಗಳಲ್ಲಿ 8620 ರೂ.ಗಳ ಗೌರವ ಧನವನ್ನು ನಿಗದಿಪಡಿಸಿರುತ್ತಾರೆ.

ಕೋವಿಡ್-19 ಲಾಕ್‌ಡೌನ್ ಕಾರಣದಿಂದಾಗಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಶಿಕ್ಷಕರುಗಳಿಗೆ ಕಳೆದ ಜೂನ್ 2020ರ ಮಾಹೆಯಿಂದ ಗೌರವ ಧನ ವೇತನವನ್ನು ಬಿಡುಗಡೆ ಮಾಡದೆ ಇರುವುದರಿಂದ ಇವರು ಮತ್ತು ಇವರ ಕುಟುಂಬ ವರ್ಗ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಈ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ ರವರು ಸಭೆ ಕರೆದು ವೇತನ ಬಿಡುಗಡೆ ಮಾಡಬೇಕೆಂದು ಆದೇಶ ನೀಡಿದ್ದರು ಸಹ ಇದುವರೆಗೆ ವೇತನವನ್ನು ಬಿಡುಗಡೆ ಮಾಡಿರುವುದಿಲ್ಲ. ಆದರೆ ಹಿಂದುಳಿದ ವರ್ಗಗಳ ಇಲಾಖೆಗೆ ಒಳಪಡುವ ಇದೇ ಮಾದರಿಯ ಅಲ್ಪಸಂಖ್ಯಾತ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಮಾತ್ರ ವೇತನವನ್ನು ಪಾವತಿಸಲಾಗಿದೆ. ಆದರೆ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಈ ಮೇಲ್ಕಂಡ ವಸತಿ ಶಾಲೆಯ ಗುತ್ತಿಗೆ ಶಿಕ್ಷಕರುಗಳಿಗೆ ಇದುವರೆಗೆ ವೇತನ ಬಿಡುಗಡೆ ಮಾಡದೆ ಇರುವುದರಿಂದ ಇವರುಗಳಿಗೆ ತುಂಬಾ ಅನ್ಯಾಯವಾಗಿರುತ್ತದೆ. ಜೊತೆಗೆ ಕುಟುಂಬ ನಿರ್ವಹಣೆಯು ಕಷ್ಟವಾಗಿರುತ್ತದೆ. ಆದ್ದರಿಂದ ಈ ಶಿಕ್ಷಕರುಗಳಿಗೆ ಬಾಕಿ ಇರುವ ವೇತವನ್ನು ಶೀಘ್ರ ಬಿಡುಗಡೆ ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ವಸತಿ ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಪ್ರಾಂಶುಪಾಲರಿಗೆ ವೇತನ ಬಿಡುಗಡೆ ಮಾಡದಿರುವ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**13. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮಂಡನೆ**

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

“2021ನೇ ಜನವರಿ, 28 ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.”

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**(ಸದನವು ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 01ನೇ ಫೆಬ್ರವರಿ ಮಾಹೆ 2021ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”